ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

'ಆಧಾರ್'ಗೆ ಬಲಿ
ಜಾರ್ಖಂಡ್ ಬಾಲಕಿ
ಸಂತೋಷಿ



ಸಂಪುಟ 11 | ಸಂಚಿಕೆ 44 | ಪುಟ 16 | ಅಕ್ಟೋಬರ್ 23–29, 2017 | ರೂ. 10/-

web: www.janashakthi.co.in e-mail : js_weekly@yahoo.com



150 ವರ್ಷ ಹಳೆಯ 'ಕ್ಯಾಪಿಟಲ್' ಏಕೆ ಓದಬೇಕು?



ತಾಜ್ ಮೇಲೆ ಸಂಘಿ ವಕ್ರದೃಷ್ಟಿ



ಮಳೆಗೆ ಕೊಚ್ಚಿಹೋದ 'ನಗರಾಭಿವೃದ್ಧಿ'

ಕರಾವಳಿ ಸೌಹಾರ್ದ ಕರ್ನಾಟಕ ಸಮಾವೇಶ



ಬಿಜೆಪಿ 'ಫ್ಲಾಪ್ ಯಾತ್ರೆ'





ವಾರ್ಲಿ ಆದಿವಾಸಿ ಬಂಡಾಯ 72ನೇ ವಾರ್ಷಿಕ

ಬಿಜೆಪಿಯ ಫ್ಲಾಪ್ ಯಾತ್ರೆ: ಕುಗ್ಗುತ್ತಿರುವ ಜನಪ್ರಿಯತೆಯಿಂದಾಗಿ ಎಡಶಕ್ತಿಗಳ ಮೇಲೆ ದಾಳಿ

–ಸಿಪಿಐ(ಎಂ) ಕೇಂದ್ರ ಸಮಿತಿ

ಅಕ್ಟೋಬರ್ 14 ರಿಂದ 16ರ ವರೆಗೆ ನವದೆಹಲಿಯಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ಕೇರಳದಲ್ಲಿ ಬಿಜೆಪಿಯದ್ದು ಫ್ಲಾಪ್ ಯಾತ್ರೆ ಎಂದು ವರ್ಣಿಸಿದೆ. ಸಭೆಯ ನಂತರ ನೀಡಿರುವ ಅದರ ಹೇಳಿಕೆ ರಾಜ್ಯದಲ್ಲಿ ಹಿಂಸಾಚಾರವನ್ನು ಹರಡಲು ಬಿಜೆಪಿ ಹಲವು ರೀತಿಗಳಲ್ಲಿ ಉದ್ರೇಕಕಾರಿಯಾಗಿ ವರ್ತಿಸಿದರೂ ಅದರ ಪಿತೂರಿಯನ್ನು ಕೇರಳದ ಜನತೆ ವಿಫಲಗೊಳಿಸಿದ್ದಾರೆ ಎಂದು ಪ್ರಶಂಸಿಸಿದೆ. ಆರಂಭದ ಹಂತದಲ್ಲೆ ಯಾತ್ರೆಗೆ ಸಿಕ್ಕ ಉಪೇಕ್ಷೆಯ ಪ್ರತಿಕ್ರಿಯೆ ಬಿಜೆಪಿ ಅಧ್ಯಕ್ಷರು ನಡುವೆಯೇ ಯಾತ್ರೆ ಬಿಟ್ಟು ದಿಲ್ಲಿಗೆ ಹಿಂದಿರುಗುವಂತೆ ಮಾಡಿದೆ ಎಂದು ಹೇಳಿದೆ.

ಕೇರಳದಲ್ಲಿ ಮತ್ತೆ–ಮತ್ತೆ ಕಾಣ ಬರುತ್ತಿರುವ ರಾಜಕೀಯ ಹಿಂಸಾಚಾರಕ್ಕೆ ಆರೆಸ್ಸೆಸ್–ಬಿಜೆಪಿಯ ಭಯೋತ್ಪಾದನೆಯೇ ಹೊಣೆ ಎಂಬದು ಕೇರಳದ ಜನತೆಗೆ ತಿಳಿದಿದೆ. ವಾಸ್ತವವಾಗಿ ಈ ಹಿಂಸಾಚಾರವನ್ನು ಆರೆಸ್ಸೆಸ್‌ನವರೇ ನಾಲ್ಕುವರೆ ದಶಕಗಳ ಹಿಂದೆ ಆರಂಭಿಸಿದ್ದು. ಎಲ್‌ಡಿಎಫ್ ಅಧಿಕಾರಕ್ಕೆ ಬಂದಾಗಲೆಲ್ಲ ಇದನ್ನು ಮತ್ತಷ್ಟು ಹರಡುವ ಪ್ರಯುತ್ನ ನಡೆದಿದೆ. ಇವಕ್ಕೆಲ್ಲ ಸಾಕಷ್ಟು ದಾಖಲೆಗಳಿವೆ.

ಹದಿನೈದು ದಿನಗಳ ಈ ಯಾತ್ರೆ ನಕಾರಾತ್ಮಕ ಪರಿಣಾಮವನ್ನೇ ಉಂಟು ಮಾಡಿದೆ ಎಂಬುದನ್ನು ವೆಂಗರ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಫಲಿತಾಂಶ ತೋರಿಸಿದೆ. ಅಲ್ಲಿ ಬಿಜೆಪಿಯ ಮತಗಳು ತೀವ್ರವಾಗಿ ಇಳಿದವು, ಅದು ನಾಲ್ಕನೇ ಸ್ಥಾನಕ್ಕೆ ತಳ್ಳಲ್ಪಟ್ಟಿತು.

ದಿಲ್ಲಿಯಲ್ಲಿಯೂ ಬಿಜೆಪಿ 14 ದಿನಗಳ ಕಾಲ ಸಿಪಿಐ(ಎಂ) ಮುಖ್ಯ ಕಚೇರಿಯ ಎದುರು ಪ್ರತಿಭಟನೆಗಳನ್ನು ನಡೆಸಿತು. ಕೇಂದ್ರೀಯ ಸಚಿವರು ನೇತೃತ್ವ ನೀಡಿದರು.

ಕೇಂದ್ರದ ಆಳುವ ಪಕ್ಷ 14 ದಿನಗಳ ಕಾಲ ಸತತವಾಗಿ ಒಂದು ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷದ ಕೇಂದ್ರ ಕಚೇರಿಯ ಎದುರು ಮತಪ್ರದರ್ಶನ ನಡೆಸಿ ಸುತ್ತಲಿನ ವಾಹನ ಸಂಚಾರ, ಮಾರುಕಟ್ಟೆಗಳು ಮತ್ತು ಶಾಲೆಗಳ ಚಟುವಟಿಕೆಗಳನ್ನು ಅಸ್ತವ್ಯಸ್ತಗೊಳಿಸಿರುವುದು ಬಿಜೆಪಿ ಪ್ರಜಾಪ್ರಭುತ್ವಕ್ಕೆ ಏನೊಂದೂ ಗೌರವ ಕೊಡುತ್ತಿಲ್ಲ ಎಂಬುದನ್ನು, ಅದು ಎಂತಹ ಹೀನ ರಾಜಕೀಯಕ್ಕೆ ಇಳಿದಿದೆ ಎಂಬುದನ್ನು ಪ್ರದರ್ಶಿಸಿದೆ.

ಪ್ರತಿಭಟನೆಯ ಹೆಸರಲ್ಲಿ ಬಿಜೆಪಿ–ಆರೆಸ್ಸೆಸ್ ಗೂಡಾಗಳು ಭುವನೇಶ್ವರ, ವಿಶಾಖ ಪಟ್ಟನ, ಡೆಹ್ರಾಡೂನ್ ಮತ್ತಿತರ ಕಡೆಗಳಲ್ಲಿ ಸಿಪಿಐ(ಎಂ) ಕಚೇರಿಗಳ ಮೇಲೆ ದಾಳಿ ಮಾಡಿದ್ದಾರೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳು ಬಿಜೆಪಿ–ಆರೆಸ್ಸೆಸ್‌ನ ಕೋಮುವಾದಿ ರಾಜಕೀಯವನ್ನು, ನವ–ಉದಾರವಾಧಿ ಆರ್ಥಿಕ ಸುಧಾರಣೆಗಳನ್ನು, ಸಂಸದೀಯ ಪ್ರಜಾಪ್ರಭುತ್ವವನ್ನು ಹಾಗೂ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳನ್ನು ಬುಡಮೇಲು ಮಾಡುವುದನ್ನು, ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಗೆ ಅದರ ನಾಚಿಕಗೆಟ್ಟ ಶರಣಾಗತಿಯ ವಿರುದ್ಧ ಸತತವಾಗಿ ಹೋರಾಟ ನಡೆಸುತ್ತಿರುವುದರಿಂದಾಗಿಯೇ ಅವರು ಸಿಪಿಐಎಂ) ಮತ್ತು ಎಡಪಕ್ಷಗಳ ವಿರುದ್ಧ ತಮ್ಮ ಪ್ರಚಾರವನ್ನು ತೀವ್ರಗೊಳಿಸಿದ್ದಾರೆ ಎಂಬುದನ್ನು ಗಮನಿಸಿರುವ ಸಿಪಿಐ(ಎಂ) ಕೇಂದ್ರ ಸಮಿತಿ, ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಜನಪ್ರಿಯತೆ ಪಾತಾಳಕ್ಕಿಳಿದಿರುವುದರಿಂದ ಎಡಶಕ್ತಿಗಳ ಮೇಲೆ ಇಂತಹ ದಾಳಿಗಳಿಗೆ ಇಳಿದಿದೆ ಎಂಬ ತೀರ್ಮಾನಕ್ಕೆ ಬಂದಿದೆ.

ಸಿಪಿಐ(ಎಂ) ಇಂತಹ ದಾಳಿಗಳಿಗೇನೂ ಮಣಿಯುವುದಿಲ್ಲ ಎಂದಿರುವ ಕೇಂದ್ರ ಸಮಿತಿ ಈ ಸರಕಾರದ ಜನ–ವಿರೋಧಿ ಮತ್ತು ರಾಷ್ಟ್ರ–ವಿರೋಧಿ ಧೋರಣೆಗಳ ವಿರುದ್ಧ ತನ್ನ ಪ್ರಚಾರಾಂದೋಲನವನ್ನು ತೀವ್ರಗೊಳಿಸಲು ನಿರ್ಧರಿಸಿದೆ.



ಕೇರಳದಲ್ಲಿ ಆರೆಸ್ಸೆಸ್–ಬಿಜೆಪಿ ಗೂಂಡಾಗಳು ಸಿಪಿಐ(ಎಂ) ಕಾರ್ಯಕರ್ತರನ್ನು ಹತ್ಯೆ ಮಾಡುತ್ತಿರುವುದನ್ನು, ಖಂಡಿಸಿ, ಅಕ್ಟೋಬರ್ 17ರಂದು ದಿಲ್ಲಿಯಲ್ಲಿ ಬಿಜೆಪಿ ಮುಖ್ಯ ಕಛೇರಿಗೆ ಇನ್ನೊಂದು ಪ್ರತಿಭಟನಾ ಮೆರವಣಿಗೆ ನಡೆಯಿತು. ಇದರಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್‌ಯೆಚುರಿ, ಪೊಲಿಟ್‌ಬ್ಯುರೊ ಸದಸ್ಯರಾದ ಮಹಮ್ಮದ್ ಸಲೀಂ, ಸುಭಾಷಿಣಿ ಅಲಿ ಮತ್ತು ರಾಘವುಲು, ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರು ಮತ್ತು ನೂರಾರು ಕಾರ್ಯಕರ್ತರು ಭಾಗವಹಿಸಿದರು. 11, ಅಶೋಕ ರಸ್ತೆಯಲ್ಲಿರುವ ಬಿಜೆಪಿ ಕಚೆರಿ ಮುಂದೆ ಪ್ರತಿಭಟನಾ ಸಭೆ ನಡೆಯಿತು. ತಾವೇ ಕೊಲೆಗಡುಕ ರಾಜಕೀಯವನ್ನು ನಡೆಸಿ ಬೇರೆಯವರನ್ನು ದೂಷಿಸುತ್ತಿದ್ದಾರೆ, ಈ 'ಎನ್‌ಕೌಂಟರ್ ಸ್ಪೆಷಲಿಸ್ಟ್'ಗಳದ್ದು ವಾಸ್ತವವಾಗಿ ಆರೆಸ್ಸೆಸ್ ರಕ್ಷಾ ಯಾತ್ರೆ ಎಂದು ಸಭೆಯನ್ನುದ್ದೆಶಿಸಿ ಮಾತಾಡಿದ ಮುಖಂಡರು ವರ್ಣಿಸಿದರು.

ಜಯ ಅಮಿತ್ ಷಾ ವಿರುದ್ಧ ತನಿಖೆ ನಡೆಯಬೇಕು

2014ರ ಲೋಕಸಭಾ ಚುನಾವಣೆಗಳಲ್ಲಿ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ ಎಂದು ಗಂಟಲು ಹರಿಸಿ ಪ್ರಚಾರ ಮಾಡಿದ್ದರೂ ಬಿಜೆಪಿ 'ಕೇಂದ್ರದಲ್ಲಾಗಲೀ, ಅದರ ಆಳ್ವಿಕೆಯ ರಾಜ್ಯಗಳಲ್ಲಾಗಲೀ, ಮುನ್ನೆಲೆಗೆ ಬಂದ ಯಾವುದೇ ಭ್ರಷ್ಟಾಚಾರದ ಪ್ರಕರಣದಲ್ಲಿ ಕ್ರಮ ಕೈಗೊಂಡಿಲ್ಲ ಎಂಬುದನ್ನು ಗಮನಿಸಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಬಿಜೆಪಿ ಅಧ್ಯಕ್ಷ ಅಮಿತ್ ಷಾರವರ ಮಗ ಜಯ ಷಾರವರನ್ನು ಒಳಗೊಂಡ ಇತ್ತೀಚಿನ ಹಗರಣದಲ್ಲಿ ಆತನ ರಕ್ಷಣೆಗೆ ಕೇಂದ್ರ ಮಂತ್ರಿಗಳನ್ನೇ ಆ ಪಕ್ಷ ಕಣಕ್ಕಿಳಿಸಿದೆ. ಆದರೆ ಈ ಯಾವ ವಕ್ತಾರರೂ ಬಯಲಿಗೆ ಬಂದಿರುವ ಸಂಗತಿಗಳಿಗೆ ಸವಾಲು ಹಾಕಿಲ್ಲ.

ಮೋದಿ ಸರಕಾರ ಕೆಲವು ವ್ಯಾಪಾರಸ್ಥರು ಮತ್ತು ಪ್ರತಿಪಕ್ಷಗಳ ರಾಜಕಾರಣಿಗಳ ಭ್ರಷ್ಟಾಚಾರ ಮತ್ತು ಕಪ್ಪು ಹಣವನ್ನು ಬಿಳಿ ಮಾಡುವ ಪ್ರಕರಣಗಳಲ್ಲಿ ಮಾಡಿರುವಂತೆ, ಜಯ ಷಾರವರ ಪ್ರಕರಣವನ್ನೂ ಸಿಬಿಐ, ಇಡಿ(ಜಾರಿ ನಿರ್ದೇಶನಾಲಯ), ಮತ್ತು ಆದಾಯ ತೆರಿಗೆ ಇಲಾಖೆಗೆ ವಹಿಸಿಕೊಡುತ್ತಾರೆ ಎಂದು ನಿರೀಕ್ಷಿಸುವುದು ಬಹಳ ಕಷ್ಟಸಾಧ್ಯ. ಬಿಜೆಪಿ ಮುಖಂಡರ ವ್ಯಾಪಂ ಹಗರಣ, ಬಿಹಾರ ಭೂಹಗರಣ, ಪನಾಮ ಪೇಪರ್‌ಗಳು, ಸಹಾರ–ಬಿರ್ಲಾ ಡೈರಿಗಳು, ಲಲಿತ್ ಮೋದಿ ಪ್ರಕರಣ ಇತ್ಯಾದಿಗಳಲ್ಲಿಯೂ ಸರಕಾರ ಉದ್ದೇಶಪೂರ್ವಕ ವಾಗಿಯೇ ಯಾವುದೇ ಕ್ರಮಗಳನ್ನು ಆರಂಭಿಸಲು ನಿರಾಕರಿಸುತ್ತಿದೆ.

ಮೋದಿ ಸರಕಾರ ಈ ಎಲ್ಲ ಪ್ರಕರಣಗಳಲ್ಲೂ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಕೇಂದ್ರಸಮಿತಿ ಆಗ್ರಹಿಸಿದೆ.

ಕಾನೂನುಬಾಹಿರ ಖಾಸಗಿ ಪಡೆಗಳಿಗೆ ಕಾನೂನುಬದ್ಧತೆ

ಗೋರಕ್ಷಕರೆಂಬ ಮುಖವಾಡ ಹಾಕಿಕೊಂಡು ಓಡಾಡಿಕೊಂಡಿರುವ, ದಲಿತರು ಮತ್ತು ಅಲ್ಪಸಂಖ್ಯಾತ ಸಮುದಾಯದ ಸದಸ್ಯರ ಮೇಲೆ ಗುರಿಯಿಟ್ಟಿರುವ, ಲೂಟಿ, ಗಲಭೆ, ಹತ್ಯೆಗಳಲ್ಲಿ ತೊಡಗಿರುವ ಖಾಸಗಿ ಸೇನಗಳೊಂದಿಗೆ ಕಟ್ಟುನಿಟ್ಟಾಗಿ ವರ್ತಿಸುವ ಬದಲು ವಿವಿಧ ರಾಜ್ಯಗಳಲ್ಲಿ ಬಿಜೆಪಿ ಸರಕಾರಗಳ ಕ್ರಮಗಳು ವಾಸ್ತವವಾಗಿ ಈ ಪಡೆಗಳಿಗೆ ಕಾನೂನುಬದ್ಧತೆಯನ್ನು ಒದಗಿಸುತ್ತಿವೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆತಂಕದಿಂದ ಗಮನಿಸಿದೆ.

ಪುಟ 7 ನೋಡಿ

ರೈತರ ಸಾಲ ಪರಿಹಾರ ಮತ್ತು ಕನಿಷ್ಟ ಬೆಂಬಲ ಬೆಲೆ ಕಾಯ್ದೆಗೆ ನವಂಬರ್ 20 ರಂದು ಕಿಸಾನ್ ಮುಕ್ತಿ ಸಂಸದ್–ಎಐಕೆಎಸ್‌ಸಿಸಿ

ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ (ಎಐಕೆಎಸ್‌ಸಿಸಿ) ನವದೆಹಲಿಯ ಸಂಸತ್ ಮಾರ್ಗದಲ್ಲಿ ಒಂದು 'ಕಿಸಾನ್ ಮುಕ್ತಿ ಸಂಸತ್ತು' ನಡೆಸುವುದಾಗಿ ಪ್ರಕಟಿಸಿದೆ. ರೈತರ ಸಾಲ ಮನ್ನಾ ಮತ್ತು ಬೇಸಾಯದ ವೆಚ್ಚದ ಒಂದೂವರೆ ಪಟ್ಟಿನ ದರದಲ್ಲಿ ರೈತರ ಬೆಳೆಗಳ ಖರೀದಿಯ ಬೇಡಿಕೆಯ ಕುರಿತಂತೆ ಇದನ್ನು ನಡೆಸಲಾಗುತ್ತದೆ. ಈ ಕಿಸಾನ್ ಮುಕ್ತಿ ಸಂಸದ್‌ನಲ್ಲಿ ಈ ಕುರಿತು ಒಂದು ಮಸೂದೆಯನ್ನು ಅಂಗೀಕರಿಸಲಾಗುವುದು, ಅದನ್ನು ಸಂಸತ್ತಿನಲ್ಲಿ ಪಾಸು ಮಾಡಬೇಕು ಎಂದು ಆಗ್ರಹಿಸಿ ಸರಕಾರಕ್ಕೆ ಕಳಿಸಲಾಗುವುದು ಎಂದು ಎಐಕೆಎಸ್‌ಸಿಸಿ ಹೇಳಿದೆ.

ಈ ಮಸೂದೆಯನ್ನು ಎಲ್ಲ ರಾಜಕೀಯ ಪಕ್ಷಗಳಿಗೂ ಮತ್ತು ಅವುಗಳ ಸಂಸದೀಯ ಪ್ರತಿನಿಧಿಗಳಿಗೂ ಕಳಿಸಲಾಗುವುದು. ಇದನ್ನು ಬೆಂಬಲಿಸುವ ಲಿಖಿತ ಆಶ್ವಾಸನೆ ನೀಡುವ ಸಂಸದೀಯ ಪ್ರತಿನಿಧಿಗಳನ್ನು ಮಸೂದೆ ಪಾಸಾದ ನಂತರ ಕಿಸಾನ್ ಮುಕ್ತಿ ಸಂಸದನ್ನು ಉದ್ದೇಶಿಸಿ ಮಾತಾಡಲು ಆಹ್ವಾನಿಸಲಾಗುವುದು ಎಂದು ಅದು ಹೇಳಿದೆ.

ಅಕ್ಟೋಬರ್ 14 ರಂದು ಎಐಕೆಎಸ್‌ಸಿಸಿಯ ಸಂಯೋಜಕರಾದ ಬಿ ಎಂ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳ ಶೋಚನೀಯ ಸ್ಥಿತಿಯನ್ನು ಸಮಾಜ ಮತ್ತು ದೇಶದ ಮುಂದಿಡಲು ಕೂಡ ನಿರ್ಧರಿಸಲಾಯಿತು. 20 ರಾಜ್ಯಗಳ 180 ರೈತ ಸಂಘಟನೆಗಳ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು.

ಈ ಸಂಘಟನೆಗಳ ಮುಖಂಡರು ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ಇದುವರೆಗೆ ದೇಶದ 14 ರಾಜ್ಯಗಳಲ್ಲಿ ಸಂಚರಿಸಿರುವ 'ಕಿಸಾನ್ ಮುಕ್ತಿ ಯಾತ್ರಾ'ಗಳ ಅನುಭವಗಳನ್ನು ಹಂಚಿಕೊಳ್ಳಲಾಯಿತು. ಅಕ್ಟೋಬರ್ 29 ರಂದು ಕೊಲ್ಕತಾದಿಂದ ಆರಂಭವಾಗುವ ಪೂರ್ವ ಭಾರತ ಕಿಸಾನ್ ಮುಕ್ತಿ ಯಾತ್ರಾ ಪಶ್ಚಿಮ ಬಂಗಾಲ, ಒಡಿಶಾ, ಝಾರ್ಖಂಡ್ ಮತ್ತು ಬಿಹಾರ ಮೂಲಕ ಸಂಚರಿಸಲಿದೆ. ಗುವಾಹಾಟಿಯಿಂದ ಈಶಾನ್ಯ ಭಾರತ ಯಾತ್ರೆ ನವಂಬರ್ 12 ರಂದು ಹೊರಡುತ್ತದೆ. ಮತ್ತು ನವಂಬರ್ 10 ರಿಂದ 14 ರವರೆಗೆ ಮತ್ತೊಂದು ಜಾಥಾ ಪಂಜಾಬ್ ಮತ್ತು ಹರ್ಯಾಣದಲ್ಲಿ ಸಂಚರಿಸಲಿದೆ.

ಐಸಿಡಿಎಸ್: ನಗದು ವರ್ಗಾವಣೆ, ಪ್ಯಾಕೇಜ್ ಆಹಾರದ ಬಗ್ಗೆ ನಿಲುವು ಸ್ಪಷ್ಟಪಡಿಸಬೇಕು ಜನಗಳನ್ನು ತಪ್ಪುದಾರಿಗೆಳೆಯುವುದನ್ನು ನಿಲ್ಲಿಸಬೇಕು–ಅಂಗನವಾಡಿ ನೌಕರರ ಒಕ್ಕೂಟ

ಅಕ್ಟೋಬರ್ 12 ರಂದು ಕೇಂದ್ರ ಸರಕಾರದ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ ಒಂದು 'ಸ್ಪಷ್ಟೀಕರಣ' ಹೇಳಿಕೆ ನೀಡಿದೆ. ಐಸಿಡಿಎಸ್ (ಸಮಗ್ರೀಕೃತ ಮಕ್ಕಳ್ಳ ಅಭಿವೃದ್ಧಿ ಯೋಜನೆ)ಯ ಅಡಿಯಲ್ಲಿರುವ ಪೂರಕ ಪೌಷ್ಟಿಕಾಂಶ ಕಾರ್ಯಕ್ರಮವನ್ನು ಕಳಚಿ ಹಾಕುವ ಮತ್ತು ಅದರ ಬದಲಿಗೆ ಶರತ್ತುಬದ್ಧ ನಗದು ವರ್ಗಾವಣೆ(ಸಿಸಿಟಿ) ತರುವ ಬಗ್ಗೆ ಮಂತ್ರಾಲಯ ಯೋಚಿಸುತ್ತಿದೆ ಎಂದು ಮಾಧ್ಮಮಗಳಲ್ಲಿ ಪ್ರಕಟವಾಗಿರುವ ಸುದ್ದಿಗಳು ನಿಜಸಂಗತಿಗಳನ್ನು ಆಧರಿಸಿಲ್ಲ ಎಂದು ಈ ಹೇಳಿಕೆ ತಿಳಿಸುತ್ತದೆ.

ಹಾಗಿದ್ದರೆ ಸ್ವತಃ ಮಂತ್ರಿಗಳು ಸಪ್ಟಂಬರ್ 19 ರಂದು 130 ಜಿಲ್ಲೆಗಳ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುತ್ತ ಅಂಗನವಾಡಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡುವುದನ್ನು ನಿಲ್ಲಿಸಿ 20 ವರ್ಷಗಳಾಗಿವೆ, ಆದ್ದರಿಂದ ಪೌಷ್ಟಿಕಾಂಶ ಪ್ಯಾಕೇಟುಗಳನ್ನು ಅಂಚೆ ಕಚೇರಿಗಳ ಮೂಲಕ ತಲುಪಿಸಿ ಮಂತ್ರಾಲಯ ಸೂಚಿಸಿರುವುದಾಗಿ ಹೇಳಿದ್ದೇಕೆ? ಈ ಮಂತ್ರಾಲಯದ ಕಾರ್ಯದರ್ಶಿಗಳು ಐಸಿಡಿಎಸ್ ಅಡಿಯಲ್ಲಿ ನೇರ ನಗದು ವರ್ಗಾವಣೆಯ ಬಗ್ಗೆ ಯೋಚಿಸಲಾಗುತ್ತಿದೆ, ಈ ಬಗ್ಗೆ ಬೇಗನೇ ಒಂದು ನಿರ್ಧಾರವನ್ನು ಕೈಗೊಳ್ಳಲಾಗುವುದು ಎಂದೇಕೆ ಹೇಳಿದರು?

ಇದು ಅಖಿಲ ಭಾರತ ಅಂಗನವಾಡಿ ನೌಕರರು ಮತ್ತು ಸಹಾಯಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎ.ಆರ್ ಸಿಂಧು ಈ ಕುರಿತ ಪ್ರತಿಕಾ ಹೇಳಿಕೆಯಲ್ಲಿ ಕೇಳಿರುವ ಪ್ರಶ್ನೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ ಈ ಎರಡೂ ಹೇಳಿಕೆಗಳನ್ನು ನಿರಾಕರಿಸಿಲ್ಲ. ವಾಸ್ತವವಾಗಿ ಈ ಎರಡು ಹೇಳಿಕೆಗಳಿಗೆ ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಕಾರ್ಯಕರ್ತರಿಂದ ವ್ಯಾಪಕ ಪ್ರತಿಭಟನೆಗಳು ಬಂದ ಹಿನ್ನೆಲೆಯಲ್ಲಿ ಮೇಲೆ ಹೇಳಿದ ಅಕ್ಟೋಬರ್ 12ರ 'ಸ್ಪಷ್ಟೀಕರಣ' ಹೇಳಿಕೆ ಬಂದಿದೆ. ಆದರೆ ಇದರಲ್ಲಿ ಮೇಲೆ ಹೇಳಿರುವ ಎರಡು ಪ್ರಶ್ನೆಗಳಿಗೂ ಉತ್ತರ ಸಿಗುತ್ತಿಲ್ಲ.

ಒಂದೇ ಸಮಯದಲ್ಲಿ ವಿಭಿನ್ನ ಹೇಳಿಕೆಗಳನ್ನು ನೀಡಿ ಜನಗಳ ದಾರಿ ತಪ್ಪಿಸುವದು ಆಳುವ ಮಂದಿಯ ಕಾರ್ಯತಂತ್ರವಾಗಿದೆ. ಇಲ್ಲಿ ಮಂತ್ರಿಗಳು ಮತ್ತು ಇಲಾಖಾ ಕಾರ್ಯದರ್ಶಿಗಳ ಈ ಹೇಳಿಕೆಗಳಿಲ್ಲದೆ, ಜತೆಗೆ ಕೆಲವು ರಾಜ್ಯಗಳಿಗೆ ಮನೆಗೆ ಒಯ್ಯುವ ರೇಶನ್ ಬದಲು ಶರತ್ತು ಬದ್ಧ ನಗದು ವರ್ಗಾವಣೆಯ ಪದ್ಧತಿಯನ್ನು ಪರೀಕ್ಷಾರ್ಥ ಆರಂಭಿಸಬೇಕೆಂದು ಹೇಳಲಾಗಿದೆ. ಕೆಲವು ರಾಜ್ಯ ಸರಕಾರಗಳು ಇದನ್ನು ಆಧಾರ್‌ನೊಂದಿಗೆ ಜೋಡಿಸುವ ನಿರ್ದೇಶನಗಳನ್ನೂ ನೀಡಿವೆ.

ಆದ್ದರಿಂದ ಮಂತ್ರಾಲಯ ನಗದು ವರ್ಗಾವಣೆ(ನೇರ ಅಥವ ಶರತ್ತುಬದ್ಧ) ಮತ್ತು ಐಸಿಡಿಎಸ್‌ನಲ್ಲಿ ಪ್ಯಾಕ್ ಆದ ಆಹಾರ ಒದಗಿಸುವ ಬಗ್ಗೆ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು, ಈ ಬಗ್ಗೆ 'ಅಂತಿಮ ನಿರ್ಣಯ'ವನ್ನು ಯಾರು ಯಾವಾಗ ಕೈಗೊಳ್ಳುತ್ತಾರೆ ಎಂಬುದನ್ನು ತಿಳಿಸಬೇಕು, ಜನಗಳಲ್ಲಿ ಗೊಂದಲ ಹುಟ್ಟಿಸುವುದನ್ನು ನಿಲ್ಲಿಸಬೇಕು ಎಂದು ಸಿಂಧು ಅವರು ಆಗ್ರಹಿಸಿದ್ದಾರೆ. ಈ ನಡುವೆ ಐಸಿಡಿಎಸ್‌ನ್ನು ದುರ್ಬಗೊಳಿಸುವ ತಂತ್ರಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ಸಂಘಟನೆಯ ಘಟಕಗಳಿಗೆ ಕರೆ ನೀಡಿದ್ದಾರೆ.

ಮಳೆಗೆ ಕೊಚ್ಚಿ ಹೋದ “ನಗರಾಭಿವೃದ್ಧಿ”

ಸಂಪಾದಕೀಯ

ಹಲವು ವರ್ಷಗಳ ಬರದ ನಂತರ ಕಳೆದ ಎರಡು ತಿಂಗಳುಗಳಲ್ಲಿ ಸುರಿದ ಮಳೆ ಸಂತೋಷ ತರಬೇಕಾಗಿತ್ತು. ಆದರೆ ಪ್ರಕೃತಿಯ ಏರು–ಪೇರುಗಳು ಸೇರಿದಂತೆ ಪ್ರಕೋಪಗಳನ್ನು ಗಣನೆಗೆ ತೆಗೆದುಕೊಳ್ಳದ ಯೋಜನೆಯ ಅಭಾವ ಮತ್ತು ಹಲವು ಇತರ ಸಮಸ್ಯೆಗಳಿಂದಾಗಿ ಇದು ಒಂದು ಬೃಹತ್ ಸಮಸ್ಯೆಯಾಗಿ ಬಿಟ್ಟಿದೆ. ಅದರಲ್ಲೂ ಬೆಂಗಳೂರು ಮಳೆಗೆ ತತ್ತರಿಸಿ ಹೋಗಿದೆ. ಪ್ರತಿ ವರ್ಷ ಸಣ್ಣ ಮಳೆಗೂ ಬೆಂಗಳೂರಿನಲ್ಲಿ ತಗ್ಗು ಪ್ರದೇಶಗಳಲ್ಲಿ ಗುಡಿಸಲುಗಳಿಗೆ ನೀರು ನುಗ್ಗುವುದು ಸಾಮಾನ್ಯ. ಆದರೆ ಈ ಬಾರಿಯ ಮಳೆಗೆ ಗುಡಿಸಲುಗಳಷ್ಟೇ ಅಲ್ಲ, ದೊಡ್ಡ ದೊಡ್ಡ ಅಪಾರ್ಟಮೆಂಟುಗಳೂ ಜಲಾವೃತಗೊಂಡಿವೆ. ಇದರಲ್ಲಿ ಮಾನವ ನಿರ್ಮಿತ ತಪ್ಪುಗಳೇ ಜಾಸ್ತಿ.

ಗುಡಿಸಲು, ಕೊಳೆಗೇರಿಗಳಷ್ಟೇ ಅಲ್ಲ ದೊಡ್ಡ ದೊಡ್ಡ ಅಪಾರ್ಟಮೆಂಟುಗಳಿರುವ ಪ್ರದೇಶಗಳೂ ಕೆರೆಗಳಾಗಿದ್ದವು. ಹಲವು ಕಡೆ ನೀರನ್ನು ದಿನವೀಡಿ ಪಂಪ್ ಮಾಡಿ ತೆಗೆಯಬೇಕಾಯಿತು. ಹಲವರು ಮನೆ ಬಿಟ್ಟು ಬೇರೆ ಕಡೆಗೆ ಹೋಗಬೇಕಾಯಿತು. ಮಳೆನೀರಿನಲ್ಲಿ ಕೊಚ್ಚಿಕೊಂಡು ಹೋಗಿ ಹಲವು ಸಾವು–ನೋವುಗಳು ಸಂಭವಿಸಿವೆ. ಹಲವು ಕಟ್ಟಡಗಳು ಶಿಥಿಲವಾಗಿ ಅಪಾಯಕಾರಿಯಾಗಿವೆ. ಸತತ ಮಳೆಯಿಂದ ರಸ್ತೆಯಲ್ಲಿ ಗುಂಡಿಗಳು ಬಿದ್ದು, ಕತ್ತಲಲ್ಲಿ ಅಥವಾ ತುಂಬಿದ ನೀರಿನಿಂದ ಗೊತ್ತಾಗದೆ ಹಲವು ಗುಂಡಿಗಳು ಮಾನವ ಬಲಿ ತೆಗೆದುಕೊಂಡಿವೆ. ಮಳೆ ಬಂದ ಸಂಜೆಗಳಲ್ಲಿ ಬೆಂಗಳೂರಿನ ಪ್ರಮುಖ ರಸ್ತೆಗಳಲ್ಲಿ ಗಂಟೆಗಟ್ಟಲೆ ಟ್ರಾಫಿಕ್ ಜಾಮ್ ಗಳಾಗಿವೆ.

ಇದಕ್ಕೆಲ್ಲ ಕಾರಣ, ನೆಲಕ್ಕೆ ಬಿದ್ದ ನೀರು ಇಂಗಲು ಅಥವಾ ಸರಾಗವಾಗಿ ಹರಿದು ಹೋಗಲು ಸಮರ್ಪಕ ವ್ಯವಸ್ಥೆಯೇ ಇಲ್ಲದಿರುವುದು. ರಾಜಕಾಲುವೆಗಳೆಲ್ಲ ಒತ್ತುವರಿಯಾಗಿವೆ. ಮೋರಿಗಳು, ಕಿರು ಕಾಲುವೆಗಳನ್ನು ತೊಟ್ಟಿಗಳೆಂದು ಭಾವಿಸಿ ಕಸ ಎಸೆಯುವ ಜಾಗಗಳಾಗಿವೆ. ಸಣ್ಣ ಪುಟ್ಟ ಮೋರಿಗಳಲ್ಲಿ ಹೂಳು, ಕಸ ತುಂಬಿಕೊಂಡಿವೆ. ಕೆರೆಗಳನ್ನು ಮುಚ್ಚಿ ಬೇರೆ ಬೇರೆ ಉದ್ದೇಶಗಳಿಗೆ ಬಳಸಲಾಗುತ್ತಿದೆ. ಜಲ ಸಂಗ್ರಹವಾಗಲು ಅವಕಾಶವನ್ನೇ ಕೊಟ್ಟಿಲ್ಲ. ಇಡೀ ನಗರವನ್ನೇ ಕಾಂಕ್ರೀಟ್ ಕಾಡಾಗಿ ಪರಿವರ್ತಿಸಿದ್ದರ ಪರಿಣಾಮ ಇದು. ಭಾರತೀಯ ವಿಜ್ಞಾನ ಮಂದಿರದ ಸಂಶೋಧಕರ ವರದಿಯ ಪ್ರಕಾರ ಬೆಂಗಳೂರಿನ ಭೂಪ್ರದೇಶದ ಶೇ 78ರಷ್ಟು ಭಾಗ ಕಾಂಕ್ರೀಟೀಕರಣವಾಗಿದೆ. ಅಂದರೆ ಕಟ್ಟಡಗಳು, ಸಿಮೆಂಟ್ ಮೇಲ್ಮೈ, ಟಾರ್ ರಸ್ತೆ, ಫುಟ್ಪಾತುಗಳು ಮಣ್ಣಿನ ನೆಲವನ್ನು ಮುಚ್ಚಿಬಿಟ್ಟಿವೆ. ನೀರು ಇಂಗಲು ಜಾಗವೇ ಕಡಿಮೆಯಾಗಿದೆ. ಕಡ್ಡಾಯ ಮಳೇನೀರು ಕೊಯ್ಲು ಯೋಜನೆ ಬರಿಯ ಕಾಗದದ ಮೇಲಿದೆಯಷ್ಟೇ. ಸಣ್ಣ ಮಳೆಯನ್ನೇ ತಡೆದುಕೊಳ್ಳದ ಈ ನಗರವನ್ನು ಇನ್ನು ದೊಡ್ಡ ಮಳೆ ಮುಳುಗಿಸದೇ ಬಿಡುತ್ತದಾ? ರಾಜಕಾಲುವೆಗಳನ್ನು ಸುಸ್ಥಿತಿಯಲ್ಲಿ ಇಡಬೇಕಾಗಿತ್ತು. ಮೋರಿಗಳಲ್ಲಿನ ಹೂಳನ್ನು ತೆಗೆಸಿ ಸ್ವಚ್ಛ ಮಾಡಬೇಕಾಗಿತ್ತು. ಮುಖ್ಯವಾಗಿ ಈ ಕೆಲಸ ಬೇಸಿಗೆಯಲ್ಲೇ ನಡೆಯಬೇಕಾಗಿತ್ತು. ಆದರೆ ಎಂದಿನಂತೆ ಮಳೆ ನೀರು ನಗರವನ್ನೇ ಮುಳುಗಿಸಿದ ನಂತರ ಹೂಳು ತೆಗೆಯುವ ಕೆಲಸ ನಡೆದಿದೆ.



ಬೆಂಗಳೂರಲ್ಲಿ ರಸ್ತೆ ನಿರ್ಮಾಣಕ್ಕೆ, ಗುಂಡಿ ಮುಚ್ಚಲಿಕ್ಕೆ ಕೋಟಿಗಟ್ಟಲೆ ಹಣ ಖರ್ಚಾಗಿದೆ. ಗುಂಡಿ ಮುಚ್ಚುವುದಕ್ಕಾಗಿಯೇ ಪ್ರತಿ ವರ್ಷ ಕೋಟಿಗಟ್ಟಲೆ ಹಣ ಖರ್ಚಾಗಿದೆ. 2017–18ನೇ ಸಾಲಿನಲ್ಲಿ ಹೀಗೆ ಮೀಸಲಿಟ್ಟ ಹಣ ರೂ. 48 ಕೋಟಿ. ಹೋದ ಸಾಲಿನ ಬಜೆಟ್ನಲ್ಲಿ ಗುಂಡಿ ಮುಚ್ಚಲು ರೂ. 14.85 ಕೋಟಿ, ಪ್ರಮುಖ ರಸ್ತೆಗಳ ದುರಸ್ತೆಗೆ ರೂ. 31 ಕೋಟಿ, ಯಂತ್ರಗಳ ಸಹಾಯದಿಂದ ಗುಂಡಿ ಮುಚ್ಚಲು ರೂ. 6.31 ಕೋಟಿ ತೆಗೆದಿಡಲಾಗಿತ್ತು. ಬೆಂಗಳೂರು ಮಹಾ ನಗರದಲ್ಲಿನ ದೊಡ್ಡ, ಮಧ್ಯಮ ಮತ್ತು ಸಣ್ಣ ರಸ್ತೆಗಳ ಒಟ್ಟು ಉದ್ದವೇ 14,118 ಕಿ.ಮೀ.ಗಳಷ್ಟಿದೆ. ಈ ಸಲ ರಸ್ತೆ ನಿರ್ಮಾಣ–ನಿರ್ವಹಣೆಗೆ ರೂ. 4 ಸಾವಿರ ಕೋಟಿ ಇಡಲಾಗಿದೆ. ಇದು ಬಜೆಟಿನ ಶೇ. 45ರಷ್ಟು. ಆದರೂ ಗುಂಡಿಗಳಿಗೇನೂ ಕೊರತೆ ಇಲ್ಲ. ಹೋದ ವರ್ಷ 4 ಸಾವಿರ ಗುಂಡಿಗಳಿದ್ದವು; ಈ ಸಲ ದುಪ್ಪಟ್ಟು ಆಗಿದೆಯಂತೆ. ಮುಖ್ಯ ಮತ್ತು ಉಪ ರಸ್ತೆಗಳಲ್ಲಿ 9400 ಗುಂಡಿಗಳು ಲೆಕ್ಕಕ್ಕೆ ಸಿಕ್ಕಿವೆಯಂತೆ. ಕೆಲಸದ ಕಳಪೆ ಗುಣಮಟ್ಟ ಮತ್ತು ಬಹುಶಃ ಕೆಲಸ ಮಾಡದೆ ಕಾಮಗಾರಿ ಹಣ ಪಾವತಿ ಆಗುವ ಭ್ರಷ್ಟಾಚಾರದಿಂದಾಗಿಯೇ ಈ ಬೃಹತ್ ಸಮಸ್ಯೆ ಎದುರಾಗಿರುವುದು. ಈ ಗುಂಡಿಗಳಿಂದಾಗಿ ಬೆನ್ನುಮೂಳೆಗೆ ಹಾನಿ ಸೇರಿದಂತೆ ಹಲವು ಬಗೆಯ ಮೂಳೆ ಮುರಿತ, ನೋವುಗಳನ್ನು ಅನುಭವಿಸುತ್ತಿರುವಂತಹ ಸರಾಸರಿ 25 ಪ್ರಕರಣಗಳು ಬೆಂಗಳೂರಿನ ಆಸ್ಪತ್ರೆಗಳಲ್ಲಿ ತಿಂಗಳಿಗೆ ವರದಿಯಾಗುತ್ತಿವೆ ಎಂದು ಅಂಕಿಅಂಶಗಳು ಹೇಳುತ್ತಿವೆ. ಈ ಮಹಾನಗರದಲ್ಲಿ ವಾಹನಗಳನ್ನು ಬಳಸುವ ಬಹಳಷ್ಟು ಜನರ ಬೆನ್ನು, ಮೂಳೆ ನೋವಿಗೆ ಮುಖ್ಯ ಕಾರಣವೇ ಗುಂಡಿಗಳಿಂದ ತುಂಬಿದ ರಸ್ತೆಗಳು.

ಕಳಪೆ ಕಾಮಗಾರಿ, ಭ್ರಷ್ಟಾಚಾರಗಳಷ್ಟೇ ಅಲ್ಲ, ಮಳೆ ಮತ್ತು ಚರಂಡಿಯ ನೀರು ಹರಿದು ಹೋಗದೆ ರಸ್ತೆ ಮೇಲೆ ನಿಲ್ಲುವುದು ಕೂಡ ಗುಂಡಿ ಬೀಳಲು ಪ್ರಮುಖ ಕಾರಣ. ಅಂದರೆ ನಮ್ಮ ರಸ್ತೆಗಳ ವಿನ್ಯಾಸ ಸರಿ ಇಲ್ಲ. ನೀರು ಹರಿದು ಹೋಗಲು ವ್ಯವಸ್ಥೆ ಇಲ್ಲ. ಟಾರ್ ಮೇಲೆ ನೀರು ನಿಂತರೆ ರಸ್ತೆ ಕಿತ್ತುಕೊಂಡು ಬರುತ್ತದೆ. ರಸ್ತೆ ಕಾಮಗಾರಿಯಲ್ಲಿ ತೊಡಗಿಕೊಂಡ ಸಾಮಾನ್ಯ ಕಾರ್ಮಿಕನಿಗೂ ಈ ವಿಷಯ ಗೊತ್ತು. ಆದರೆ ಎಂಜಿನಿಯರುಗಳಿಗೆ, ಕಂಟ್ರಾಕ್ಟರುಗಳಿಗೆ ಮತ್ತು ಅವರ ಮೇಲೆ ನಿಗಾ ಇಡಬೇಕಾದ ಜನಪ್ರತಿನಿಧಿಗಳಿಗೆ ಮಾತ್ರ ಹೀಗೆ ನೀರು ಹರಿದು ಹೋಗುವುದು ಬೇಕಿಲ್ಲ. ಗುಂಡಿ ಬಿದ್ದಷ್ಟು, ಪದೇ ಪದೇ ದುರಸ್ತಿ ಆದಷ್ಟೂ ಅವರ ಜೇಬು ತುಂಬುತ್ತದೆ. ಗುಂಡಿ ಮುಚ್ಚಲು ಪಾಲಿಕೆ ಈಗ ಮೈಕ್ರೊ ಮಿಲ್ಲಿಂಗ್ ಮೆಷಿನ್ ತರಿಸಿದೆ. ಈ ಯಂತ್ರವು ರಸ್ತೆಯ ಇಕ್ಕೆಲಗಳನ್ನು ಕತ್ತರಿಸಿ ಸ್ವಲ್ಪ ಇಳಿಜಾರು ಮಾಡಿ ನೀರು ಹರಿದು ಹೋಗುವಂತೆ ಮಾಡುತ್ತದೆ. ಇನ್ನಾದರೂ ಮೂಲದಲ್ಲಿಯೇ ಗುಣಮಟ್ಟದ ರಸ್ತೆಗಳನ್ನು ವೈಜ್ಞಾನಿಕವಾಗಿ ನಿರ್ಮಿಸಬೇಕು. ಆಗಮಾತ್ರ ಸಣ್ಣ ಮಳೆಗೂ ದೊಡ್ಡ ದೊಡ್ಡ ಗುಂಡಿಗಳು ಸೃಷ್ಟಿಯಾಗುವುದನ್ನು ತಪ್ಪಿಸಬಹುದು.

ಮಳೆಗಾಲದಲ್ಲಿ ಮಳೆ ಬರುವುದು ಸಹಜ. ಅದು ಪ್ರಕೃತಿ ನಿಯಮ. ಮಳೆ ಯಾವಾಗ, ಎಷ್ಟು ಸುರಿಯಬಹುದು ಎಂಬುದನ್ನು ಅಂದಾಜು ಮಾಡುವಷ್ಟು ಈಗ ವಿಜ್ಞಾನ ಮುಂದುವರಿದಿದೆ. ಆದರೂ ಮಳೆ ವಿಕೋಪ ಎದುರಿಸಲು ಕಷ್ಟವಾಗುತ್ತಿದೆ. ನಗರಗಳ ಬೆಳವಣಿಗೆ ವ್ಯವಸ್ಥಿತವಾಗಿ, ಯೋಜನಾಬದ್ಧವಾಗಿ ಇರಬೇಕು. ಆದರೆ ಭ್ರಷ್ಟಗೊಂಡಿರುವ ಆಡಳಿತಶಾಹಿ, ದುರಾಸೆ ನಗರಗಳ ಯೋಜಿತ ಬೆಳವಣಿಗೆಯನ್ನು ಬುಡಮೇಲು ಮಾಡುತ್ತಿವೆ. ಇವೆಲ್ಲದರ ಮೂಲ ಕಾರಣ ಕಳೆದ 2–3 ದಶಕಗಳಲ್ಲಿ ರಾಜ್ಯ ಸರಕಾರ ಮತ್ತು ಬಿಬಿಎಂಪಿಗಳಲ್ಲಿ ಹಿಡಿತ ಸಾಧಿಸಿ ಪ್ರಬಲವಾಗಿರುವ ರೀಯಲ್ ಎಸ್ಟೇಟ್ ಮಾಫಿಯಾ. ಈ ಮಾಫಿಯಾ ಬೂರ್ಜ್ವಾ ಪಕ್ಷಗಳ ರಾಜಕಾರಣಿಗಳು, ಅಧಿಕಾರಿಗಳು, ಕಂಟ್ರಾಕ್ಟರುಗಳು, ರೀಯಲ್ ಎಸ್ಟೇಟ್ ಉದ್ಯಮಿಗಳ ದುಷ್ಟಕೂಟ. ಇದ್ದ ಬದ್ದ ನಗರ ಯೋಜನೆಗಳನ್ನು ನೀತಿಗಳನ್ನು ತಮ್ಮ ಸೂಪರ್ ಲಾಭಕ್ಕಾಗಿ ಈ ಮಾಫಿಯಾ ತಿರುಚುತ್ತದೆ.

ಮಳೆ ನೀರಿನ ಇಂಗುವಿಕೆ, ಸರಾಗ ಹರಿಯುವಿಕೆಗೆ ಕಾಯಂ ವ್ಯವಸ್ಥೆ ಮಾಡಬೇಕು. ಕೆರೆ, ಕಾಲುವೆ ಒತ್ತುವರಿಯನ್ನು ಮುಲಾಜಿಲ್ಲದೆ ತೆರವು ಗೊಳಿಸಬೇಕು. ಕಾಲುವೆಗಳ ಹೂಳೆತ್ತುವ ಕೆಲಸವನ್ನು ಬೇಸಿಗೆಯಲ್ಲಿಯೇ ಮುಗಿಸಬೇಕು. ಬೆಂಗಳೂರಿನಂತಹ ನಗರದಲ್ಲಿ ಸುರಿಯುವ ಮಳೆ ಬದುಕನ್ನೇ ಏರುಪೇರು ಮಾಡದಂತೆ ತಡೆಯುವುದು ಸಾಧ್ಯವಿದೆ. ಇದಕ್ಕೆ ಎಲ್ಲಾ ಆಯಾಮಗಳನ್ನು ಗಮನಿಸುವ ದೂರಗಾಮಿ ನಗರ ಯೋಜನೆ ರಚಿತವಾಗಬೇಕು. ಇದರಲ್ಲಿ ನಾಗರಿಕರ ಪಾಲುಗೊಳ್ಳುವಿಕೆ ಇರಬೇಕು. ಇದಕ್ಕಾಗಿ ನಾಗರಿಕ ಸಂಘಟನೆಗಳ ಸಂಘಟಿತ ಚಳುವಳಿಯ ಶಕ್ತಿಯ ಒತ್ತಡ ಬೇಕು ಮತ್ತು ಅದಕ್ಕೆ ಈ ದುಷ್ಟಕೂಟದ ಗೋಣು ಮುರಿಯುವ ರಾಜಕೀಯ ಹೊಡೆತ ಕೊಡಲು ಸಾಧ್ಯವಾಗಬೇಕು.

ಬೃಹತ್ ಸುಳ್ಳು, ಬೃಹತ್ ಭ್ರಮೆ, ಬೃಹತ್ ದ್ವೇಷಗಳ ಮೇಲೆ ನಡೆಯುತ್ತಿರುವ ಆರೆಸ್ಸೆಸ್ – ಬಿಜೆಪಿ ದರ್ಬಾರು

ದೇವನೂರು ಮಹಾದೇವರವರೊಡನೆ ಮೊನ್ನೆ ಮೈಸೂರಿನ ರಂಗಾಯಣದ ಕ್ಯಾಂಟೀನಿನಲ್ಲಿ ಮಾತನಾಡುತ್ತಿರುವಾಗ ದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಎರಗಿರುವ ಅಪಾಯವನ್ನು ತೊಡೆಯಲು ಬಿಜೆಪಿಯ ಸರ್ವಾಧಿಕಾರದ ಮೂಲವಾದ ದ್ವೇಷ, ಭ್ರಮೆ, ಸುಳ್ಳುಗಳ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡಬೇಕು ಎಂದರು. ಈ ಬಗ್ಗೆ ಈಗಲೇ ಏನೂ ಹೇಳುವುದು ಬೇಡ ಯೋಚನೆ ಮಾಡಿ ಎಂದರು.

ಅದನ್ನು ಕೇಳಿಸಿಕೊಂಡ ನಮ್ಮ ಮೇಜಿನ ಸುತ್ತ ಇದ್ದ ನಾಲ್ಕಾರು ಜನರ ಮನಸ್ಸಿನಲ್ಲಿಯೂ ಈ ವಿಚಾರ ಮೊಳಕೆಯೊಡೆಯುತ್ತಿರಬೇಕು.

ನನ್ನ ಮನಸ್ಸಿನಲ್ಲಿ ಈ ಮೂರು ಪದಗಳು ಬಿಂಬಿಸುವ ಮನೋ “ವ್ಯಾಪಾರ” ಕ್ಕೆ ಸಂಬಂಧಿಸಿದ ವಿಷಯಗಳನ್ನು ಆಳುವ ಜನರು ಹೇಗೆಲ್ಲಾ ತಮ್ಮ ಅಧಿಕಾರಾಕಾಂಕ್ಷೆಗೆ, ದುರ್ಲಾಭಕ್ಕೆ ಬಳಸಿಕೊಂಡಿದ್ದಾರೆ ಎಂಬುದು ತೆರೆದುಕೊಳ್ಳುತ್ತಾ ಹೋಯಿತು.

ಈ ಸುಳ್ಳುಗಳ ಸುರಿಮಳೆ, ಅದರ ಮೇಲೆ ಭ್ರಮೆಯ ಬೆಳೆ ಸಂವಿಧಾವನ್ನು ಅಂಗೀಕರಿಸಿದ ಮೊದಲ ವರ್ಷಗಳಿಂದಲೇ ಆರಂಭವಾಯಿತು. ಸಂವಿಧಾನದಲ್ಲಿ ಅಂಬೇಡ್ಕರ್ ರವರು ಮತ್ತು ಕೆಲ ಪ್ರಜಾಸತ್ತಾತ್ಮಕ ಮನಸ್ಸಿನವರು ಸೇರಿಸಿದ ಹೊಸ ಮೌಲ್ಯಗಳಿಗೆ ತಿಲಾಂಜಲಿ ಕೊಡಲಾಯಿತು. ಅದಕ್ಕೆ ಬಹು ಮುಖ್ಯ ಸಾಕ್ಷಿ – ಅಸ್ಪೃಶ್ಯತೆಯ ನಿಷೇಧ, 1950 ರಲ್ಲಿಯೇ ನಿಷೇಧಗೊಂಡಿದ್ದರೂ ಇಂದೂ ಕೂಡ ದೇಶದ ಯಾವ ಮೂಲೆಯಲ್ಲಿಯೂ ನಿಷೇಧವಾಗದ ಅಸ್ಪೃಶ್ಯತೆ. ಸಂವಿಧಾನದ ರಕ್ಷಕರಾದ ರಾಷ್ಟ್ರ ಪತಿ, ಮೂರು ಮುಖ್ಯ ಅಂಗಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳಲ್ಲಿ ನಿಷೇಧವಾಗದ ಅಸ್ಪೃಶ್ಯತೆ. ಸಂಸದರು, ಶಾಸಕರು, ಪ್ರಧಾನ ಮಂತ್ರಿ, ಮಂತ್ರಿಮಂಡಲ ಕಾರ್ಯಾಂಗ, ಸುಪ್ರೀಂ ಕೋರ್ಟ್ ನ ಮುಖ್ಯ ನ್ಯಾಯಾಧೀಶರು, ಇಡೀ ನ್ಯಾಯಾಂಗದಲ್ಲಿ ನಿಷೇಧವಾಗದ ಅಸ್ಪೃಶ್ಯತೆ ಮತ್ತು ಮೂಡದ ಸಮಾನತೆ, ಭ್ರಾತೃ ಭಾವ. ಇದಕ್ಕಿಂತ ದೊಡ್ಡ ಸುಳ್ಳು ಬೇಕೇ. ಇದು ಮೂಡಿಸಿದ ಮಹಾಭ್ರಮೆ. ಇಂದು ನಮ್ಮ ದೇಶವನ್ನು ಕಾಡುತ್ತಿರುವ ದ್ವೇಷದ ರಾಜಕೀಯಕ್ಕೆ ಮೀಸಲಾತಿ ದ್ವೇಷದ ಮೂಲಕ ಈ ಸುಳ್ಳು ಎಷ್ಟು ದೊಡ್ಡ ಕಾಣಿಕೆ ನೀಡಿದೆ ಎಂಬ ಯೋಚನೆ ನನ್ನ ಮನಸ್ಸನೆಲ್ಲಾ ಅವರಿಸಿದೆ.

ಇನ್ನು ಈ ಎಪ್ಪತ್ತು ವರ್ಷಗಳಲ್ಲಿ ಅಧಿಕಾರ ನಡೆಸಿದವರು ಬಿತ್ತಿದ ಸುಳ್ಳುಗಳ ಸರಮಾಲೆ ಎಷ್ಟೋ! ಮೂಡಿಸಿದ ಭ್ರಮೆಗಳೆಷ್ಟೋ!

1952 ರ ಮೊದಲ ಚುನಾವಣೆಯಲ್ಲಿಯೇ ‘ನಯಾಜೀವನ್’ ಎಂಬುದು ಚುನಾವಣೆಯ ಪ್ರಧಾನ ಘೋಷಣೆ ಮತ್ತು ಸುಳ್ಳು. 1957 ರ ಚುನಾವಣೆಯಲ್ಲಿ ಸಮಾಜವಾದ ಎಂಬುದರ ಬಗ್ಗೆ ಏನೂ ಗೊತ್ತಿಲ್ಲದ ಜನರ ಮುಂದೆ ಸಮಾಜವಾದದ ಗಂಧವೇ ಇಲ್ಲದ ‘ಸಮಾಜವಾದೀ ರೀತಿಯ ಸಮಾಜ’ ನಮ್ಮ ಗುರಿ ಎಂದು ಮಹಾ ಸುಳ್ಳು ಹೇಳಿದರು.. ಜನರನ್ನು ಮಹಾಭ್ರಮೆಯಲ್ಲಿ ಮುಳುಗಿಸಿ ಗೆದ್ದರು. 1970 ರ ‘ಗರೀಬಿ ಹಠಾವೋ’ ಎಂದು ಹೇಳುತ್ತಲೇ ಗರೀಬಿಯನ್ನು ಬೆಳೆಸಿದ ಎಂಬ ಪ್ರಸಿದ್ಧ ಸುಳ್ಳಿನ ಬಗ್ಗೆ ಈಗಿನ ತಲೆಮಾರಿಗೆ ನೆನಪಿದೆ. ಇದೇ ನೆಪವನ್ನು ಬಳಸಿ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಅಲುಗಾಡಿಸಿದ ತುರ್ತು ಪರಿಸ್ಥಿತಿಯ ಪಾಠಗಳನ್ನು ದೇಶ ಮರೆಯಲು ಸಾಧ್ಯವೇ ಇಲ್ಲ.

1977 ರ ಚುನಾವಣೆಯಲ್ಲಿ ಪ್ರಜಾಪ್ರಭುತ್ವವನ್ನು ಮತ್ತೆ ಅರಳಿಸುವ ಮತ್ತು ಭ್ರಷ್ಟಾಚಾರ ತೊಲಗಿಸುವ ಭರವಸೆ ಇತ್ತು ಅಧಿಕಾರಕ್ಕೆ ಬಂದವರು ಹಿಂದಿನ ಸರ್ವಾಧಿಕಾರದ ಕೆಲ ಸರಪಳಿಗಳನ್ನು ಕಡಿದು ಹಾಕುತ್ತಲೇ ಇಂದಿನ ಪ್ರಜಾಪ್ರಭುತ್ವ ನಾಶದ ಬೀಜಗಳನ್ನು ಬಿತ್ತನೆ ಮಾಡಿದರು

1991 ರ ನಂತರವಂತೂ ಸುಳ್ಳುಗಳು ಮಹಾ ಸುಳ್ಳುಗಳಾದವು. ಈ ಜಾಗತೀಕರಣ ಕಾಲದ ಅಭಿವೃದ್ಧಿಯ ಮಹಾಸುಳ್ಳುಗಳ ಸುಳ್ಳುತನವನ್ನು ಮುಚ್ಚಿಬಿಡಲು ಸುಳ್ಳುಗಳ ಆಧಾರದ ಮೇಲೆ ಬೆಳೆಸಿದ ದ್ವೇಷವನ್ನುಜೊತೆಗೆ ಸೇರಿಸಿಕೊಳ್ಳಲಾಯಿತು. ಅಂಥಿನ ಎರಡು ಬೃಹತ್ ಸುಳ್ಳುಗಳು–ಬಾಬ್ರಿ ಮಸೀದಿ ನಾಶ ಮಾಡುವುದಿಲ್ಲವೆಂದು ಸುಪ್ರೀಂ ಕೋರ್ಟಿಗೆ ಬರೆದುಕೊಟ್ಟದ್ದು, ಬಾಬ್ರಿ ಮಸೀದಿ ರಕ್ಷಣೆ ಮಾಡುತ್ತೇವೆಂದು ಸರ್ಕಾರ ನಡೆಸುತ್ತಿದ್ದವರು ದೇಶಕ್ಕೆ ಅಭಯ ನೀಡಿದ್ದು. ಅನೇಕ ಸಣ್ಣ, ದೊಡ್ಡ ಸುಳ್ಳುಗಳು ಮತ್ತು ಈ ಬೃಹತ್ ಸುಳ್ಳುಗಳ ಗೊಬ್ಬರದ ಮೇಲೆ ಬೆಳೆದ ದ್ವೇಷದ ವಿಫುಲ ಬೆಳೆ. ಅದರ ವಿಷಫಲವನ್ನು ಇಂದು ನಾವೆಲ್ಲಾ ಅನುಭವಿಸುತ್ತಿದ್ದೇವೆ.

ಹೀಗೆ ಮಹಾ ಸುಳ್ಳುಗಳು ಬೃಹತ್ ಸುಳ್ಳುಗಳಾದವು. ಇಂದು ಸುಳ್ಳನ್ನೇ ಬಿತ್ತಿ ಭ್ರಮೆಯ ಬೆಳೆ ಬೆಳೆದು ದ್ವೇಷದ ಫಲವನ್ನು ಪಡೆಯುತ್ತಿದ್ದೇವೆ. ಈ ತ್ರಿವಳಿ ನಮ್ಮ ಬದುಕನ್ನು, ನಮ್ಮ ಸ್ವಾತಂತ್ರ್ಯವನ್ನು, ಅದರ ಫಲವಾದ ಪ್ರಜಾಪ್ರಭುತ್ವವನ್ನು, ಅದಕ್ಕೆ ಆಧಾರವಾದ ಸಂವಿಧಾನವನ್ನು ನಾಶಗೊಳಿಸತೊಡಗಿದೆ. ಈ ಸಂದರ್ಭದಲ್ಲಿ ತಕ್ಷಣದಲ್ಲಿ ಬೃಹತ್ ಸುಳ್ಳು, ಬೃಹತ್ ಭ್ರಮೆ, ಬೃಹತ್ ದ್ವೇಷಗಳ ಮೇಲೆ ನಮ್ಮ ಗಮನವೆಲ್ಲಾ ಕೇಂದ್ರೀಕರಣಗೊಂಡಿದೆ. ಇವುಗಳನ್ನು ತೊಡೆಯುವುದೇ ನಮ್ಮ ತಕ್ಷಣದ ಗುರಿ. ಆದರೆ ಈ ಬೃಹತ್ ಗಳು ತಂತಾನೆ ಉದ್ಭವಿಸಿದುವಲ್ಲ. ಸ್ವಾತಂತ್ರ್ಯಾ ನಂತರದ 70 ವರ್ಷಗಳ ಸುಳ್ಳು, ಭ್ರಮೆಗಳ ಬೆಳೆಯ ಫಲ ಎಂಬುದನ್ನು ಮರೆಯದಿರೋಣ.

–ಜಿ. ಎನ್. ನಾಗರಾಜ್

ವರದಿ: **ವಾಸುದೇವ ಉಚ್ಚಿಲ**

ಗಾಂಜಾ ಜಾಲದ ವಿರುದ್ಧ ಡಿವೈಎಫ್ಐ ಪ್ರತಿಭಟನೆ



ಉಳ್ಳಾಲ ಪ್ರದೇಶದಲ್ಲಿ ಗಾಂಜಾ ಮಾರಾಟ ಜಾಲದ ವಿರುದ್ಧ ವಿಸಿಲ್ ಬ್ಲೋವರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಉಳ್ಳಾಲ ಮುಕ್ಕಚ್ಚೇರಿಯ ಜುಬೈರ್ ಎಂಬ ಸಾಮಾಜಿಕ ಕಾರ್ಯಕರ್ತ ಕೆಲವು ದಿನಗಳ ಹಿಂದೆ ಗಾಂಜಾ ಮಾರಾಟ ಜಾಲದ ತಂಡವೊಂದರಿಂದ ಹತ್ಯೆಗೀಡಾಗಿದ್ದರು. ಆ ಪ್ರದೇಶದ ಶಾಸಕ ಹಾಗೂ ರಾಜ್ಯದ ಸಚಿವ ಅಬ್ದುಲ್ ಖಾದರ್ ಅವರು ಹಾಗೂ ಸ್ಥಳೀಯ ಪೋಲೀಸ್ ಅಧಿಕಾರಿಗಳು ಗಾಂಜಾ ಮಾರಾಟ ಮಾಫೀಯಾದ ಕೃತ್ಯವಲ್ಲವೆಂದು ಘೋಷಿಸಿದ್ದು, ಸ್ಥಳೀಯ ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಉಳ್ಳಾಲ ಪ್ರದೇಶದಲ್ಲಿ ಮಾದಕ ದ್ರವ್ಯ ವ್ಯಸನಕ್ಕೆ ಬಹಳ ಮಂದಿ ಪಕ್ಕಾಗಿದ್ದು, ಅದಕ್ಕಾಗಿ ಮಾನಸಿಕವಾಗಿ ಹಾಗೂ ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿರುವ ನೂರಾರು ಪ್ರಕರಣಗಳು ವರದಿಯಾಗುತ್ತಿವೆ. ಪೋಲೀಸ್ ಇಲಾಖೆ ಬಿಗಿಯಾದ ಕಾನೂನು ಕ್ರಮ ಕೈಗೊಳ್ಳುತ್ತಿಲ್ಲ ಎಂಬುದಾಗಿ ಸಾರ್ವಜನಿಕರು ದೂರುತ್ತಿದ್ದಾರೆ.

ಝುಬೈರ್ ಹತ್ಯೆಯನ್ನು ಖಂಡಿಸಿ ಘಟನೆ ನಡೆದ ಎರಡನೇ ದಿನ ಡಿವೈಎಫ್ಐ ಉಳ್ಳಾಲ ವಲಯ ಸಮಿತಿ ಪ್ರತಿಭಟನೆ ನಡೆಸಿ, ಗಾಂಜಾ ಮಾರಾಟ ಜಾಲವನ್ನು ನಿಗ್ರಹಿಸುವಂತೆ ಆಗ್ರಹಿಸಿತ್ತು. ಆದರೆ ಆ ಬಳಿಕವೂ ಪೋಲೀಸ್ ಇಲಾಖೆ ಝುಬೈರ್ ಹತ್ಯೆಯು ಖಾಸಗಿ ವೈರದ ಕೊಲೆಯೆಂದು ನಿರೂಪಿಸುತ್ತಿರುವುದು, ಉಳ್ಳಾಲ ಪ್ರದೇಶದ ಜನರನ್ನು ಮತ್ತಷ್ಟು ಕುದಿಯುವಂತೆ ಮಾಡಿದೆ.

ಜನತೆಯ ಕುರಿತಾದ ಧ್ವನಿಯಾಗಿ ಡಿವೈಎಫ್ಐ ಉಳ್ಳಾಲ ಸಮಿತಿಯು ಅಕ್ಟೋಬರ್ 15 ರಂದು ದೊಡ್ಡ ಸಂಖ್ಯೆಯ ಜನಸಮೂಹವನ್ನೊಳಗೊಂಡು ಮುಕ್ಕಚ್ಚೇರಿಯಿಂದ ಉಳ್ಳಾಲ ಬಸ್ ನಿಲ್ದಾಣದವರೆಗೆ ಮೆರವಣಿಗೆ ನಡೆಸಿ ನಿಲ್ದಾಣದ ಬಳಿಯ ಸಾರ್ವಜನಿಕ ಬಯಲು ರಂಗ ಮಂಟಪದಲ್ಲಿ ಪ್ರತಿಭಟನಾ ಸಭೆ ನಡೆಸಿತು.

ಪತ್ರಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು. ಝುಬೈರ್ ಹತ್ಯೆ ಪ್ರಕರಣಕ್ಕೆ ವೈಯುಕ್ತಿಕ ಕಾರಣ ಎಂದು ಹೇಳಿ ಪೋಲೀಸರು ಪ್ರಕರಣದ ತನಿಖೆಯನ್ನು ಹಾದಿ ತಪ್ಪಿಸುತ್ತಿದ್ದಾರೆ. ಪೋಲೀಸರು ಗಾಂಜಾ ವಿಚಾರದಲ್ಲಿ ಕೇವಲ ಸೇವಿಸಿದವರನ್ನು ಮಾತ್ರ ಬಂಧಿಸುತ್ತಾರೆಯೇ ಹೊರತು, ಅವರಿಗೆ ಪೂರೈಸಲು ಕೇಜಿಗಟ್ಟಲೆ ಗಾಂಜಾವನ್ನು ಜಿಲ್ಲೆಗೆ ಪೂರೈಸುವ ಸೂತ್ರಧಾರಿಗಳನ್ನು ಬಂಧಿಸದಿರಲು ಕಾರಣವೇನು ಎಂದು ಪ್ರಶ್ನಿಸಿದರು. ಅಂಥ ಪೂರೈಕೆದಾರರಿಗೆ ಠಾಣೆಗಳಲ್ಲಿ ರಾಜಾತಿಥ್ಯ ದೊರಕುತ್ತಿದೆ ಎಂದು ಟೀಕಿಸಿದರು.

ಪ್ರತಿಭಟನಾ ಸಭೆಯಲ್ಲಿ ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಬಜಾಲ್, ಉಳ್ಳಾಲ ವಲಯ ಡಿವೈಎಫ್ಐ ಅಧ್ಯಕ್ಷ ಜೀವನ್‌ರಾಜ್ ಕುತ್ತಾರ್ ಮಾತನಾಡಿದರು.

ಉಳ್ಳಾಲವನ್ನು ಮಾದಕದ್ರವ್ಯ ವ್ಯಸನ ಮುಕ್ತಗೊಳಿಸುವ ಪ್ರತಿಜ್ಞಾ ವಿಧಿಯನ್ನು ನಿತಿನ್ ಕುತ್ತಾರ್ ನೆರವೇರಿಸಿದರು.

ಗ್ರಾಮ ಪಂಚಾಯತ್ ನೌಕರರ ಸಮಾವೇಶ–ಹೋರಾಟಕ್ಕೆ ಸಿದ್ಧತೆ:

ಗ್ರಾಮ ಪಂಚಾಯತ್ ನೌಕರರಿಗೆ ವೇತನ ಪಾವತಿಗೆ ಸಂಬಂಧಿಸಿ ರಾಜ್ಯ ಸರಕಾರ ಈ ಸಾಲಿನಲ್ಲಿ ಇನ್ನೂ ಅನುದಾನ ಬಿಡುಗಡೆ ಮಾಡಿಲ್ಲ. ಇದರಿಂದಾಗಿ ಗ್ರಾಮ ಪಂಚಾಯತ್ ನೌಕರರು ಬವಣೆ ಅನುಭವಿಸುತ್ತಿದ್ದಾರೆ. ತಿಂಗಳ ಅಂತ್ಯದೊಳಗೆ ಅನುದಾನ ಬಿಡುಗಡೆ ಮಾಡದಿದ್ದಲ್ಲಿ, ರಾಜ್ಯಾದ್ಯಂತ ಮತ್ತೆ ಹೋರಾಟವನ್ನು ಆರಂಭಿಸಲಾಗುವುದು ಎಂಬುದಾಗಿ ಗ್ರಾಮ ಪಂಚಾಯತ್ ನೌಕರರ ರಾಜ್ಯ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ ಎಚ್ಚರಿಸಿದರು.

ಅವರು ಮಂಗಳೂರಿನಲ್ಲಿ ಅಕ್ಟೋಬರ್ 14 ರಂದು ಸರಕಾರಿ ನೌಕರರ ಸಂಘದ ಸಭಾಂಗಣದಲ್ಲಿ ನಡೆದ ದ.ಕ.ಜಿಲ್ಲಾ ಗ್ರಾಮ ಪಂಚಾಯತ್ ನೌಕರರ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಗ್ರಾಮ ಪಂಚಾಯತಿ ನೌಕರರ ಸಂಘದ ಜಿಲ್ಲಾ ಸಮಿತಿ ಅಧ್ಯಕ್ಷ ಯಾದವ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ರಘು ಸುಬ್ರಮಣ್ಯ ಸಮಾವೇಶದಲ್ಲಿ ಭಾಗವಹಿಸಿದ್ದರು.

ಮಂಗಳೂರನ್ನು ಸೌಹಾರ್ದ ತಾಣವನ್ನಾಗಿಸಲು ಸಿಪಿಐ(ಎಂ) ಬದ್ಧ

ಶಾಂತಿ ಸೌಹಾರ್ದತೆಯ ಬೀಡಾಗಿದ್ದ ಮಂಗಳೂರು ನಗರಕ್ಕೆ ಭಾರೀ ಚರಿತ್ರೆಯಿದೆ. ಇಲ್ಲಿನ ಶ್ರಮಜೀವಿಗಳು ಕಷ್ಟಪಟ್ಟು ದುಡಿದು ಸೌಹಾರ್ದತೆಯನ್ನು ನೆಲೆಗೊಳಿಸಲು ಅವಿರತವಾಗಿ ಶ್ರಮಿಸುವ ಮೂಲಕ ಮಂಗಳೂರು ನಗರ ಪ್ರಸಿದ್ಧಿಯಾಗಿದೆ. ಆದರೆ ಇತ್ತೀಚಿನ ಹಲವು ವರ್ಷಗಳಲ್ಲಿ ಇಲ್ಲಿನ ಕೋಮುವಾದಿ ಶಕ್ತಿಗಳು ಮಂಗಳೂರನ್ನು ಪ್ರಯೋಗ ಶಾಲೆಯನ್ನಾಗಿಸಿ, ಕೋಮುಜ್ವಾಲೆಯನ್ನು ಹಬ್ಬಿಸಿ ಹಲವಾರು ಜೀವಗಳನ್ನು ಬಲಿ ತೆಗೆದುಕೊಂಡಿದ್ದಾರೆ. ಮಾತ್ರವಲ್ಲದೆ ತುಳುನಾಡಿನ ಸಂಸ್ಕೃತಿಯನ್ನೇ ನಾಶ ಪಡಿಸುವ ಮೂಲಕ ಭಯದ ವಾತಾವರಣವನ್ನು ನಿರ್ಮಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಮತ್ತೆ ಸೌಹಾರ್ದತೆಯನ್ನು ನೆಲೆಗೊಳಿಸಲು ಹಾಗೂ ಮಂಗಳೂರನ್ನು ಸೌಹಾರ್ದ ತಾಣವನ್ನಾಗಿಸಲು ಸಿಪಿಐ(ಎಂ) ಕಂಕಣಬದ್ಧವಾಗಿದೆ ಎಂದು ಸಿಪಿಐ(ಎಂ) ದ.ಕ ಜಿಲ್ಲಾ ಸಮಿತಿ ಸದಸ್ಯರಾದ ವಾಸುದೇವ ಉಚ್ಚಿಲ್ ಹೇಳಿದರು.

ಅವರು ಸಿಪಿಐ(ಎಂ) ನೇತೃತ್ವದಲ್ಲಿ ಸೌಹಾರ್ದತೆಯಿಂದ ಅಭಿವೃದ್ಧಿಯೆಡೆಗೆ ಎಂಬ ಘೋಷಣೆಯೊಂದಿಗೆ ಡಿಸೆಂಬರ್‌ನಲ್ಲಿ ಜರಗಲಿರುವ 'ಜನತೆಯೆಡೆಗೆ ನಮ್ಮ ನಡಿಗೆ' ಕಾರ್ಯಕ್ರಮದ ಕರಪತ್ರವನ್ನು ಬಿಡುಗಡೆಗೊಳಿಸುತ್ತಾ ಈ ಮಾತುಗಳನ್ನು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್‌ರವರು ಮಾತನಾಡುತ್ತಾ, ಸ್ವಚ್ಛ, ಸುಂದರ, ಸಮೃದ್ಧ, ಸೌಹಾರ್ದ ಮಂಗಳೂರಿನ ನಿರ್ಮಾಣ ಸಿಪಿಐ(ಎಂ)ನ ಕನಸಾಗಿದ್ದು, ಅದನ್ನು ಸಾಕಾರಗೊಳಿಸಲು ಸ್ಪಷ್ಟವಾದ, ವೈಜ್ಞಾನಿಕವಾದ ಕಣ್ಣೋಟವನ್ನು ಹೊಂದಿದೆ ಎಂದು ಹೇಳಿದರು. ವೇದಿಕೆಯಲ್ಲಿ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಸದಸ್ಯರಾದ ಯೋಗೀಶ್ ಜಪ್ಪಿನಮೊಗರು, ಸಂತೋಷ್ ಶಕ್ತಿನಗರ, ದಿನೇಶ್ ಶೆಟ್ಟಿ, ಪ್ರೇಮನಾಥ ಜಲ್ಲಿಗುಡ್ಡೆ, ಭಾರತಿ ಬೋಳಾರರವರು ಉಪಸ್ಥಿತರಿದ್ದರು.

ಸಫ್ವಾನ್ ಎಲ್ಲಿ ?

ಅಕ್ಟೋಬರ್ 2ರಂದು ರೌಡಿ ತಂಡದಿಂದ ಅಪಹರಣಕ್ಕೊಳಗಾದ ಕಾಟಿಪಳ್ಳದ ಸಫ್ವಾನ್ ಪತ್ತೆಹಚ್ಚಲು ಒತ್ತಾಯಿಸಿ, ಕ್ರಿಮಿನಲ್ ಚಟುವಟಿಕೆ ಹತ್ತಿಕ್ಕುವಲ್ಲಿ ಪೋಲೀಸ್ ವೈಫಲ್ಯ ಖಂಡಿಸಿ ಸುರತ್ಕಲ್‌ನಲ್ಲಿ ಅಕ್ಟೋಬರ್ 17 ರಂದು ಡಿ.ವೈ.ಎಫ್.ಐ. ಪ್ರತಿಭಟನೆ ನಡೆಸಿತು.



ಉದ್ಯೋಗ ಖಾತ್ರಿ ಅನುದಾನ ಬಿಡುಗಡೆಗೆ ಆಗ್ರಹಿಸಿ ಕುಂದಾಪುರದಲ್ಲಿ ಪ್ರತಿಭಟನೆ

ಉದ್ಯೋಗ ಖಾತ್ರಿ ಅನುದಾನವನ್ನು ಕೇಂದ್ರ ಸರಕಾರ ತೀವ್ರವಾಗಿ ಕಡಿತಗೊಳಿಸುತ್ತಿದ್ದು, ರಾಜ್ಯಕ್ಕೆ ಕೇವಲ ರೂ.2 ಸಾವಿರ ಕೋಟಿ ಮಾತ್ರ ಬಿಡುಗಡೆ ಮಾಡಿದ್ದರಿಂದ ಶೇ.25 ಉದ್ಯೋಗಾವಕಾಶಗಳು ಕಡಿಮೆಯಾಗಿವೆ. ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೆಲಸ ಮಾಡಿದ ಕೂಲಿಕಾರರಿಗೆ ಬಾಕಿ ಇರುವ ರೂ.14,000 ಕೋಟಿ ಬಿಡುಗಡೆ ಮಾಡುವಂತೆ ಆಗ್ರಹಿಸಿ ಅಕ್ಟೋಬರ್ 13ರಂದು ಕುಂದಾಪುರದಲ್ಲಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಕುಂದಾಪುರ ತಾಲೂಕು ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಸಂಘದ ತಾಲೂಕು ಕಾರ್ಯದರ್ಶಿ ಹಾಗೂ ನಾಡಾ ಗ್ರಾಮ ಪಂಚಾಯತ್ ಸದಸ್ಯೆ ನಾಗರತ್ನ ನಾಡ, ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಕಾರ್ಮಿಕ ಸಂಘದ ಮುಖಂಡರುಗಳು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕಾರ್ಮಿಕ ಕಲ್ಯಾಣ ಸೆಸ್ ಜಿಎಸ್‌ಟಿ ವ್ಯಾಪ್ತಿಗೆ ವಿರೋಧ: ಉಡುಪಿಯಲ್ಲಿ ಪ್ರತಿಭಟನೆ:

ಕೇಂದ್ರ ಸರ್ಕಾರ ಕಾರ್ಮಿಕ ಕಲ್ಯಾಣ ಸೆಸ್ಸನ್ನು ಸರಕು ಮತ್ತು ಸೇವಾ ತೆರಿಗೆ ವ್ಯಾಪ್ತಿಗೆ ಒಳಪಡಿಸುವುದನ್ನು ವಿರೋಧಿಸಿ, ಮರಳಿಗೆ ಏಕರೂಪದ ದರ ನಿಗದಿಪಡಿಸುವಂತೆ ಆಗ್ರಹಿಸಿ ಹಾಗೂ ಕಟ್ಟಡ ಹಾಗೂ ನಿರ್ಮಾಣ ಕಾರ್ಮಿಕರ ಇನ್ನಿತರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಉಡುಪಿ ಜಿಲ್ಲಾ ಕಟ್ಟಡ ಹಾಗೂ ನಿರ್ಮಾಣ ಕಾರ್ಮಿಕರ ಸಂಘಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ಕಾರ್ಮಿಕರು ಅಕ್ಟೋಬರ್ 12 ರಂದು ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕಟ್ಟಡ ಹಾಗೂ ನಿರ್ಮಾಣ ಕಾರ್ಮಿಕರ ಸಂಘದ ಕರ್ನಾಟಕ ರಾಜ್ಯ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಜಿಲ್ಲಾ ಸಂಘದ ಮುಖಂಡರಾದ ದಾಸು ಭಂಡಾರಿ, ಶೇಖರ ಬಂಗೇರ, ದಯಾನಂದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ವಿಚಾರಣೆ ನಡೆಸದೆ ಬಿಸಿಯೂಟ ನೌಕರರ ವಜಾ: ಅಧಿಕಾರಿ ವಿರುದ್ಧ ಮಂಗಳೂರಿನಲ್ಲಿ ಪ್ರತಿಭಟನೆ

ತಮ್ಮ ವ್ಯಾಪ್ತಿ ಮೀರಿ ಬಿಸಿಯೂಟ ನೌಕರರ ಮೇಲೆ ಯಾವುದೇ ವಿಚಾರಣೆ ನಡೆಸದೆ ಮತ್ತು ನೋಟೀಸ್ ನೀಡದೆ ಕೆಲಸದಿಂದ ವಜಾಗೊಳಿಸಲು ಗ್ರಾಮ ಪಂಚಾಯತ್ ಮತ್ತು ಶಾಲಾ ಅಭಿವೃದ್ಧಿ ಸಮಿತಿಗೆ ನಿರ್ದೇಶನ ನೀಡಿದ ಕಾರ್ಮಿಕ ವಿರೋಧಿ ಅಕ್ಷರ ದಾಸೋಹ ಅಧಿಕಾರಿಯನ್ನು ಅಮಾನತುಗೊಳಿಸಿ ತನಿಖೆ ಮಾಡಿ ಕಾನೂನು ಕ್ರಮ ಜರುಗಿಸಬೇಕೆಂದು ಅಕ್ಷರದಾಸೋಹ ನೌಕರರ ಸಂಘಟನೆಯ ವತಿಯಿಂದ ಆಗ್ರಹಿಸಲಾಯಿತು.

ಅಕ್ಟೋಬರ್ 16 ರಂದು ಮಂಗಳೂರು ಜಿಲ್ಲಾ ಪಂಚಾಯತ್ ಮುಂಭಾಗದಲ್ಲಿ ಅಕ್ಷರ ದಾಸೋಹ ನೌಕರರ ದ.ಕ.ಜಿಲ್ಲಾ ಸಮಿತಿ ಆಶ್ರಯದಲ್ಲಿ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು. ಸಿಐಟಿಯು ದ.ಕ.ಜಿಲ್ಲಾ ಉಪಾಧ್ಯಕ್ಷ ವಸಂತಆಚಾರಿ, ರಾಜ್ಯ ಸಮಿತಿ ಸದಸ್ಯೆ ಜಯಂತಿ ಬಿ. ಶೆಟ್ಟಿ, ಅಕ್ಷರ ದಾಸೋಹ ನೌಕರರ ಜಿಲ್ಲಾ ಸಂಘದ ಅಧ್ಯಕ್ಷೆ ಪದ್ಮಾವತಿ ಶೆಟ್ಟಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಸಂಘದ ಮುಂದಾಳುಗಳಾದ ಗಿರಿಜ ಮೂಡಬಿದ್ರಿ, ರೇಖಲತಾ, ಭವ್ಯಾ, ಶಾಂತಾ, ಶ್ರೀಮತಿ ಪುತ್ತೂರು, ಅರುಣಾ ಕೈಕಂಭ, ಯಶೋಧಾ ಮೂಡಬಿದರೆ, ಶೋಭಾ ಮೂಡಬಿದ್ರಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಬಂಟ್ವಾಳ: ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಪ್ರತಿಭಟನೆ

ವಿವಿಧ ಬೇಡಿಕೆಗಳನ್ನು ಮುಂದಿಟ್ಟು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ರಾಜ್ಯಾದ್ಯಂತ ಹಮ್ಮಿಕೊಂಡಿದ್ದ ಪ್ರತಿಭಟನೆಗಳ ಅಂಗವಾಗಿ ಫೆಡರೇಶನ್ನಿನ ಬಂಟ್ವಾಳ ತಾಲೂಕು ಸಮಿತಿ ಆಶ್ರಯದಲ್ಲಿ ಅಕ್ಟೋಬರ್ 16 ರಂದು ಬಿ.ಸಿ. ರೋಡಿನಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು. ಕರಾವಳಿಗೆ ಶಾಶ್ವತ ಮರಳು ನೀತಿಗಾಗಿ ಆಗ್ರಹಿಸಲಾಯಿತು.

ಪ್ರತಿಭಟನೆಗೆ ಮೊದಲು ಬಿ.ಸಿ. ರೋಡಿನ ನಾರಾಯಣ ಗುರು ವೃತ್ತದಿಂದ ತಾಲೂಕು ಕಚೇರಿವರೆಗೆ ಮೆರವಣಿಗೆ ನಡೆಸಲಾಯಿತು. ಬಳಿಕ ನಡೆದ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಸಿಐಟಿಯು ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ತಾಲೂಕು ಸಮಿತಿ ಕಾರ್ಯದರ್ಶಿ ರಾಮಣ್ಣ ವಿಟ್ಲ, ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಫೆಡರೇಶನ್ನಿನ ದ.ಕ.ಜಿಲ್ಲಾ ಉಪಾಧ್ಯಕ್ಷ ಕೆ.ಪಿ.ಜಾನ್ ಮಾತನಾಡಿದರು. ಉದಯ್ ಕುಮಾರ್ ಸ್ವಾಗತಿಸಿದರು.

ನಿವೇಶನಕ್ಕೆ ಆಗ್ರಹಿಸಿ, ಉಡುಪಿ ನಗರ ಸಭೆ ಎದುರು ಪ್ರತಿಭಟನೆ



ಉಡುಪಿ ನಗರಸಭೆ ವ್ಯಾಪ್ತಿಯ ಬಡ ನಿವೇಶನ ರಹಿತರಿಗೆ ನಿವೇಶನ ಆಗ್ರಹಿಸಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಉಡುಪಿ ತಾಲೂಕು ಸಮಿತಿ ನೇತೃತ್ವದಲ್ಲಿ ನಗರ ಸಭೆ ಕಛೇರಿ ಎದುರು ಅಕ್ಟೋಬರ್ 19ರಂದು ಧರಣಿ ಮುಷ್ಕರ ನಡೆಸಲಾಯಿತು. ಬನ್ನಂಜೆಯಲ್ಲಿ ಸೇರಿದ ನಿವೇಶನ ರಹಿತ ಪ್ರತಿಭಟನಾಕಾರರು ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ, ಘೋಷಣೆ ಕೂಗಿದರು. ಈಗಾಗಲೇ ವಿಳಂಬವಾಗಿದ್ದು ಈ ಕೂಡಲೇ ನಿವೇಶನದ ಹಕ್ಕು ಪತ್ರ ನೀಡಬೇಕು ಎಂದು ಅವರು ಆಗ್ರಹಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಕೃಷಿಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ, ಬಡವರಿಗೆ ನಿವೇಶನ ನೀಡುವಂತೆ ಕಳೆದ ನಾಲ್ಕು ವರ್ಷಗಳಿಂದ ಹೋರಾಟ ನಡೆಸಲಾಗುತ್ತಿದೆ. ಆದರೆ ನಗರ ಸಭೆ ಮಾತ್ರ ಈ ವಿಷಯದಲ್ಲಿ ಸಂಪೂರ್ಣ ನಿರ್ಲಕ್ಷ್ಯ ವಹಿಸಿದೆ. ಅರ್ಹ ಫಲಾನುಭವಿಗಳ ಅಂತಿಮ ಪಟ್ಟಿ ಸಿದ್ಧಪಡಿಸಲಾಗಿದೆ. ಆದರೆ ಹಕ್ಕುಪತ್ರ ನೀಡಲು ಮಾತ್ರ ಕ್ರಮ ಕೈಗೊಂಡಿಲ್ಲ. ನಗರಸಭಾ ವ್ಯಾಪ್ತಿಯ 76 ಬಡಗುಬೆಟ್ಟು, ಶಿವಳ್ಳಿ, ಪುತ್ತೂರು, ಹಾಗೂ ಹೆರ್ಗ ಗ್ರಾಮಗಳಲ್ಲಿ ಗುರುತಿಸಲಾಗಿರುವ ಜಾಗದಲ್ಲಿ ಈಗಾಗಲೇ ನಿಗದಿಪಡಿಸಿದ 600 ಮಂದಿಗೆ ಕೂಡಲೇ ಹಕ್ಕು ಪತ್ರ ನೀಡಲು ಕ್ರಮ ವಹಿಸಬೇಕು. ಅಪಾರ್ಟ್‌ಮೆಂಟ್ ಮಾದರಿಯಲ್ಲಿ ನಗರ ಆಶ್ರಯ ಮನೆಗಳನ್ನು ನಿರ್ಮಿಸಿ ವಿತರಿಸಲು ಯೋಜನೆಗಳನ್ನು ನಗರಸಭೆ ರೂಪಿಸಿಲ್ಲ. ಒಂದು ವೇಳೆ ಪ್ಲ್ಯಾಟ್ ಬದಲು ಭೂಮಿಯೇ ಬೇಕು ಎನ್ನುವವರಿಗೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಿವೇಶನ ಹಂಚಿಕೆ ಮಾಡಬೇಕು ಎಂದು ಹೇಳಿದರು.

ಉಡುಪಿ ಮತ್ತು ಕಾಪು ಹೋಬಳಿ ವ್ಯಾಪ್ತಿಯಲ್ಲಿ ಸರಕಾರಿ ಸ್ಥಳವನ್ನು ಅನಧಿಕೃತವಾಗಿ ಆಕ್ರಮಿಸಿಕೊಂಡಿರುವ ಒಟ್ಟು 687.73 ಎಕ್ರೆ ಜಮೀನು (ಉಡುಪಿ ತಹಶೀಲ್ದಾರ್ ನೀಡಿದ ಲಿಖಿತ ದಾಖಲೆಯಲ್ಲಿರುವಂತೆ) ಕೂಡಲೇ ತೆರವುಗೊಳಿಸಿ ಬಡನಿವೇಶನ ರಹಿತರಿಗೆ ಭೂಮಿ ಹಕ್ಕು ಪತ್ರ ಮಂಜೂರು ಮಾಡಬೇಕು.

ಉಡುಪಿ ನಗರಸಭೆ ವ್ಯಾಪ್ತಿಯೂ ಸೇರಿದಂತೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ 911 ಅರ್ಹ ಫಲಾನುಭವಿಗಳಿಗೆ ನಿವೇಶನ ನೀಡುವ ಬಗ್ಗೆ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ತೀರ್ಮಾನಿಸಲಾಗಿತ್ತು. ಅದರಂತೆ ನಿವೇಶನ ನೀಡಬೇಕು.

ಪುತ್ತೂರು ಗ್ರಾಮದಲ್ಲಿ ಸುಮಾರು 2 ಎಕ್ರೆ ಜಮೀನನ್ನು ನಿವೇಶನ ಉದ್ದೇಶಕ್ಕಾಗಿ, ಕುಂದಾಪುರ ಉಪವಿಭಾಗಾಧಿಕಾರಿ ಅವರು ಮಂಜೂರು ಮಾಡಿದ ಸರಕಾರಿ ಜಾಗ ವರ್ಷ 3 ಕಳೆದರೂ ಅದನ್ನು ನಿವೇಶನಗಳಾಗಿ ಪರಿವರ್ತಿಸುವ ಕೆಲಸ ಇನ್ನೂ ಆಗಿಲ್ಲ. ಈಗಲಾದರೂ ಆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ವೆಂಕಟೇಶ ಕೋಣಿ ಸ್ಥಳೀಯಾಡಳಿತವನ್ನು ಒತ್ತಾಯಿಸಿದರು.

ಈ ಎಲ್ಲಾ ಬೇಡಿಕೆ ಈಡೇರಿಸುವುದಕ್ಕಾಗಿ ತಾಲೂಕು ಮಟ್ಟದ ಅಧಿಕಾರಿಗಳು ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕರು, ಭೂಮಾಪನಾ ಅಧಿಕಾರಿಗಳ ಸಮ್ಮುಖದಲ್ಲಿ ಕೃಷಿ ಕೂಲಿಕಾರರ ಸಂಘದ ಪದಾಧಿಕಾರಿಗಳ ಜತೆ ಜಂಟಿ ಸಭೆ ನಡೆಸಲು ಸೂಕ್ತ ಕ್ರಮ ಕೈಗೊಳ್ಳಲು ಒತ್ತಾಯಿಸಲಾಯಿತು.

ನಿವೇಶನ ರಹಿತ ಪ್ರತಿಭಟನಾಕಾರರ ಬೇಡಿಕೆ ಈಡೇರಿಸಲು ನಡೆದ ಪ್ರತಿಭಟನಾ ಹೋರಾಟಕ್ಕೆ ಬೆಂಬಲ ಸೂಚಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಸಿದ್ಧರಾಮಯ್ಯ ಅವರ ಸರಕಾರ ಅನ್ನಭಾಗ್ಯ, ಶಾಧಿಭಾಗ್ಯ ಸೇರಿದಂತೆ ಹಲವು ಭಾಗ್ಯಗಳನ್ನು ನೀಡಿದೆ. ಆದರೆ ಬಹುಮುಖ್ಯವಾದ ಬಡವರಿಗೆ ನಿವೇಶನ ನೀಡುವ ಕೆಲಸವನ್ನು ಮಾತ್ರ ಮಾಡಿಲ್ಲ ಎಂದು ಹೇಳಿದರು.

ಸಮಾವೇಶಕ್ಕೆ ನಗರಸಭೆಯಿಂದ ಅಡ್ಡಗಾಲು : ಆರೋಪ

ಬನ್ನಂಜೆ ನಾರಾಯಣ ಗುರು ಹಾಲ್‌ನಲ್ಲಿ ನಡೆಸಲು ಉದ್ದೇಶಿಸಿದ ಉಡುಪಿ ನಗರ ಸಭೆ ವ್ಯಾಪ್ತಿಯ ನಿವೇಶನ ರಹಿತರ ಸಮಾವೇಶಕ್ಕೆ ಅವಕಾಶ ನೀಡದಂತೆ ಉಡುಪಿ ನಗರಸಭೆ ಹುನ್ನಾರ್ ನಡೆಸಿದೆ. ಎರಡು ವಾರದ ಹಿಂದೆ ಹಾಲ್‌ನಲ್ಲಿ ಅವಕಾಶ ನೀಡುವಂತೆ ಕೇಳಿಕೊಂಡಿದ್ದೇವು. ಆದರೆ ನಗರಸಭೆ ಇದಕ್ಕೆ ಅಡ್ಡಗಾಲು ಹಾಕಿ ಹಾಲ್‌ನಲ್ಲಿ ಸಮಾವೇಶಕ್ಕೆ ಅವಕಾಶ ಕಲ್ಪಿಸದಂತೆ ಮಾಡಿದೆ. ಹೀಗಾಗಿ ಇಂದಿನ ಸಮಾವೇಶವನ್ನು ರದ್ದುಪಡಿಸಿ, ಕೇವಲ ಧರಣಿಯನ್ನು ನಡೆಸಲಾಯಿತು. ಜನವಿರೋಧಿ ನಗರಸಭೆ ಆಡಳಿತ ವಿರುದ್ಧ ಕೃಷಿಕೂಲಿಕಾರರ ಸಂಘದ ಉಡುಪಿ ತಾಲೂಕು ಕಾರ್ಯದರ್ಶಿ ಕವಿರಾಜ ತೀವ್ರವಾಗಿ ಖಂಡಿಸಿದರು.

ಡಿಸೆಂಬರ್ ಒಳಗೆ ನಿವೇಶನ ಹಂಚಿಕೆ: ಉಡುಪಿ ನಗರಸಭೆ ವ್ಯಾಪ್ತಿಯಲ್ಲಿ 595 ನಿವೇಶನ ರಹಿತರ ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಈಗಾಗಲೇ ಹೆರ್ಗಾ ಹಾಗೂ ಶಿವಳ್ಳಿ ಗ್ರಾಮದಲ್ಲಿ ಗುರುತಿಸಿರುವ 11 ಎಕ್ರೆ ಜಾಗದಲ್ಲಿ ಡಿಸೆಂಬರ್ ಅಂತ್ಯದೊಳಗೆ ನಿವೇಶನ ಹಂಚಿಕೆ ಮಾಡಿ ಹಕ್ಕು ಪತ್ರ ನೀಡಲಾಗುವುದು ಎಂದು ನಗರಸಭೆ ಕಂದಾಯ ಅಧಿಕಾರಿ ಚಂದ್ರ ಪೂಜಾರಿ ತಿಳಿಸಿದರು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ, ಕೃಷಿಕೂಲಿಕಾರರ ಸಂಘದ ಮುಖಂಡರಾದ ಎಚ್. ವಿಠಲ ಪೂಜಾರಿ, ಯು. ದಾಸಭಂಡಾರಿ, ಕವಿರಾಜ ಎಸ್. ರಾಜೀವ ಪಡುಕೋಣೆ, ಉಮೇಶ್ ಕುಂದರ್, ಜಯ ಐರೋಡಿ, ನಾಗರತ್ನ ನಾಡ, ನಳಿನಿ ಎಸ್. ಪದ್ಮಾವತಿ ಶೆಟ್ಟಿ, ರಾಮ ಕಾರ್ಕಡ, ಮಾಧವ ಸಾಲಿಗ್ರಾಮ, ಕುಶಲ, ಮುಂತಾದವರು ಹೋರಾಟದ ನೇತೃತ್ವ ವಹಿಸಿದ್ದರು.

ವರದಿ: ವೆಂಕಟೇಶ ಕೋಣಿ

ಉಪ್ಪುಂದ : ನಿವೇಶನ ರಹಿತರಿಂದ ಅರ್ಜಿ ಸ್ವೀಕಾರಕ್ಕೆ ಚಾಲನೆ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿ ಮತ್ತು ಉಪ್ಪುಂದ ಗ್ರಾಮ ಪಂಚಾಯತ್ ವ್ಯಾಪ್ತಿಯ ನಿವೇಶನ ರಹಿತರ ಹೋರಾಟ ಸಮಿತಿಗಳ ಜಂಟಿ ಆಶ್ರಯದಲ್ಲಿ ಉಪ್ಪುಂದ ಮತ್ತು ಬಿಜೂರು ಗ್ರಾಮಗಳ ಬಡನಿವೇಶನ ರಹಿತರಿಂದ – ನಿವೇಶನ ಸ್ಥಳ ಮಂಜೂರು ಮಾಡುವುದಕ್ಕೆ ಒತ್ತಾಯಿಸಿ ಸಾಮೂಹಿಕವಾಗಿ ಅರ್ಜಿ ಸ್ವೀಕಾರ ಕಾರ್ಯಕ್ರಮ ಕಾಸನಾಡಿ ಜಟ್ಟಿಗೇಶ್ವರ ದೈವಸ್ಥಾನದ ವಠಾರದಲ್ಲಿ 19.10.2017 ರಂದು ಜರಗಿತು.

ಉಪ್ಪುಂದ ಮತ್ತು ಬಿಜೂರು ಗ್ರಾಮಗಳ ಬಡನಿವೇಶನ ರಹಿತರಿಂದ ಅರ್ಜಿಗಳನ್ನು ಹೋರಾಟ ಸಮಿತಿಗಳ ಮುಖಂಡರಾದ ಮಾಧವ ದೇವಾಡಿಗ, ಶ್ರೀಧರ ಉಪ್ಪುಂದ ಇವರು ಸ್ವೀಕರಿಸುವ ಮೂಲಕ ಚಾಲನೆ ನೀಡಿದರು.



ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ, ಪ್ರಸ್ತಾವಿಕರಾಗಿ ಮಾತನಾಡುತ್ತಾ ಅರ್ಜಿದಾರರನ್ನು ಸ್ವಾಗತಿಸಿದರು. ಹೋರಾಟ ಸಮಿತಿಯ ಮುಖಂಡರಾದ ಚಂದ್ರ ಉಪ್ಪುಂದ, ಅಮ್ಮಯ್ಯ ಪೂಜಾರಿ ಬಿಜೂರು, ಮಂಜುನಾಥ ಶೇರುಗಾರ ಮುಡೂರ ಪೂಜಾರಿ, ಸತೀಶ ಬಿಜೂರು, ಬಾಬು ಕೆ. ದೇವಾಡಿಗ, ನಾಗರತ್ನ ನಾಡ, ಪದ್ಮಾವತಿ ಶೆಟ್ಟಿ, ಗಣೇಶ ಮೊಗವೀರ, ಕುಶಲ ಮತ್ತು ಶ್ಯಾಮಲ ಉಪಸ್ಥಿತರಿದ್ದರು.

ಕಳೆದ ವಾರ ಉಪ್ಪುಂದ ಗ್ರಾಮದ ನೂರಾರು ಜನ ಮನೆ ನಿವೇಶನ ಇಲ್ಲದವರು ಮೆರವಣಿಗೆ ಹೊರಟು ಸರಕಾರದ ಜನಪ್ರತಿನಿಧಿಗಳ ನಿರ್ಲಕ್ಷ್ಯವನ್ನು ಖಂಡಿಸಿ ಗ್ರಾಮ ಪಂಚಾಯತ್ ಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದ್ದರು. ಬೈಂದೂರು ವಲಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ವೆಂಕಟೇಶ ಕೋಣಿ, ರಾಜೀವ ಪಡುಕೋಣೆ, ರಮೇಶ್ ಗುಲ್ವಾಡಿ, ನಾಗರತ್ನ ನಾಡ, ಪದ್ಮಾವತಿ ಶೆಟ್ಟಿ, ಕುಶಲ ಪ್ರತಿಭಟನೆಯ ನಾಯಕತ್ವ ವಹಿಸಿದ್ದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ವರದಿ: ವೆಂಕಟೇಶ ಕೋಣಿ

ಸಾಲಿಗ್ರಾಮ ಪಟ್ಟಣ ಪಂಚಾಯತ್‌ಗೆ ನಿವೇಶನ ರಹಿತರ ಮುತ್ತಿಗೆ


ಉಡುಪಿ ತಾಲೂಕು ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯ ಮನೆ, ನಿವೇಶನ ರಹಿತರ ಭೂಮಿ ಹಕ್ಕಿಗಾಗಿ ಬೃಹತ್ ಪ್ರತಿಭಟನಾ ಮೆರವಣಿಗೆ ಹಾಗೂ ಪಟ್ಟಣ ಪಂಚಾಯತ್ ಕಛೇರಿ ಮುತ್ತಿಗೆ ಹೋರಾಟ ಕಾರ್ಯಕ್ರಮವು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ತಾಲೂಕು ಸಮಿತಿ ನೇತೃತ್ವದಲ್ಲಿ ಯಶಸ್ವಿಯಾಗಿ ಜರಗಿತು.

ಪ್ರತಿಭಟನಾ ಮೆರವಣಿಗೆ ಪೂರ್ವ ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯ ನಾಲ್ಕು ಗ್ರಾಮಗಳ ಬಡನಿವೇಶನ ರಹಿತರ ಸಮಾವೇಶವು ಸಾಲಿಗ್ರಾಮ ಗಣೇಶ ಕೃಪ ಕಲ್ಯಾಣ ಮಂಟಪದಲ್ಲಿ ಜರಗಿತು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾಧ್ಯಕ್ಷ ಯು. ದಾಸಭಂಡಾರಿ ನಿವೇಶನ ರಹಿತರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ, ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯ ನಿವೇಶನ ರಹಿತರಿಂದ ನಿವೇಶನ ಕೋರಿಕೆ ಅರ್ಜಿ ಸ್ವೀಕರಿಸಿ ಪಟ್ಟಣ ಪಂಚಾಯತ್‌ಗೆ ಹಸ್ತಾಂತರಿಸಿ ವರ್ಷ ಕಳೆದರೂ ನಿವೇಶನ ರಹಿತರ ಅರ್ಹ ಫಲಾನುಭವಿಗಳ ಪಟ್ಟಿ ಅಂತಿಮ ಗೊಳಿಸದಿರುವ ಮುಖ್ಯಾಧಿಕಾರಿಗಳ ಅಸಡ್ಡೆಯನ್ನು ತೀವ್ರವಾಗಿ ಖಂಡಿಸಿದರು. ಸಾಲಿಗ್ರಾಮ ಪಟ್ಟಣ ಪಂಚಾಯತ್ ಕಛೇರಿ ಮುತ್ತಿಗೆ ಹೋರಾಟದ ಸಂದರ್ಭದಲ್ಲಿ ಜರಗಿದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಮಾತನಾಡುತ್ತಾ, ವಸತಿ ಸಮಿತಿಯ ಮೂಲಕ ನಿವೇಶನ ರಹಿತರ ಅರ್ಜಿಗಳನ್ನು ತನಿಖೆ ನಡೆಸಿ ಮುಂದಿನ ಮೂರು ತಿಂಗಳೊಳಗೆ ಅರ್ಹ ಫಲಾನುಭವಿಗಳ ನಿವೇಶನ ರಹಿತರ ಅಂತಿಮ ಪಟ್ಟಿ ಸಿದ್ಧಪಡಿಸದಿದ್ದರೆ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ನಂತರ ಸಾಲಿಗ್ರಾಮ ಪಟ್ಟಣ ಪಂಚಾಯತ್ ಅಧ್ಯಕ್ಷರು ಹಾಗೂ ಮುಖ್ಯಾಧಿಕಾರಿಗಳಿಗೆ, ಬೇಡಿಕೆಗಳ ಮನವಿ ಪತ್ರ ಹಸ್ತಾಂತರಿಸಲಾಯಿತು. ಮುಂದಿನ ಮೂರು ತಿಂಗಳೊಳಗೆ ನಿವೇಶನ ರಹಿತರ ಅಂತಿಮ ಪಟ್ಟಿ ಸಿದ್ಧಪಡಿಸಲಾಗುವುದು ಎಂಬುದಾಗಿ ಅಧಿಕಾರಿಗಳು ನೀಡಿದ ಭರವಸೆ ಮೇರೆಗೆ ಪ್ರತಿಭಟನೆಯನ್ನು ಹಿಂಪಡೆಯಲಾಯಿತು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡಿದರು. ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಕವಿರಾಜ, ಪಿ. ವಿಶ್ವನಾಥ ರೈ, ಎಚ್. ವಿಠಲ ಪೂಜಾರಿ, ರಾಜೀವ ಪಡುಕೋಣೆ, ಮಾಧವ ಸಾಲಿಗ್ರಾಮ, ರಾಮ ಕಾರ್ಕಡ, ಉಮೇಶ ಕುಂದರ್, ನಳಿನಿ ಎಸ್. ಶಾರದ ಕಾರ್ಕಡ, ಉಪಸ್ಥಿತರಿದ್ದರು.

ವರದಿ : ವೆಂಕಟೇಶ ಕೋಣಿ

ಮಾತೆಂದರೆ ಇದು



ಹಣತೆ ಹಚ್ಚುತ್ತೇನೆ ನಾನೂ.
ಈ ಕತ್ತಲನು ಗೆದ್ದು ನಿಲ್ಲುತ್ತೇನೆಂಬ ಜಿದ್ದಿನಿಂದಲ್ಲ ;
ಲೆಕ್ಕವೇ ಇರದ ದೀಪಾವಳಿಯ ಹಡಗುಗಳೆ
ಇದರಲ್ಲಿ ಮುಳುಗಿ ಕರಗಿರುವಾಗ
ನಾನು ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ ನನಗಿಲ್ಲ.
ಹಣತೆ ಹಚ್ಚುತ್ತೇನೆ ನಾನೂ ;
ಈ ಕತ್ತಲಿನಿಂದ ಬೆಳಕಿನ ಕಡೆಗೆ ನಡೆದೇನೆಂಬ
ಆಸೆಯಿಂದಲ್ಲ.

ಕತ್ತಲಿನಿಂದ ಕತ್ತಲಿಗೇ ತಡಕಾಡಿಕೊಂಡು ಬಂದಿವೆ ಹೆಜ್ಜೆ
ಶತಮಾನದಿಂದಲೂ.
ನಡು ನಡುವೆ ಒಂದಷ್ಟು ಬೆಳಕು ಬೇಕೆಂದು
ಅಗಾಗ ಕಡ್ಡಿ ಗೀಚಿದ್ದೇವೆ,
ದೀಪ ಮುಡಿಸಿದ್ದೇವೆ,
ವೇದ, ಶಾಸ್ತ್ರ, ಪುರಾಣ, ಇತಿಹಾಸ, ಕಾವ್ಯ, ವಿಜ್ಞಾನಗಳ
ಮತಾಪು–ಪಟಾಕಿ–ಸುರುಸುರುಬತ್ತಿ–ಹೂಬಾಣ
ಸುಟ್ಟಿದ್ದೇವೆ.
'ತಮಸೋಮಾ ಜ್ಯೋತಿರ್ಗಮಯಾ' ಎನ್ನುತ್ತ ಬರೀ
ಬೂದಿಯನ್ನೇ ಕೊನೆಗೆ ಕಂಡಿದ್ದೇವೆ.

ನನಗೂ ಗೊತ್ತು, ಈ ಕತ್ತಲೆಗೆ
ಕೊನೆಯಿರದ ಬಾಯಾರಿಕೆ,
ಎಷ್ಟೊಂದು ಬೆಳಕನ್ನು ಇದು ಉಟ್ಟರೂ, ತೊಟ್ಟರೂ,
ತಿಂದರೂ, ಕುಡಿದರೂ ಇದಕ್ಕೆ ಇನ್ನೂ ಬೇಕು
ಇನ್ನೂ ಬೇಕು ಎನ್ನುವ ಬಯಕೆ.

ಆದರೂ ಹಣತೆ ಹಚ್ಚುತ್ತೇನೆ ನಾನೂ ;
ಕತ್ತಲೆಯನ್ನು ದಾಟುತ್ತೇನೆಂಬ ಭ್ರಮೆಯಿಂದಲ್ಲ,
ಇರುವಷ್ಟು ಹೊತ್ತು ನಿನ್ನ ಮುಖ ನಾನು, ನನ್ನ ಮುಖ ನೀನು
ನೋಡಬಹುದೆಂಬ ಒಂದೇ ಒಂದು ಆಸೆಯಿಂದ ;
ಹಣತೆ ಆರಿದ ಮೇಲೆ, ನೀನು ಯಾರೋ, ಮತ್ತೆ
ನಾನು ಯಾರೋ.

– ಜಿ ಎಸ್ ಶಿವರುದ್ರಪ್ಪ
('ನನ್ನ ಹಣತೆ' ಕವನದಿಂದ)



ಜಾತಿ ಸಂವೇದನೆ ಅಪಾಯಕಾರಿ–ಪ್ರೊ. ಕೆ.ದೊರೈರಾಜ್ ಆತಂಕ

ದೇಶದಲ್ಲಿ ಮನುಷ್ಯ ಸಂವೇದನೆಗಿಂತ ಜಾತಿ ಸಂವೇದನೆ ಹೆಚ್ಚಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಪ್ರಗತಿಪರ ಚಿಂತಕ ಕೆ.ದೊರೈರಾಜ್ ತಿಳಿಸಿದರು. ತುಮಕೂರು ನಗರದ ಎಂ.ಜಿ.ರಸ್ತೆಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ದಲಿತ ಹಕ್ಕುಗಳ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ದಲಿತರ ಸಮಾವೇಶ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಮಾಜದಲ್ಲಿ ಜಾತಿ ಸಂವೇದನೆ ಹೆಚ್ಚಾಗಿ ಮಾನವ ಸಂವೇದನೆ ಕಡಿಮೆಯಾಗಿದೆ. ಹೀಗಾಗಿ ಮಹಿಳೆಯರು ಮತ್ತು ದಲಿತರ ಮೇಲೆ ದೌರ್ಜನ್ಯ ನಡೆಯುತ್ತಿದೆ. ದಲಿತರು ಹಾಗೂ ದಲಿತ ಮಹಿಳೆಯ ಮೇಲೆ ದೌರ್ಜನ್ಯ ನಡೆದರೆ ದಲಿತರೇ ಪ್ರತಿಭಟನೆ ನಡೆಸಬೇಕಾಗಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ದಲಿತ ಮಹಿಳೆಯ ಮೇಲೆ ಹಲ್ಲೆ ನಡೆದರೆ ಮಹಿಳೆಯರೆಲ್ಲರೂ ಹೋರಾಟ

ಮಾಡಬೇಕು. ದಲಿತರ ಮೇಲೆ ದೌರ್ಜನ್ಯ ನಡೆದಾಗಲೂ ದಲಿತೇತರರು ಪ್ರತಿಭಟನೆ ನಡೆಸಿದಾಗ ಮಾನವ ಸಂವೇದನೆ ಮೂಡಲು ಸಾಧ್ಯ. ಮನುಷ್ಯ ಸಂವೇದನೆ ಇರುವವರೆಲ್ಲರೂ ದೌರ್ಜನ್ಯದ ವಿರುದ್ದದ ಹೋರಾಟದಲ್ಲಿ ಪಾಲ್ಗೊಳ್ಳಬೇಕು ಎಂದು ಸಲಹೆ ನೀಡಿದರು.

ಸಮಾಜದಲ್ಲಿ ಬೇರೂರಿರುವ ಜಾತಿ ವ್ಯವಸ್ಥೆಯ ಬೇರುಗಳನ್ನು ಸಡಿಲಗೊಳಿಸಲು ಎಲ್ಲಾ ಸಂಘಟನೆಗಳು ಸಂಘಟಿತವಾಗಿ ಹೋರಾಟ ಮಾಡಬೇಕು. ದಲಿತೇತರರು ಮಾನವ ಹಕ್ಕುಗಳೆಂದು ಪರಿಗಣಿಸಿ ಹೋರಾಟಕ್ಕೆ ಬರಬೇಕು ಎಂದರು. ಇತ್ತೀಚಿನ ದಿನಗಳಲ್ಲಿ ದಲಿತ ಸಂಘಟನೆಗಳು ಅಧಿಕಾರ ಹಿಡಿಯಬೇಕೆಂದು ಬಯಸುತ್ತಿವೆ. ಯಾಕೆಂದರೆ ಇದುವರೆಗೂ ನಡೆದಿರುವ ಹೋರಾಟವನ್ನು ಗಮನಿಸಿರುವ ದಲಿತರು ಭ್ರಮನಿರಸಗೊಂಡಿದ್ದು ಅಧಿಕಾರ ಹಿಡಿಯುವ ಪ್ರಯತ್ನ ನಡೆಸುತ್ತಿದ್ದು ಸಮಾನ ಮನಸ್ಕ ಸಂಘಟನೆಗಳ ಜೊತೆಗೆ ಸೇರಿ ಹೋರಾಟ ನಡೆಸುತ್ತಿವೆ ಎಂದರು.

ಪೌರಕಾರ್ಮಿಕರು ಘನತೆಯಿಂದ ಕೆಲಸ ಮಾಡುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಲು ನಾಗರಿಕರು ಮತ್ತು ಸರ್ಕಾರಗಳು ವಿಫಲವಾಗಿವೆ. ಹಾಗೆಯೇ ಗುತ್ತಿಗೆ ಪೌರಕಾರ್ಮಿಕರನ್ನು ಕಾಯಂಗೊಳಿಸುವಲ್ಲಿ ಸರ್ಕಾರಗಳು ವಿಫಲವಾಗಿವೆ. ದಲಿತರಿಗೆ ಭೂಮಿ ನೀಡಿರುವ ಕುರಿತು ಸರ್ಕಾರ ಶ್ವೇತ ಹೊರಡಿಸಬೇಕು ಎಂದು ಆಗ್ರಹಿಸಿದರು.

ಖಾಸಗೀಕರಣದ ಹಿನ್ನೆಲೆಯಲ್ಲಿ ಹೆಚ್ಚು ಹೆಚ್ಚು ಶುಲ್ಕ ವಿಧಿಸುತ್ತಿರುವುದರಿಂದ ದಲಿತರು ಶಿಕ್ಷಣ ಪಡೆಯಲು ಸಾಧ್ಯವಾಗುತ್ತಿಲ್ಲ. ಉದ್ಯೋಗ ಹಿಡಿಯಲು ಅವಕಾಶ ಸಿಗುತ್ತಿಲ್ಲ. ಭೂಮಿಯ ಹಂಚಿಕೆ ಮಾಡುತ್ತಿಲ್ಲ. ಹಲವು ವರ್ಷಗಳಿಂದ ದಲಿತರಿಗೆ ಭೂಮಿ ನೀಡುವಂತೆ ಮನವಿ ಮಾಡುತ್ತ ಬಂದರೂ ಸರ್ಕಾರ ಈ ಬಗ್ಗೆ ಗಮನಹರಿಸುತ್ತಿಲ್ಲ ಎಂದು ಟೀಕಿಸಿದರು.

ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕ ಗೋಪಾಲಕೃಷ್ಣ ಮಾತನಾಡಿ ರಾಜ್ಯದಲ್ಲಿ 35 ಸಾವಿರ ಮುಜರಾಯಿ ದೇವಾಲಗಳಿವೆ. ಇಷ್ಟೊಂದು ದೇವಾಲಯಗಳಿದ್ದರೂ ಇದುವರೆಗೂ ದಲಿತ ಅರ್ಚಕರನ್ನು ನೇಮಕ ಮಾಡಿಲ್ಲ. ಹಿಂದೆ ಸರ್ಕಾರ ಸಂಸ್ಕೃತ ವಿವಿಗಳಲ್ಲಿ ವಿದ್ಯಾಭ್ಯಾಸ ಮಾಡಿದವರಿಗೆ ಅರ್ಚಕ ಹುದ್ದೆ ನೀಡಲಾಗುವುದು ಎಂದು ಆದೇಶ ಹೊರಡಿಸುವ ಮೂಲಕ ಅಸ್ಪೃಶ್ಯತೆಯನ್ನು ಆಚರಿಸುತ್ತಿದೆ ಎಂದು ಹೇಳಿದರು.

ಸ್ವಾತಂತ್ರ್ಯ ಬಂದು ಏಳು ದಶಕ ಕಳೆದರೂ ದಲಿತರಿಗೆ ದೇವಸ್ಥಾನ ಪ್ರವೇಶ ಸಾಧ್ಯವಾಗಿಲ್ಲ. ದೇವಾಲಯಗಳಲ್ಲಿ ದಲಿತ ಅರ್ಚಕರ ನೇಮಕ ಮಾಡಿಲ್ಲ. ಉದ್ಯೋಗದ ಪ್ರಶ್ನೆಯ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಮಂತ್ರಗಳನ್ನು ಹೇಳುವ ದಲಿತರಿಗೆ ಅರ್ಚಕರನ್ನಾಗಿ ನೇಮಕ ಮಾಡಬೇಕು. ಸಂಸ್ಕೃತ ದೇವಭಾಷೆ ಎಂದು ಹೇಳುವ ಮೂಲಕ ತಾರತಮ್ಯ ಮಾಡಲಾಗುತ್ತಿದೆ ಎಂದು ದೂರಿದರು.

ಬಡ್ತಿ ಮೀಸಲಾತಿ ಸಂಬಂಧ ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿ ರಾಜ್ಯಪಾಲರಿಗೆ ಕಳಿಸಿದರೆ ಎರಡು ಬಾರಿ ಅದಕ್ಕೆ ಅಂಕಿತ ಹಾಕದೆ ತಿರಸ್ಕರಿಸಿದ್ದಾರೆ. ಬಡ್ತಿ ಮೀಸಲಾತಿ ಪ್ರಶ್ನೆ ಬರುತ್ತಿದ್ದಂತೆಯೇ ಮೇಲ್ವರ್ಗದವರಿಗೆ ಕಣ್ಣು ಕೆಂಪಾಗುತ್ತಿವೆ. ಸಂಪುಟದ ಸಹದ್ಯೋಗಿಗಳೇ ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ಮುಖ್ಯಮಂತ್ರಿಗಳು ಬಡ್ತಿ ಮೀಸಲಾತಿ ಪರವಾಗಿದ್ದು ಈ ಸಂಬಂಧ ಬೆಳಗಾವಿ ಅಧಿವೇಶನದಲ್ಲಿ ಹೋರಾಟ ನಡೆಸಿ ಇದು ಜಾರಿಗೆ ಬರುವಂತೆ ನೋಡಿಕೊಳ್ಳಬೇಕಾಗಿದೆ ಎಂದರು.

ದಲಿತ ಹೋರಾಟಗಳು ಸ್ಥಗಿತಗೊಂಡಿವೆ. ಶಕ್ತಿ ಕಳೆದುಕೊಂಡಂತೆ ಕಾಣಿಸುತ್ತಿದೆ. ಇದರ ಚಲಶೀಲತೆಗೊಳ್ಳುವಂತೆ ಮಾಡಲು ದಲಿತ ಹಕ್ಕುಗಳ ಸಮಿತಿ ಶ್ರಮಿಸಬೇಕಾಗಿದೆ. ಸಮಾನತೆ, ಸ್ವಾಭಿಮಾನದ ಪ್ರಶ್ನೆಯಾಗಿ ಹೋರಾಟ ಮುಂದುವರಿಯಬೇಕು. ಹಿರಿಯ ದಲಿತ ಐಎಎಸ್ ಅಧಿಕಾರಿಗಳು ಕೂಡ ಜಾತಿ ವ್ಯವಸ್ಥೆ ಹೋಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಹಾಗಾಗಿ ನಾವು ಜಾತಿ ವ್ಯವಸ್ಥೆ ನಿರ್ಮೂಲನೆ ಮಾಡಲು ಅಂತರ್‌ಜಾತಿ ವಿವಾಹ ಮಾಡುತ್ತಿದ್ದೇವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಸಂಚಾಲಕ ಈ. ಶಿವಣ್ಣ, ಸಹ ಸಂಚಾಲಕಿ ಎಸ್.ಡಿ.ಪಾರ್ವತಮ್ಮ, ಸದಸ್ಯರಾದ ಲಕ್ಷ್ಮಣ್, ದರ್ಶನ್ ಹಾಜರಿದ್ದರು.

ವರದಿ: ಎಸ್.ರಾಘವೇಂದ್ರ

ಕೇಳಿಸಿದ್ದು



ಹೋಗಿ ಕೆಲ್ಸಾ ನೋಡ್ಕಳೀ!

ಮಾತೆತ್ತಿದರೆ "ಇದು ಮೆಕಾಲೆಯ ಶಿಕ್ಷಣ ಪದ್ಧತಿಯ ಫಲ" ಎಂದು ಅರಬಾಯಿ ಇಡುವ ಈ ಮೆಕಾಲೆಯ ಪುತ್ರರತ್ನಗಳು "ಸ್ಕಿಲ್ ಇಂಡಿಯಾ" ಹೆಸರಿನಲ್ಲಿ ಮತ್ತದೇ ಗಲ್ಲೆ ಹತ್ತಿ ಕುಳಿತುಕೊಳ್ಳುವ 'ಸೇವಾ ಕೌಶಲ' ಕಲಿಸುತ್ತಿವೆಯೇ ಹೊರತು ಗ್ರಾಮೀಣ ಭಾರತದ 'ಶ್ರಮ ಕೌಶಲ'ವನ್ನಲ್ಲ. ಪಿ. ಸಾಯಿನಾಥ್ ಅವರು ಸರಿಯಾಗಿಯೇ ಗುರುತಿಸಿರುವಂತೆ ಪಾರಂಪರಿಕವಾಗಿ ರೇಶ್ಮೆ ಸೀರೆ ನೇಯುತ್ತಿದ್ದವರಿಗೆ ರಿಕ್ಷಾ ಚಾಲನೆ ಕೌಶಲ ಕಲಿಸುವ ಬುದ್ಧಿವಂತಿಕೆ ಇದು!

ಕೇಂದ್ರ ಸರ್ಕಾರ ಕೊಡುವ ಲೆಕ್ಕಾಚಾರಗಳ ಪ್ರಕಾರ ಇಂಗ್ಲಂಡಿನಲ್ಲಿ 68%, ಜರ್ಮನಿಯಲ್ಲಿ 75%, ಅಮೆರಿಕದಲ್ಲಿ 52%, ಜಪಾನಿನಲ್ಲಿ 80%, ದಕ್ಷಿಣ ಕೊರಿಯಾದಲ್ಲಿ 96% ಜನ ಕೌಶಲಭರಿತರು. ಆದರೆ, ಭಾರತದಲ್ಲಿ ಕೌಶಲ ಹೊಂದಿರುವ ಜನರ ಸಂಖ್ಯೆ ಕೇವಲ 2. 3%!

ಭಾರತೀಯ ಕೈಗಾರಿಕೆಗಳ ಮಹಾಸಂಘ (CII) ಸಿದ್ಧಪಡಿಸಿದ 2017ನೇ ಸಾಲಿನ ಇಂಡಿಯಾ ಸ್ಕಿಲ್ ರಿಪೋರ್ಟ್ ಹೊರಬಂದಿದ್ದು, ಅದು ಹೇಳುವ ಪ್ರಕಾರ ದೇಶದಲ್ಲಿ ವಿದ್ಯಾಭ್ಯಾಸ ಹೊಂದಿದ್ದು, ಉತ್ಪಾದಕ ವಯೋವರ್ಗದಲ್ಲಿ ಬರುವ ನೂರಕ್ಕೆ 60 ಮಂದಿ ಉದ್ಯೋಗಕ್ಕೆ ಅಗತ್ಯ ಕೌಶಲಗಳನ್ನು ಹೊಂದಿಲ್ಲ! (ಅಂದರೆ ಎಂಪ್ಲಾಯೆಬಲ್ ಅಲ್ಲ). ಅಂದರೆ, ಹಲವು ಉದ್ಯೋಗಗಳು ಖಾಲಿ ಇದ್ದರೂ ಅ ಜಾಗ ತುಂಬಬಲ್ಲ ಕೌಶಲಗಳನ್ನು ಹೊಂದಿರುವವರ ಸಂಖ್ಯೆ ತೀರಾ ಕಡಿಮೆ ಇದೆ. 2016ರಲ್ಲಿ ಈ ಪ್ರಮಾಣ 66.88% ಇತ್ತು.

ಹಿಂದೆ ಮನಮೋಹನ್ ಸಿಂಗ್ ಸರಕಾರದಲ್ಲೇ ಚಾಲ್ತಿ ಇದ್ದ ಸ್ಕಿಲ್ ಡೆವಲಪ್ಮೆಂಟ್ ಪ್ರಯತ್ನಗಳಿಗೆ ಚೆಂದದ "ಸ್ಕಿಲ್ ಇಂಡಿಯಾ" ಅಂಗಿ ತೊಡಿಸಿ ಮಾರಾಟಕ್ಕೆ ಯತ್ನಿಸಿದ ಪ್ರಧಾನಿ ಮೋದಿಯವರ ಪ್ರಯತ್ನಗಳು, ಆ ಯೋಜನೆಯ ಖಾಲಿತನ ಮತ್ತು ಅದನ್ನು ಅನುಷ್ಠಾನಕ್ಕೆ ತರಬೇಕಾದ ಅಧಿಕಾರಿಗಳ ಅಸಡ್ಡೆಯ ಕಾರಣದಿಂದಾಗಿ ಮುಂದೂ ಹೋಗದೇ ಹಿಂದೂ ಹೋಗದೇ ಅಟಕಾಯಿಸಿಕೊಂಡಿದೆ ಎಂಬುದನ್ನು ಅಂಕಿಸಂಖ್ಯೆಗಳು ಸಾರಿಹೇಳುತ್ತಿವೆ. ದೇಶದೊಳಗೆ ಇರುವ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಿ, ಅಲ್ಲಿ ಕೌಶಲ ತುಂಬುವ ಮೂಲಕ ಅಲ್ಲಿಂದ ಬರುವ ಮುಂದಿನ ಪೀಳಿಗೆ ಉತ್ಪಾದಕವಾಗುವಂತೆ ಪ್ರಯತ್ನಿಸುವ ಬದಲು, ಆ ಇಡಿಯ ವ್ಯವಸ್ಥೆಯನ್ನು ಖಾಸಗಿಗೆ ಮಾರಿ ಕೈತೊಳೆದುಕೊಂಡು, ಖಾಸಗಿಯವರ ಕೈಯಾಳು– ಕಾಲಾಳುಗಳು, ಬಗಲು ಬಂಟರನ್ನು ತಯಾರಿಸುವ ಕಾರ್ಖಾನೆಗಳನ್ನಾಗಿ ಮಾಡುವುದೇ ಸರಕಾರದ ಪರಮೋದ್ದೇಶ ಆಗಿರುವಂತಿದೆ.

– ರಾಜಾರಾಂ ತಲ್ಲೂರು ("ಅವಧಿ"ಯಲ್ಲಿ)

ಬರ ಮತ್ತು ನೆರೆ ಹಾವಳಿಯಿಂದ ವೀಳ್ಯದೆಲೆ ಬಳೆಗಾರರು ಕಂಗಾಲು

ಮಳವಳ್ಳಿ ತಾಲೂಕಿನಲ್ಲಿ ಎಪ್ಪತ್ತೆಂಬತ್ತು ಎಕರೆಯಲ್ಲಿ ವೀಳ್ಯದೆಲೆ ಬೆಳೆದು ನೂರಾರು ಕುಟುಂಬಗಳು ಜೀವನ ನಡೆಸುತ್ತಿದ್ದರು. ಆದರೆ ಮಳೆ .ನೀರು ಇಲ್ಲದ ಕಾರಣ ಬರದಿಂದ ಹತ್ತಾರು ಎಕರೆ ವೀಳ್ಯದೆಲೆ ತೋಟ ಒಣಗಿ ಹಾಳಾದರೆ ಈಗ ವಿಪರಿತ ಮಳೆಯಿಂದ ಶೀತವಾಗಿ ಗಿಡದ ತಾಳು ಕೊಳತು ಬೆಳೆಯೆಲ್ಲ ಹಾಳಾಗಿದೆ. ಆದ್ದರಿಂದ ಬೆಳೆಗಾರರಿಗೆ ಸೂಕ್ತ ಪರಿಹಾರಿ ನೀಡಬೇಕೆಂದು ವೀಳ್ಯದೆಲೆ ಬೆಳೆಗಾರರ ಸಂಘ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘ ಒತ್ತಾಯಿಸಿದೆ.

ಒಂದು ಎಕರೆಯಲ್ಲಿ ವೀಳ್ಯದೆಲೆ ಬೆಳೆಯಬೇಕಾದರೆ ಕನಿಷ್ಟ ಮೂರುವರೆಯಿಂದ ನಾಲ್ಕು ಲಕ್ಷ ರೂ.ಗಳು ಖರ್ಚು ಬರುತ್ತದೆ. ಎರಡು ವರ್ಷಗಳ ನಂತರ ಎಲೆ ಕುಯ್ದು ಮಾರಾಟ ಮಾಡಲಾಗುತ್ತದೆ.

ಆದರೆ ಒಂದು ಪಿಂಡಿಗೆ (10,000 ಎಲೆ) ಕೇವಲ 1500 ರೂ ಬೆಲೆಯಿದೆ. ಇದನ್ನ ಕುಯ್ದು ಮಾರುಕಟ್ಟೆಗೆ ತೆಗೆದು ಕೊಂಡು ಹೋಗಲು ಅಷ್ಟೇ ಖರ್ಚು ಬರುತ್ತದೆ. ಬಹುತೇಕ ರೈತರು ಗೇಣಿದಾರರಾಗಿದ್ದು ಸಾಲ ಮಾಡಿ ಬಂಡವಾಳ ಹಾಕಿದ್ದರು. ಮಾಡಿದ ಖರ್ಚು ಸಹ ಸಿಗದೆ ಸಾಲದ ಸುಳಿಯಲ್ಲಿ ಬದುಕುತಿದ್ದಾರೆ. ಪ್ರಮುಖವಾಗಿ ಹಿಂದಳಿದ ಗಂಗಾಮತಸ್ಥ ಜಾತಿಗೆ ಸೆರಿದ ಕುಟುಂಬದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮಳವಳ್ಳಿ, ತಮ್ಮಡಹಳ್ಳಿ, ಮಾಗನೂರು, ದಾಸನದೊಡ್ಡಿ, ಹುಸ್ಕೂರು, ಕುಲುಮೆದೊಡ್ಡಿ, ಬಾಳೆಹೊನ್ನಿಗ, ದಳವಾಯಿಕೊಡಿಹಳ್ಳಿ, ಬೆಳಕವಾಡಿ, ತಳಗವಾದಿ, ರಾವಣಿ ಮುಂತಾದ ಗ್ರಾಮಗಳಲ್ಲಿ 40 –50ಲಕ್ಷ ರೂ.ಗಳು ನಷ್ಟವಾಗಿ ಬಾದೆಗೆ ಒಳಗಾಗಿದ್ದಾರೆ. ಅದ್ದರಿಂದ ತಕ್ಷಣ ಪರಿಹಾರ ನೀಡಬೇಕು ಇಲ್ಲವಾದರೆ ತಹಸೀಲ್ದಾರ ಕಛೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಎನ್ ಎಲ್ ಭರತ್ ರಾಜ್, ವೀಳ್ಯದೆಲೆ ಬೆಳೆಗಾರರ ಸಂಘದ ಅಧ್ಯಕ್ಷರಾದ ನಾರಾಯಣಸ್ವಾಮಿ, ಕಾರ್ಯದರ್ಶಿಗಳಾದ ರವಿ ಎಂ.ಕೆ. ಎಚ್ಚರಿಸಿದ್ದಾರೆ.





ದಲಿತ ದೌರ್ಜನ್ಯ ಕಾಯ್ದೆ ತಿದ್ದುಪಡಿಯಾಗಲಿ

ದಲಿತರ ಮೇಲೆ ದೌರ್ಜನ್ಯ ನಡೆದಾಗ ದೌರ್ಜನ್ಯಕ್ಕೊಳಗಾದ ದಲಿತ ದೂರು ನೀಡಿದರೆ ಆಪಾದಿತನನ್ನು 24 ಗಂಟೆಯೊಳಗೆ ಕ್ರಮ ಜರುಗಿಸಬೇಕಾಗುತ್ತದೆ.ಆದರೆ ಇಂದಿನ ವ್ಯವಸ್ಥೆ ಮಾತ್ರ ಉಳ್ಳವರ ಪರವಾಗಿ ರುವುದರಿಂದ ದಲಿತರಿಗೆ ನ್ಯಾಯ ಸಿಗುವ ಬದಲು ಕೆಲವು ಕಡೆಗಳಲ್ಲಿ ಬಿ ರಿಪೋರ್ಟ್ ಹಾಕಿ ದುರ್ಬಲಗೊಳಿಸಲಾಗುತ್ತಿದೆ ಎಂದು ದಲಿತ ಹಕ್ಕುಗಳ ಸಮಿತಿ ರಾಜ್ಯ ಸಮಿತಿ ಮುಖಂಡರಾದ ಲಿಂಗಪ್ಪ ನಂತೂರು ಹೇಳಿದರು.

ಅವರು ಅಕ್ಟೋಬರ್ 15 ರಂದು ಕುಂದಾಪುರ ಹಂಚು ಕಾರ್ಮಿಕರ ಭವನದಲ್ಲಿ ನಡೆದ ಜಿಲ್ಲಾ ಮಟ್ಟದ ದಲಿತ ಹಕ್ಕುಗಳ ಸಮಾವೇಶ ಉಧ್ಘಾಟಿಸಿ ಮಾತನಾಡಿದರು.

2015ರಲ್ಲಿ ದಲಿತ ಹಕ್ಕುಗಳ ರಾಷ್ಟ್ರೀಯ ಮುಕ್ತಿ ಮಂಚ್ ಸಂಘಟನೆ ದುರುಪಯೋಗವಾಗುತ್ತಿರುವ ದಲಿತ ದೌರ್ಜನ್ಯ ಕಾಯ್ದೆಯನ್ನು ಬಿಗಿಗೊಳಿಸಲು ತಿದ್ದುಪಡಿ ಮಾಡಬೇಕೆಂದು ಹೋರಾಟ ನಡೆಸುತ್ತಿದೆ. ಪ್ರಭುತ್ವವೇ ಇಂದು ದಲಿತರಾದ ನಮ್ಮನ್ನು ತಿನ್ನಲು, ಬದುಕಲು ಬಿಡುತ್ತಿಲ್ಲ. ಮತಾಂಧರು ದಲಿತರನ್ನು ರಾಜಕೀಯ ಲಾಭಕ್ಕಾಗಿ ಕೋಮುಗಲಭೆಗಳಿಗಾಗಿ ಬಳಸಲಾಗುತ್ತಿದೆ. ರಾಜ್ಯದಲ್ಲಿ ಇದುವರೆಗೆ 2 ಲಕ್ಷ 60 ಸಾವಿರ ದಲಿತ ಯುವಕರ ಮೇಲೆ ದೂರು ದಾಖಲಾಗಿದೆ. ದಲಿತ ಅನುಭವಿಸುವ ಅವಮಾನ, ಅಪಮಾನದ ವಿರುದ್ಧ ಹೋರಾಟ ಮಾಡುವ ಮನೋಭಾವ ಬೆಳೆಸುವ ಬದಲು ದಾರಿತಪ್ಪಿಸಲಾಗುತ್ತಿದೆ. ಆದ್ದರಿಂದ ದಲಿತರ ಹಕ್ಕುಗಳನ್ನು ಪಡೆಯಲು ಹೋರಾಟ ನಡೆಸಬೇಕು ಎಂದರು. ಈ ವೇಳೆಯಲ್ಲಿ ಸಭೆಯ ಅಧ್ಯಕ್ಷತೆಯನ್ನು ರವಿ ವಿ ಎಂ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಬಾಲಕ್ರಷ್ಣಶೆಟ್ಟಿ ಮಾತನಾಡಿದರು. ದಲಿತ ಹಕ್ಕುಗಳ ಸಂಚಲನಾ ಸಮಿತಿಗೆ ರವಿ ವಿ.ಎಂ,ಅರುಣ್ ಕುಮಾರ್ ನಾಗರತ್ನ ನಾಡ ರವರನ್ನು ಸಂಚಾಲಕರನ್ನಾಗಿ ಆಯ್ಕೆ ಮಾಡಲಾಯಿತು. ಕೆ.ಶಂಕರ್, ಮಹಾಬಲ ವಡೇರಹೋಬಳಿ, ಹೆಚ್ ನರಸಿಂಹ, ಸುರೇಶ್ ಕಲ್ಲಾಗರ ಉಪಸ್ಥಿತರಿದ್ದರು.

ಸೌಂದರ್ಯ, ಪ್ರೀತಿಯ ಸಂಕೇತ ತಾಜ್ ಮಹಲ್ ಹಾಗೂ ವಕ್ರ ಬುದ್ಧಿಯ ಹಿಂದೂತ್ವವಾದಿಗಳು

ಮೊಘಲ್ ಅವಧಿಯ ಇತಿಹಾಸ ಮತ್ತು ಅದಕ್ಕೆ ಸಂಬಂಧಿಸಿದ ಸ್ಮಾರಕಗಳಿಗೆ ಸಂಬಂಧಿಸಿದಂತೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ನೇರ ದಾಳಿ ಇತಿಹಾಸವನ್ನು ಪುನಃ ಬರೆಯುವ ಹಾಗೂ 'ಭವ್ಯ ಹಿಂದೂ ಇತಿಹಾಸ'ಕ್ಕೆ ವಿರುದ್ಧವಾದ ಪ್ರತಿಯೊಂದು ಕಣವೂ ಅನಿಷ್ಟ, ಅದನ್ನು ಮರೆಗೊಳಿಸಬೇಕು ಎಂದು ಬಿಂಬಿಸುವ ಜಗತ್ತಿನ ಬಗ್ಗೆ ವಕ್ರ ಮತ್ತು ಮತಾಂಧ ದೃಷ್ಟಿಯ ಒಂದು ಎದ್ದು ಕಾಣುವ ಉದಾಹರಣೆಯಾಗಿದೆ.

ಕಟ್ಟಾ ಹಿಂದೂತ್ವವಾದಿಗಳ ದುರದೃಷ್ಟವೆಂದರೆ ತಾಜ್ ಮಹಲ್ ವಿರುದ್ಧದ ಅವರ ಬಡಬಡಿಕೆಯನ್ನು ಕೇಳುವವರಿಲ್ಲ.



ಪ್ರಕಾಶ ಕಾರಟ್

ಉತ್ತರ ಪ್ರದೇಶದ ಈಗಿನ ಆಳುವ ಮಂದಿಯದ್ದು ಮಧ್ಯಯುಗೀನ ಮನೋಚಾಳಿ. ಅದಕ್ಕೆ ಜಗತ್ತಿನ ಅತ್ಯಂತ ಸುಂದರ ಕಟ್ಟಡಗಳಲ್ಲಿ ಒಂದೆನಿಸಿರುವ ತಾಜ್ ಮಹಲ್ ಕುರಿತ ಅವರ ಧೋರಣೆಗಿಂತ ಬೇರೆ ಸಾಕ್ಷಿ ಬೇಕಾಗಿಲ್ಲ.

ತಾಜ್ ಮಹಲ್ ಕುರಿತ ಈ ಅಪಪ್ರಚಾರವನ್ನು ಸ್ವತಃ ಮುಖ್ಯಮಂತ್ರಿ ಆದಿತ್ಯನಾಥ ಅವರೇ ಆರಂಭಿಸಿದ್ದರು. ತಾಜ್ ಮಹಲ್ ಮತ್ತು ಅಂಥ ಇನ್ನೂ ಅನೇಕ ಮೊಘಲ್ ಸ್ಮಾರಕಗಳು ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದಿಲ್ಲ ಎಂದು ಅವರು ಹೇಳಿದ್ದರು. ಅದಾದ ನಂತರ ಉತ್ತರ ಪ್ರದೇಶದ ಪ್ರವಾಸೋದ್ಯಮ ಇಲಾಖೆ ತಾನು ಪ್ರಕಟಿಸಿದ ರಾಜ್ಯದ ಪ್ರೇಕ್ಷಣೀಯ ಸ್ಥಳಗಳ ಪಟ್ಟಿಯಿಂದ ತಾಜ್ ಮಹಲ್‌ಅನ್ನು ಕೈಬಿಟ್ಟಿತ್ತು. ಅದರ ಬದಲು ಆದಿತ್ಯನಾಥ ಮಹಂತ ನಾಗಿರುವ ಗೋರಖಪುರ ಸೇರಿದಂತೆ ಹಿಂದೂ ಧಾರ್ಮಿಕ ಸ್ಥಳಗಳನ್ನು ಮಾತ್ರ ಅದು ಪಟ್ಟಿಯಲ್ಲಿ ಸೇರಿಸಿತ್ತು.

ಇಲಾಖೆಯ ಈ ನಿರ್ಧಾರವನ್ನು ಸಮರ್ಥಿಸುವ ಭರದಲ್ಲಿ ರಾಜ್ಯದ ಬಿಜೆಪಿ ಶಾಸಕ ಸಂಗೀತ್ ಸೋಮ್, 2013ರಲ್ಲಿ ಮುಜಫರ್‌ಪುರದಲ್ಲಿ ನಡೆದ ಹಿಂಸಾಚಾರಗಳಿಗೆ ಪ್ರಚೋದನೆ ನೀಡಿದ ಕುಖ್ಯಾತಿಯ ಈತ ಅಸಂಬದ್ಧವಾಗಿ ತಾಜ್ ಮಹಲ್ ಕಟ್ಟಿದ ಷಾಹ ಜಹಾನ್ ತನ್ನ ತಂದೆಯನ್ನು ಜೈಲಿಗೆ ಹಾಕಿದ್ದ ಹಾಗೂ ಹಿಂದೂಗಳನ್ನು ಹಿಂಸಿಸಿದ್ದ, ಆದ್ದರಿಂದ ಇಂಥ ಇತಿಹಾಸವನ್ನು ನಮ್ಮದಲ್ಲ ಎನ್ನಬೇಕು ಎಂದರು. ಸಂಗೀತ್ ಸೋಮ್, ಷಾಹ ಜಹಾನ್ ಮತ್ತು ಔರಂಗಜೇಬ್ ನಡುವೆ ಗೊಂದಲ ಮಾಡಿಕೊಂಡಿದ್ದಾರೆ. ಯಾಕೆಂದರೆ, ತಂದೆಯನ್ನು ಸೆರೆಮನೆಗೆ ತಳ್ಳಿದ್ದು ಔರಂಗಜೇಬ್.




ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್

ಈ ಅಸಹ್ಯಕರ ಸೋಮ್ ಹೇಳಿಕೆ ವಿರುದ್ಧ ದೇಶದಾದ್ಯಂತ ಆಕ್ರೋಶ ವ್ಯಕ್ತವಾದ ಹಿನ್ನೆಲೆಯಲ್ಲಿ ಆದಿತ್ಯನಾಥ ಡ್ಯಾಮೇಜ್ ಸೀಮಿತಗೊಳಿಸುವ ಪ್ರಯತ್ನಕ್ಕೆ ಇಳಿದಿದ್ದಾರೆ. ತಾಜ್ ಮಹಲ್ ಕಟ್ಟಿದ್ದು ಭಾರತದ ಪುತ್ರರು ಮತ್ತು ಶ್ರಮಿಕರ 'ಬೆವರು ಮತ್ತು ರಕ್ತದಿಂದ' ಎಂದು ಅವರು ಹೇಳಿದ್ದಾರೆ. ಅಲ್ಲದೆ ಈ ಸ್ಮಾರಕದ ಸಂರಕ್ಷಣೆಗೆ ಉತ್ತರ ಪ್ರದೇಶ ಸರಕಾರ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತದೆ ಎಂದೂ ಅವರು ಹೇಳಿದ್ದಾರೆ.

ಮೊಘಲ್ ಕಾಲದ ಐತಿಹಾಸಿಕ ಸ್ಮಾರಕಗಳಿಗೆ ಸಂಬಂಧಿಸಿದಂತೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ತಮ್ಮ ತಂತ್ರಗಳನ್ನು ಬದಲಾಯಿಸಿ ಕೊಂಡಿವೆ. ತಾಜ್ ಮಹಲ್ ಮೂಲತಃ ಒಂದು ಹಿಂದೂ ದೇವಾಲಯವಾಗಿತ್ತು ಎಂದು ಆರ್‌ಎಸ್‌ಎಸ್ ಮೊದಲಿಗೆ ಹೇಳಿತ್ತು. ಪಿ.ಎನ್. ಓಕ್ ಎಂಬುವವರು ಜೀವಮಾನ ಪರ್ಯಂತ ಹೀಗೆಂದು ಪ್ರಚಾರ ಮಾಡುತ್ತ ಬಂದಿದ್ದರು. ಈ ರೀತಿಯಾಗಿ ಮುಸ್ಲಿಂ ಸ್ಮಾರಕಗಳು ಮತ್ತು ಮಸೀದಿಗಳನ್ನು ಮೂಲತಃ ಹಿಂದೂ ಸ್ಥಳಗಳು ಎಂದು ಹೇಳುವುದು ಹಿಂದೂತ್ವ ಪ್ರಚಾರಕರ ಚಟವಾಗಿ ಬಿಟ್ಟಿದೆ. ರಾಮ ಜನ್ಮ ಸ್ಥಳ ಎಂದು ಹೇಳಿ ರಾಮ ಮಂದಿರವನ್ನು ಕಟ್ಟಲೆಂದು ಬಾಬರಿ ಮಸೀದಿಯನ್ನು ನಾಶ ಮಾಡಿದ್ದು ಇಂತಹ ಪ್ರಚಾರದಲಲಿ ಎದ್ದು ಕಂಡಿರುವಂತದ್ದು.

ಈಗ ಅಧಿಕಾರಾರೂಢವಾಗಿರುವ ಬಿಜೆಪಿ ಮತ್ತು ಆರ್‌ಎಸ್‌ಎಸ್ ಮೊಘಲ್ ಅವಧಿಯ ಇತಿಹಾಸ ಮತ್ತು ಅದಕ್ಕೆ ಸಂಬಂಧಿಸಿದ ಸ್ಮಾರಕಗಳಿಗೆ ಸಂಬಂಧಿಸಿದಂತೆ ನೇರ ದಾಳಿಗೆ ಇಳಿದಿವೆ. ಅವುಗಳು ಭಾರತೀಯ ಸಂಸ್ಕೃತಿಗೆ ಪರಕೀಯವಾಗಿವೆ ಹಾಗೂ ಹಿಂದೂ ನಾಗರಿಕತೆಗೆ ಒಂದು ಕಪ್ಪು ಚುಕ್ಕೆ ಎಂದು ಬಣ್ಣಿಸಲಾಗುತ್ತಿದೆ.



ಇದು ಇತಿಹಾಸವನ್ನು ಪುನಃ ಬರೆಯುವ ಹಾಗೂ 'ಭವ್ಯ ಹಿಂದೂ ಇತಿಹಾಸ'ಕ್ಕೆ ವಿರುದ್ಧವಾದ ಪ್ರತಿಯೊಂದು ಕಣವೂ ಅನಿಷ್ಟ, ಅದನ್ನು ಮರೆಗೊಳಿಸಬೇಕು ಎಂದು ಬಿಂಬಿಸುವ ದೊಡ್ಡ ಯೋಜನೆಯ ಭಾಗವಾಗಿದೆ, ತಾಜ್ ಮಹಲ್ ಅನ್ನು ಹೀಗಳೆಯುವ ಈ ಪ್ರಕ್ರಿಯೆ ಜಗತ್ತಿನ ಬಗ್ಗೆ ವಕ್ರ ಮತ್ತು ಮತಾಂಧ ದೃಷ್ಟಿಯ ಒಂದು ಬಹುದೊಡ್ಡ ಎದ್ದು ಕಾಣುವ ಉದಾಹರಣೆಯಾಗಿದೆ. ಈ ರೀತಿಯ ಕುರುಡು ದೃಷ್ಟಿಕೋನದಿಂದಾಗಿ ಉತ್ತರ ಪ್ರದೇಶ ರಾಜ್ಯದ ಪ್ರತಿಷ್ಠೆಗೆ ಧಕ್ಕೆ ಬರುತ್ತದೆ ಹಾಗೂ ಜನರ ದೃಷ್ಟಿಯಲ್ಲಿ ಬಿಜೆಪಿ ಅಪಹಾಸ್ಯಕ್ಕೀಡಾಗುತ್ತದಷ್ಟೇ.

ಕಟ್ಟಾ ಹಿಂದೂತ್ವವಾದಿಗಳ ದುರದೃಷ್ಟವೆಂದರೆ ತಾಜ್ ಮಹಲ್ ವಿರುದ್ಧದ ಅವರ ಬಡಬಡಿಕೆಯನ್ನು ಒಪ್ಪಲು ಯಾರೂ ಸಿದ್ಧರಿಲ್ಲ. ತಾಜ್ ಮಹಲ್ ಜಗತ್ತಿನೆಲ್ಲೆಡೆಯ ಹಾಗೂ ಭಾರತದ ಕೋಟ್ಯಂತರ ಜನರನ್ನು ಆಕರ್ಷಿಸುತ್ತಲೇ ಇರುತ್ತದೆ. ಇದೊಂದು ಅನುಪಮ ಸೌಂದರ್ಯ ಹಾಗೂ ಪ್ರೀತಿಯ ಸ್ಮಾರಕ ಎಂಬ ತಾಜ್ ಮಹಲ್‌ನ ನಿಜವಾದ ಮೌಲ್ಯವನ್ನು ಈ ಜನರು ಅರಿತಿದ್ದಾರೆ.

ಅನು: ವಿಶ್ವ

ವಿವಿಧ ಜನಸಂಘಟನೆಗಳ ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳಲು ಜನತೆಗೆ ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಪುಟ 2 ರಿಂದ

ಇಂತಹ ಕ್ರಮಗಳಲ್ಲಿ ಇತ್ತೀಚಿನದೆಂದರೆ, ಮುಹಮ್ಮದ್ ಅಖ್ಲಾಕ್‌ನ ಕೊಲೆಗಡುಕರನ್ನು ಗೌರವಿಸಿರುವುದು. ಕೆಲವು ಸಮಯದ ಹಿಂದೆ ಜೈಲಿನಲ್ಲಿ ಸತ್ತ ಮುಖ್ಯ ಆಪಾದಿತನ ಶವಕ್ಕೆ ರಾಷ್ಟ್ರೀಯ ಬಾವುಟವನ್ನು ಹೊದಿಸಲಾಗಿತ್ತು, ಮತ್ತು ಆತನ ಪತ್ನಿಗೆ ಉತ್ತರಪ್ರದೇಶ ಸರಕಾರ ಪ್ರಾಥಮಿಕ ಶಾಲೆಯೊಂದರಲ್ಲಿ ಉದ್ಯೋಗದ ಆಶ್ವಾಸನೆ ನೀಡಿತ್ತು. ಈಗ ಇತರ ಆಪಾದಿತರಿಗೆ ರಾಷ್ಟ್ರೀಯ ತಾಪ ವಿದ್ಯುತ್ ನಿಗಮದಲ್ಲಿ ಉದ್ಯೋಗದ ಆಹ್ವಾನ ನೀಡಲಾಗಿದೆ.

ಕ್ರಿಮಿನಲ್‌ಗಳಿಗೆ ಕೊಡಮಾಡುವ ಇಂತಹ ಇನಾಮುಗಳು ಇಂತಹ ಇನ್ನಷ್ಟು ಪಡೆಗಳ ಧೈರ್ಯವನ್ನು ಹಿಗ್ಗಿಸಿ ಇಂತಹ ಇನ್ನಷ್ಟು ಹಲ್ಲೆಗಳಲ್ಲಿ ತೊಡಗುವಂತೆ ಪ್ರೋತ್ಸಾಹ ನೀಡುತ್ತದೆ. ಕೇವಲ ಎರಡು ದಿನಗಳ ಹಿಂದೆ ಫರೀದಾಬಾದ್‌ನಲ್ಲಿ ಐವರು ಮುಸ್ಲಿಮರ ಮೇಲೆ ಅವರು ಗೋಮಾಂಸ ಒಯ್ಯುತ್ತಿದ್ದಾರೆಂದು ಆಪಾದಿಸಿ ಹಲ್ಲೆ ಮಾಡಿರುವುದು ಇದನ್ನು ಸಾಬೀತು ಮಾಡುತ್ತದೆ.

ಇಂತಹ ಎಲ್ಲ ಆರೆಸ್ಸೆಸ್-ಪ್ರೇರಿತ ಖಾಸಗಿ ಸೇನೆಗಳ ಮೇಲೆ ಒಂದು ಕೇಂದ್ರೀಯ ನಿಷೇಧ ಇರಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಿಸಿದೆ.

ಹದಗೆಡುತ್ತಿರುವ ಆರ್ಥಿಕ ಸನ್ನಿವೇಶ ಹೆಚ್ಚುತ್ತಿರುವ ಜನಗಳ ಮೇಲಿನ ಹೊರೆಗಳು

ದೇಶದ ಆರ್ಥಿಕತೆ ಹೆಚ್ಚೆಚ್ಚು ಹದಗೆಡುತ್ತಿದೆ ಮತ್ತು ಜನಗಳ ಸಂಕಟಗಳು ಹೆಚ್ಚುತ್ತಿವೆ ಎಂಬದನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಆತಂಕದಿಂದ ಗಮನಿಸಿದೆ. ನೋಟುರದ್ಧತಿ ಮತ್ತು ಜಿಎಸ್‌ಟಿಯ ವೈಫಲ್ಯಗಳು ಕಾಡಲಾರಂಭಿಸಿವೆ. ಹೆಚ್ಚೆಚ್ಚು ರೈತರು ಹತಾಶೆಯಿಂದ ಆತ್ಮಹತ್ಯೆಗಳನ್ನು ಮಾಡುತ್ತಿರುವುದು ಕರ್ಷಕ ಬಿಕ್ಕಟ್ಟು ಆಳಗೊಳ್ಳುತ್ತಿರುವುದನ್ನು ಬಿಂಬಿಸುತ್ತದೆ, ಮತ್ತು ಮಧ್ಯಮ, ಸಣ್ಣ ಮತ್ತು ಕಿರುಗಾತ್ರದ ಉದ್ದಿಮೆಗಳು ಸುಮಾರಾಗಿ ಧ್ವಂಸಗೊಂಡಿರುವುದರಿಂದಾಗಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ನಷ್ಟ ಸಂಭವಿಸುತ್ತಿದೆ. ಮನರೇಗದಂತಹ ಯೋಜನೆಗಳಿಗೆ ಹಣನೀಡಿಕೆಯಲ್ಲಿ ಭಾರೀ ಕಡಿತಗಳು ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳ ಕತ್ತನ್ನು ಮತ್ತಷ್ಟು ಹಿಸುಕುತ್ತಿವೆ. ಸೇವಾವಲಯವೂ ಕುಗ್ಗುತ್ತಿದ್ದು ಅದರಿಂದಾಗಿಯೂ ಉದ್ಯೋಗನಷ್ಟಗಳು ಸಂಭವಿಸುತ್ತಿವೆ. ಆರ್ಥಿಕ ಪರಿಸ್ಥಿತಿಯ ಒಟ್ಟಾರೆ ಚಿತ್ರ ವಿಷಣ್ಣತೆಯಿಂದ ಕೂಡಿದೆ. ಏನು ಮಾಡುವುದೆಂದು ತೋಚದೆ ಮೋದಿ ಸರಕಾರ ಮಾತಿನ ಮಾಯಾಜಾಲ ಕಟ್ಟುತ್ತಿರುವಂತೆ ಕಾಣುತ್ತಿದೆ.

ಹಬ್ಬದ ಸೀಜನ್ನಿನಲ್ಲೂ ಚಿಲ್ಲರೆ ಮಾರುಕಟ್ಟೆಯಲ್ಲಿ ಮಂಕು ಕವಿದಿದೆ, ದೀಪಾವಳಿ ಸಂದರ್ಭದಲ್ಲೂ ಮಾರಾಟ ಹೆಚ್ಚಿಲ್ಲ.

ಇನ್ನೊಂದೆಡೆಯಲ್ಲಿ ದೊಡ್ಡ ಕಾರ್ಪೊರೇಟ್‌ಗಳು ಮರುಪಾವತಿ ಮಾಡದ ಸಾಲಗಳಲ್ಲಿ 2ಲಕ್ಷ ಕೋಟಿ ರೂ.ಗಳನ್ನು ಮನ್ನಾ ಮಾಡಿರುವುದನ್ನು ಸಿಪಿಐ(ಎಂ) ಕೇಂದ್ರಸಮಿತಿ ಖಂಡಿಸಿದೆ. ಬಾಕಿ ವಸೂಲಿಗೆ ಕ್ರಮಗಳನ್ನು ಆರಂಭಿಸದೆಯೇ, ಒಟ್ಟು ಸಾಲ ಮತ್ತು ಬಡ್ಡಿ ಬಾಕಿಯ(11.5ಲಕ್ಷ ಕೋಟಿರೂ.) 20%ದಷ್ಟಾಗುವ ಇಷ್ಟು ಹಣವನ್ನು ಬಿಟ್ಟುಕೊಡಲಾಗಿದೆ. ತದ್ವಿರುದ್ಧವಾಗಿ, ಸಣ್ಣ ರೈತರು ಮತ್ತು ಸಣ್ಣ ಸಾಲಗಳಿರುವ ಇತರರು ಮರುಪಾವತಿ ಮಾಡಲಾಗದಾಗ ಅವರ ಆಸ್ತಿಗಳನ್ನು ಕಿತ್ತುಕೊಳ್ಳಲಾಗುತ್ತದೆ.

ಹೆಚ್ಚುತ್ತಿರುವ ಜನತಾ ಹೋರಾಟಗಳು

ರಾಜಸ್ತಾನ, ಮಹಾರಾಷ್ಟ್ರ, ಮಧ್ಯಪ್ರದೇಶ, ಛತ್ತೀಸ್‌ಗಡ ಮತ್ತಿತರ ಕಡೆಗಳಲ್ಲಿ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಕನಿಷ್ಟ ಬೆಂಬಲ ಬೆಲೆ ಕೊಡಿಸುವ ಮತ್ತು ಸಾಲಮನ್ನಾದ ಬಿಜೆಪಿಯ ಚುನಾವಣಾ ಆಶ್ವಾಸನೆಯ ಈಡೇರಿಕೆಗಾಗಿ ಹೋರಾಟಗಳನ್ನು ಆರಂಭಿಸಿರುವ ರೈತರನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಅಭಿನಂದಿಸಿದೆ.

ಇಂತಹ ಕನಿಷ್ಟ ಬೆಂಬಲ ಬೆಲೆಯಲ್ಲಿ ರೈತರ ಉತ್ಪನ್ನವನ್ನು ಸರಕಾರ ಖರೀದಿಸುವುದನ್ನು ಕಡ್ಡಾಯಗೊಳಿಸುವ ಒಂದು ಶಾಸನವನ್ನು ತರಬೇಕೆಂಬ ಸಿಪಿಐ(ಎಂ)ನ ಆಗ್ರಹವನ್ನು ಕೇಂದ್ರ ಸಮಿತಿ ಪುನರುಚ್ಚರಿಸಿದೆ.

ಇತರ ವಿವಿಧ ಜನವಿಭಾಗಗಳೂ ವಿನಾಶಕಾರಿ ಆರ್ಥಿಕ ಧೋರಣೆಗಳ ವಿರುದ್ಧ ದೊಡ್ಡ ಹೋರಾಟಗಳಿಗೆ ಸಿದ್ಧತೆಗಳನ್ನು ನಡೆಸುತ್ತಿವೆ ಎಂಬುದನ್ನು ಗಮನಿಸಿರುವ ಕೇಂದ್ರಸಮಿತಿ ಈ ಪ್ರಯತ್ನಗಳಿಗೆ ಬೆಂಬಲ ಸೂಚಿಸುತ್ತಲೇ, ಮೋದಿ ಸರಕಾರದ ವಿಧ್ವಂಸಕಾರಿ ಪರಿಣಾಮಗಳಿಂದ ನರಳುತ್ತಿರುವ ಜನಗಳು ಕಾರ್ಮಿಕ ಸಂಘಗಳು, ರೈತರು, ವಿದ್ಯಾರ್ಥಿ-ಯುವಜನರು ಮತ್ತು ಇತರ ಜನವಿಭಾಗಗಳು ಯೋಜಿಸುತ್ತಿರುವ ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದೆ.

22ನೇ ಮಹಾಧಿವೇಶನಕ್ಕೆ ಸಿದ್ಧತೆಗಳು

ಪಕ್ಷದ 22ನೇ ಮಹಾಧಿವೇಶನವನ್ನು 2018ರ ಎಪ್ರಿಲ್ 18 ರಿಂದ 22ರ ವರೆಗೆ ನಡೆಸಲು ಕೇಂದ್ರ ಸಮಿತಿ ನಿರ್ಧರಿಸಿದೆ. ಒಟ್ಟು 765 ಚುನಾಯಿತ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಲಿದ್ದಾರೆ ಎಂದು ಅದು ಹೇಳಿದೆ. 22ನೇ ಮಹಾಧಿವೇಶನದ ಕರಡು ರಾಜಕೀಯ ಠರಾವನ್ನು ಪೊಲಿಟ್‌ಬ್ಯುರೊ ರೂಪುರೇಷೆ ಮತ್ತು ಕೇಂದ್ರ ಸಮಿತಿಯಲ್ಲಿನ ಚರ್ಚೆಯ ಆಧಾರದಲ್ಲಿ ಸಿದ್ಧಗೊಳಿಸಲು ಕೇಂದ್ರಸಮಿತಿ ಪೊಲಿಟ್‌ಬ್ಯುರೊಗೆ ಅಧಿಕಾರ ನೀಡಿದೆ.

"ಈ ಫ್ಲಾಪ್ ಯಾತ್ರೆ ದೇಶದ ಜನರ ಮುಂದೆ ಬಿಜೆಪಿಯ ಇಬ್ಬಂದಿತನವನ್ನು ಬಯಲು ಮಾಡಿದೆ"

ತಮ್ಮ ಈ ಯಾತ್ರೆಗೆಂದು 16 ಕೇಂದ್ರ ಮಂತ್ರಿಗಳು, 4 ಮುಖ್ಯಮಂತ್ರಿಗಳು, ಒಬ್ಬ ಉಪಮುಖ್ಯಮಂತ್ರಿ, 25 ಬಿಜೆಪಿ ಎಂಪಿ/ಎಂಎಲ್‌ಎಗಳು ಮತ್ತು 10 ಬಿಜೆಪಿ ರಾಷ್ಟ್ರೀಯ ಮುಖಂಡರನ್ನು ಆಮದು ಮಾಡಿಕೊಂಡು ಕೇರಳದಲ್ಲಿ ಉದ್ರೇಕಕಾರಿ ಪ್ರಚಾರ ನಡೆಸುವುದರ ಆಶಯವಾದರೂ ಏನು? ರಾಜ್ಯದಲ್ಲಿ ಶಾಂತಿ ಮತ್ತು ಸಾಮರಸ್ಯವನ್ನು ಕೆಡಿಸುವುದೇ? ಕೆಲವು ಕೇಂದ್ರ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳ ವರ್ತನೆಗಳು ಒಕ್ಕೂಟ ನೀತಿಗಳ ಉಲ್ಲಂಘನೆಯ ಅಮೋಘ ಉದಾಹರಣೆಗಳಾಗಿ ಇತಿಹಾಸ ಸೇರಿವೆ.

ಇಂತಹ ತಪ್ಪು ರೂಢಿಗಳಿಗೆ ಅವಕಾಶ ಮಾಡಿಕೊಟ್ಟು ಅಮಿತ್ ಷಾ ನಮ್ಮೊಂದಿಗೆ ಯಾವ ರೀತಿಯ ಸಂವಾದ ನಡೆಸ ಬಯಸುತ್ತಾರೆ? ಈ ಫ್ಲಾಪ್ ಯಾತ್ರೆ, ದೇಶದ ಜನರ ಮುಂದೆ ಬಿಜೆಪಿಯ ಇಬ್ಬಂದಿತನವನ್ನು ಬಯಲು ಮಾಡಿದೆ. ಇದು ರಾಷ್ಟ್ರೀಯ ಮಾಧ್ಯಮಗಳಿಗೆ ಕೇರಳದ ನಿಜ ಚಿತ್ರವನ್ನು, ಅದು ಯಾಕೆ ಅನುಸರಿಸಬೇಕಾದ ಒಂದು ಮಾದರಿಯಾಗಿದೆ ಎಂಬುದನ್ನು ಅರಿಯಲು ಕೂಡ ನೆರವಾಗಿದೆ. ಇದು ಒಳ್ಳೆಯದೇ.

– ಪಿಣರಾಯಿ ವಿಜಯನ್

150 ವರ್ಷ ಹಳೆಯ "ಕ್ಯಾಪಿಟಲ್" ಈಗ ಯಾಕೆ ಓದಬೇಕು?

ವಸಂತರಾಜ ಎನ್.ಕೆ.


19ನೇ ಶತಮಾನದ ಇಂಗ್ಲೆಂಡಿನ ಸಮಾಜ, ಆರ್ಥಿಕತೆಯ ಬಗ್ಗೆ ಬರೆದ 2000 ಪುಟಗಳ 3 ಸಂಪುಟಗಳ "ಕ್ಯಾಪಿಟಲ್" ಈಗ ಯಾಕೆ ಓದಬೇಕು? ಸಾಮಾಜಿಕ, ಆರ್ಥಿಕ, ತಂತ್ರಜ್ಞಾನ ಮುಂತಾದ ಹಲವು ಕ್ಷೇತ್ರಗಳಲ್ಲಿ ಗುರುತು ಸಿಗದಂತೆ ಬದಲಾದ ಸಂಕೀರ್ಣವಾದ ಇಂದಿನ ಪರಿಸ್ಥಿತಿ ಅರ್ಥೈಸಲು ಹೇಗೆ ಅದು ಸಹಾಯಕವಾದೀತು? ಈ ಪ್ರಶ್ನೆ ಸೆಪ್ಟೆಂಬರ್ 14, 1867ರಂದು ಪ್ರಕಟವಾದ "ಕ್ಯಾಪಿಟಲ್" ಸಂಪುಟ 1ರ 150ನೇ ವಾರ್ಷಿಕವನ್ನು ಜಗತ್ತಿನಾದ್ಯಂತ ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಕೇಳಲಾಗುತ್ತಿದೆ. ಈ ಸಂದರ್ಭದಲ್ಲಿ "ಕ್ಯಾಪಿಟಲ್" ಸಂಪುಟ 1ರ ಕನ್ನಡ ಅನುವಾದ ಮಾಡಿಸಿ ಪ್ರಕಟಿಸಲು ಮುಂದಾಗಿರುವ ನವಕರ್ನಾಟಕ ಮತ್ತು ಕ್ರಿಯಾ ಸಂಸ್ಥೆಗಳಿಗೂ ಈ ಪ್ರಶ್ನೆ ಕೇಳಲಾಗಿತ್ತು. ಕಾರ್ಲ್ ಮಾರ್ಕ್ಸ್ ಅವರ ಬಂಡವಾಳಶಾಹಿ ಪದ್ಧತಿಯ ಈ ಸಮಗ್ರ ಅಧ್ಯಯನ ಎತ್ತಿ ತೋರಿಸಿದ ಅದರ ಹಲವು ಪ್ರಮುಖ ಲಕ್ಷಣಗಳು, ಇಂದು ಬಂಡವಾಳಶಾಹಿ ಎಷ್ಟೇ ಬದಲಾಗಿದ್ದರೂ ಅದನ್ನು ಅರ್ಥೈಸಲು ಸಹಾಯಕವಾಗಿವೆ ಎಂಬುದು ಆಶ್ಚರ್ಯಕರ, ಆದರೂ ನಿಜ. "ಕ್ಯಾಪಿಟಲ್"ನಲ್ಲಿ ಹಲವು ಹಂತಗಳಲ್ಲಿ ಕಾಣಬರುವ ಮಾರ್ಕ್ಸ್ ಒಳನೋಟಗಳು ಇಂದಿಗೂ ಪ್ರಸ್ತುತ. ಇಂದಿನ ಬಂಡವಾಳಶಾಹಿಯ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲಿಕ್ಕೂ ಸಹಾಯಕ. ಈ ಲೇಖನ ಅರ್ಥಶಾಸ್ತ್ರಜ್ಞ ಮತ್ತು ಜೆ.ಎನ್.ಯು. ಪ್ರಾಧ್ಯಾಪಕರಾದ ಪ್ರೊ. ಜಯತಿ ಘೋಷ್ ಮತ್ತು ಸಿ.ಪಿ. ಚಂದ್ರಶೇಖರ್ ಅವರ ಇತ್ತೀಚಿನ ಲೇಖನ/ಭಾಷಣಗಳ ಮೇಲೆ ಆಧಾರಿತವಾಗಿದೆ.

ಕಳೆದ 150 ವರ್ಷಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆ ಹಲವು ಮಜಲುಗಳನ್ನು ಹಾದು ಬಂದಿದೆ. ಅವುಗಳಲ್ಲಿ ಎರಡು ಪ್ರಮುಖ ಮಜಲುಗಳಲ್ಲಿ ಮೊದಲನೇಯದು, ಕಡಿಮೆ ನಿರುದ್ಯೋಗದಲ್ಲಿ ವೇಗವಾದ ಬೆಳವಣಿಗೆ ಸಾಧಿಸಿದ 1930ರ ದಶಕದ ಮಹಾಕುಸಿತದ ನಂತರದಿಂದ 1960ರ ದಶಕದ ವರೆಗೆ ಮುಂದುವರೆದ, ಕೇನ್ಸ್ ಪ್ರಣೀತ ಪ್ರಭುತ್ವ ಮಧ್ಯಪ್ರವೇಶದ ನಿಲುಮೆ ಆಧಾರಿತ ಬಂಡವಾಳಶಾಹಿಯ "ಸುವರ್ಣ ಯುಗ". ಎರಡನೇಯದು 1970ರ ದಶಕದಲ್ಲಿ ಆರಂಭವಾಗಿ ಈಗಲೂ ಮುಂದುವರೆಯುತ್ತಿರುವ "ಹಣಕಾಸು ಬಂಡವಾಳದ ಯುಗ". ಈ ಎರಡೂ ಮಜಲುಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವ "ಕ್ಯಾಪಿಟಲ್"ನಲ್ಲಿ ಮಾರ್ಕ್ಸ್ ಗುರುತಿಸುವ ಅದರ ಪ್ರಮುಖ ಲಕ್ಷಣಗಳು ಯಾವುವು? ಬಂಡವಾಳದ ವಿಶಿಷ್ಟತೆ, ಬಂಡವಾಳದ ಆದಿಮ ಸಂಚಯ, ಸರಕು ಮೂಢಾರಾಧನೆ, ಬಂಡವಾಳದ ಚಲನಶೀಲತೆ, ಸಾಲದ ಪಾತ್ರ, ಬಂಡವಾಳದ ಕೇಂದ್ರೀಕರಣ ಮತ್ತು ಅಸಮಾನ ಬೆಳವಣಿಗೆ, ಸಂಘರ್ಷ ವೈರುಧ್ಯ ಮತ್ತು ಬಿಕ್ಕಟ್ಟುಗಳು – ಬಂಡವಾಳಶಾಹಿ ವ್ಯವಸ್ಥೆಯ ಇಂತಹ ಪ್ರಮುಖ ಲಕ್ಷಣಗಳು. ಅವುಗಳ ಬಗ್ಗೆ ಮಾರ್ಕ್ಸ್ ಏನು ಹೇಳಿದ್ದಾರೆ ಮತ್ತು ಇವತ್ತು ಅವು ಯಾಕೆ ಪ್ರಸ್ತುತ ಎಂಬುದನ್ನು ಸ್ವಲ್ಪ ವಿವರವಾಗಿ ನೋಡಿದರೆ "ಕ್ಯಾಪಿಟಲ್"ನ್ನು ಇಂದಿಗೂ ಯಾಕೆ ಓದಬೇಕು ಎನ್ನುವುದು ಸ್ಪಷ್ಟವಾದೀತು.

ಬಂಡವಾಳದ ವಿಶಿಷ್ಟತೆಗಳೇನು?

ಬಂಡವಾಳಶಾಹಿ ವ್ಯವಸ್ಥೆಯ ಸಾರವಾದ ಬಂಡವಾಳ ಎಂದರೇನು? ಅದರ ವಿಶಿಷ್ಟತೆಗಳೇನು? ಬಂಡವಾಳ ಎಂದರೆ ಸಂಪನ್ಮೂಲದ ಒಂದು ರೂಪ ಮಾತ್ರವಲ್ಲ. ಶ್ರಮ, ಭೂಮಿಗಳಂತೆ ಉತ್ಪಾದನೆಯ ಒಂದು ಅಂಶ ಮಾತ್ರವಲ್ಲ. ಅದಕ್ಕೆ ಬದಲಾಗಿ ಬಂಡವಾಳ ಒಂದು ನಿರ್ದಿಷ್ಟ ಚಾರಿತ್ರಿಕ ಪರಿಸ್ಥಿತಿಯಲ್ಲಿ ನಿರ್ದಿಷ್ಟ ಉತ್ಪಾದನಾ ಸಂಬಂಧಗಳ ಅಭಿವ್ಯಕ್ತಿ. ಉದಾಹರಣೆಗೆ ಕಾರ್ಮಿಕ ಒಂದು ಮಗ್ಗವನ್ನು ಬಳಸಿ ಮಾರುಕಟ್ಟೆಯಲ್ಲಿ ಲಾಭಕ್ಕಾಗಿ ಮಾರುವ ಬಟ್ಟೆ ತಯಾರಿಸಿದರೆ, ಆ ಮಗ್ಗ ಬಂಡವಾಳವಾಗುತ್ತದೆ. ಅದೇ ಮಗ್ಗ ರೈತ ಕುಟುಂಬವೊಂದರಲ್ಲಿ ತಮ್ಮ ಬಳಕೆಗೆ ಬಟ್ಟೆ ತಯಾರಿಸಲು ಬಳಸಿದರೆ ಬಂಡವಾಳ ಆಗುವುದಿಲ್ಲ. ಉತ್ಪಾದನಾ ಸಾಧನವೊಂದು ಉತ್ಪಾದನಾ ಪ್ರಕ್ರಿಯೆಯಲ್ಲಿ ಅಡಕವಾಗಿರುವ ಸಾಮಾಜಿಕ ಸಂಬಂಧದಿಂದಾಗಿ ಬಂಡವಾಳವಾಗುತ್ತದೆ.

ಇದು ಮಾಲಿಕ ಮತ್ತು ಕಾರ್ಮಿಕರ ನಡುವೆ ಇರುವ ಸಾಮಾಜಿಕ ಸಂಬಂಧ. ಇದರಿಂದ ಮಾತ್ರವೇ ಬಂಡವಾಳಶಾಹಿ ಉತ್ಪಾದನೆ ಸಾಧ್ಯವಾಗುತ್ತದೆ. ಇದಕ್ಕೆ ಕಾರ್ಮಿಕ ಎರಡು ಅರ್ಥದಲ್ಲಿ "ಸ್ವತಂತ್ರ"ನಾಗಿರಬೇಕಾಗುತ್ತದೆ. ಮೊದಲನೇಯದಾಗಿ ಆತ ತನ್ನ ಶ್ರಮಶಕ್ತಿಯನ್ನು ಮಾರಲು "ಸ್ವತಂತ್ರ"ನಾಗಿರಬೇಕು. ಅಂದರೆ ಯಾವುದೇ ಮಾಲಕನ ಜೀತದಾಳು ಆಗಿರಬಾರದು ಮತ್ತು ಆತ ಕೂಲಿ ಕೆಲಸ ಮಾಡುವುದನ್ನು ತಡೆಯಬಲ್ಲ ಇತರ ಸಾಮಾಜಿಕ–ಆರ್ಥಿಕ ಅಂಶಗಳಿಂದಲೂ "ಸ್ವತಂತ್ರ"ನಾಗಿರಬೇಕು. ಎರಡನೇಯದಾಗಿ ಆತ ಬದುಕುಳಿಯಲು ಕೂಲಿಕೆಲಸ ಮಾಡಲು "ಸ್ವತಂತ್ರ"ನಾಗಿರಬೇಕು. ಅಂದರೆ ಆತ ಯಾವುದೇ ಉತ್ಪಾದನಾ ಸಾಧನಗಳ ಒಡೆತನ ಇಲ್ಲದೆ ಕೂಲಿಕೆಲಸ ಮಾಡದೆ ಬದುಕುಳಿಯಲಾರ ಎಂಬ ಪರಿಸ್ಥಿತಿ ಇರಬೇಕು. ಆಗ ಶ್ರಮವೂ ಮಾರುಕಟ್ಟೆಯಲ್ಲಿ ಸಾಮಾಜಿಕವಾಗಿ ನಿರ್ಧಾರಿತವಾಗುವ ಬದುಕುಳಿಯುವ ಕನಿಷ್ಟ ಮಾನದಂಡಗಳ ಮೇಲೆ ಆಧಾರಿತವಾದ ಮೌಲ್ಯಕ್ಕೆ ಮಾರಾಟವಾಗುವ ಒಂದು ಸರಕು ಆಗುತ್ತದೆ. ಅದನ್ನು ಮಾರುವವರು ಸ್ವತಂತ್ರರಂತೆ ಕಾಣಬಹುದು. ಕೆಲವು ಅಂಶಗಳಲ್ಲಿ ಸ್ವತಂತ್ರರೂ ಆಗಿರಬಹುದು. ಆದರೆ ಕೆಲಸ ಸಿಕ್ಕಿದರೆ ಮಾತ್ರ ಬದುಕುಳಿಯಬಲ್ಲರು. ಅವರ ಶ್ರಮಕ್ಕೆ ಬಂಡವಾಳದ ಸೇವೆಯ ಅವಕಾಶವಿದ್ದರೆ ಮಾತ್ರ ಅವರಿಗೆ ಕೆಲಸ ಸಿಗುತ್ತದೆ, ಎಂಬುದು ಈ ಸರಕಿನ ವಿಚಿತ್ರ ಸ್ವಭಾವ.



ಕ್ಯಾಪಿಟಲ್ ಓದಿ : ಮಾರ್ಕ್ಸ್

ಮಾರ್ಕ್ಸ್ ಲೇವಾದೇವಿಗಾರನ ಮತ್ತು ವ್ಯಾಪಾರಿ ಬಂಡವಾಳವನ್ನು ವಿವಿಧ ಸಮಾಜಗಳಲ್ಲಿ ಹಣ ಇರುವಷ್ಟು ಕಾಲದಿಂದಲೂ ಇದ್ದ "ಓಬೀರಾಯನ ಕಾಲದ" ಬಂಡವಾಳದ ರೂಪವಾಗಿ ಕಾಣುತ್ತಾರೆ. ಕೈಗಾರಿಕಾ ಬಂಡವಾಳದ ಜತೆ ಕರಗಿ ಬೆಸೆದುಕೊಳ್ಳುವವರೆಗೆ, ಸಮಾಜೋ–ಆರ್ಥಿಕ ಸಂಬಂಧಗಳನ್ನು ಬದಲಾಯಿಸುವ ಶಕ್ತಿ ಅವುಗಳಿಗಿರಲಿಲ್ಲ. ಈಗ "ಹಣಕಾಸು ಬಂಡವಾಳ" ಎಂದು ಕರೆಯುವ ಬಂಡವಾಳವನ್ನು ಮಾರ್ಕ್ಸ್ ಪ್ರತ್ಯೇಕವಾಗಿ ಗುರುತಿಸಲಿಲ್ಲ. ಬಂಡವಾಳಶಾಹಿಯ ಏಕಸ್ವಾಮ್ಯ ಮಜಲು ಮತ್ತು ಹಣಕಾಸು ಸಂಸ್ಥೆಗಳ ಬಲಗಳಿಂದಾಗಿ, ಬಂಡವಾಳಶಾಹಿಯ ಸ್ವರೂಪವನ್ನೇ ಬದಲಾಯಿಸಿದ "ಹಣಕಾಸು ಬಂಡವಾಳ"ದ ಉದಯವನ್ನು ಆ ಮೇಲಿನ ಮಾರ್ಕ್ಸ್‌ವಾದಿಗಳು ಗುರುತಿಸುತ್ತಾರೆ.

ಮಾರ್ಕ್ಸ್ ಗುರುತಿಸಿದ ಬಂಡವಾಳಶಾಹಿ ವ್ಯವಸ್ಥೆಯ ಸಾರವಾದ ಬಂಡವಾಳದ ವಿಶಿಷ್ಟತೆಗಳು ಈಗಲೂ ಅದರ ವಿಶ್ಲೇಷಣೆಗೆ ಬೇಕಾದ ಚೌಕಟ್ಟು ಒದಗಿಸುತ್ತವೆ.

ಬಂಡವಾಳದ ಆದಿಮ ಸಂಚಯ

ಉತ್ಪಾದನಾ ಸಾಧನಗಳು ಕೆಲವೇ ಕೆಲವರ ಕೈಯಲ್ಲಿ ಕೇಂದ್ರೀಕೃತವಾಗುವುದರಿಂದಾಗಿಯೇ ಬಂಡವಾಳಕ್ಕೆ ಉತ್ಪಾದನೆಯಲ್ಲಿ ಅದರ ಪಾತ್ರ ನಿರ್ವಹಿಸಲು ಸಾಧ್ಯವಾಗುವುದು. ಆದರೆ ಈ ಕೇಂದ್ರೀಕರಣ ಆಗುವುದಾದರೂ ಹೇಗೆ? ಇದನ್ನು ಹಿಂದೆ ಉತ್ಪಾದನಾ ಸಾಧನಗಳನ್ನು ಹೊಂದಿದ್ದ ರೈತರು ಮತ್ತು ಕಸುಬುದಾರರಿಂದ ಅವನ್ನು ಕಸಿದುಕೊಂಡಿರಬೇಕು.

ಇಂತಹ ಕಿತ್ತುಕೊಳ್ಳುವಿಕೆ (ಅಥವಾ ಬಂಡವಾಳದ ಆದಿಮ ಸಂಚಯ) ಅತ್ಯಂತ ಹಿಂಸಾತ್ಮಕ ಪ್ರಕ್ರಿಯೆಯಾಗಿತ್ತು. ಮೇಲೆ ಹೇಳಿದ ಕಾರ್ಮಿಕರ ಎರಡು ಬಗೆಯ "ಸ್ವಾತಂತ್ರ್ಯ"ವನ್ನು ಬಲಾತ್ಕಾರವಾಗಿ ಸಾಧಿಸಲಾಗಿತ್ತು ಎಂದು ಮಾರ್ಕ್ಸ್ ಹೇಳುತ್ತಾರೆ. ಉತ್ಪಾದಕರನ್ನು ಕೂಲಿ–ಕೆಲಸಗಾರರನ್ನಾಗಿ ಪರಿವರ್ತಿಸುವ ಚಾರಿತ್ರಿಕ ಪಯಣದಲ್ಲಿ ಅವರನ್ನು ಜೀತದಿಂದ ಮತ್ತು ಅವರ ಗಿಲ್ಡ್ ಗಳ ಸಂಕೋಲೆಗಳಿಂದ ಬಿಡುಗಡೆ ಮಾಡುವ ಭಾಗವನ್ನು ಮಾತ್ರ ಬೂರ್ಜ್ವಾ ಇತಿಹಾಸಕಾರರು ನೋಡುತ್ತಾರೆ. ಆದರೆ ಈ ಬಿಡುಗಡೆಯಾದವರು ತಮ್ಮನ್ನು ತಾವೇ ಮಾರಿಕೊಳ್ಳುವ ಸ್ಥಿತಿಗೆ ಬಂದಿದ್ದು, ಅವರ ಉತ್ಪಾದನಾ ಸಾಧನ(ಭೂಮಿ ಇತ್ಯಾದಿ)ಗಳನ್ನು ಮತ್ತು ಪಾಳೆಯಗಾರಿ ವ್ಯವಸ್ಥೆಯಲ್ಲಿ ಬದುಕುಳಿಯಲು ಇದ್ದ ಸವಲತ್ತುಗಳನ್ನು ಕಿತ್ತುಕೊಂಡಾಗ ಮಾತ್ರ ಎಂಬ ಇನ್ನೊಂದು ಭಾಗ ಅವರಿಗೆ ಕಾಣುವುದಿಲ್ಲ. ಉತ್ಪಾದಕರ ಉತ್ಪಾದನಾ ಸಾಧನಗಳನ್ನು ಬಲಾತ್ಕಾರವಾಗಿ ಕಿತ್ತುಕೊಂಡ ಕತೆಯನ್ನು ಬೆಂಕಿ ಮತ್ತು ರಕ್ತದಕ್ಷರಗಳಲ್ಲಿ ಮನುಕುಲದ ಚರಿತೆಯಲ್ಲಿ ಬರೆಯಲಾಗಿದೆ. ಶ್ರಮಿಕ ತನ್ನ ಶ್ರಮದಿಂದ ಮಾಡಿಕೊಂಡ ಖಾಸಗಿ ಆಸ್ತಿಯ ನಾಶ ಅಥವಾ ಶ್ರಮಿಕನ ಆಸ್ತಿ ಕಿತ್ತುಕೊಳ್ಳುವಿಕೆ, ಬಂಡವಾಳಶಾಹಿ ಉತ್ಪಾದನೆ ಮತ್ತು ಬಂಡವಾಳಶಾಹಿ ಆಸ್ತಿಗೆ ಅಗತ್ಯ ಪೂರ್ವಶರತ್ತುಗಳು ಎಂದು ಮಾರ್ಕ್ಸ್ "ಕ್ಯಾಪಿಟಲ್" ಗ್ರಂಥದಲ್ಲಿ ಮನಮಿಡಿಯುವಂತೆ ಹೇಳುತ್ತಾರೆ.

ಬಂಡವಾಳಶಾಹಿ ವ್ಯವಸ್ಥೆಯ ಅಸಮಾನ ಬೆಳವಣಿಗೆಯಿಂದಾಗಿ, ಬಂಡವಾಳದ ಆದಿಮ ಸಂಚಯ ಬರಿಯ ಇತಿಹಾಸದ ಸಂಗತಿ ಮಾತ್ರವಲ್ಲ. ಇಂದಿನ ವಾಸ್ತವವೂ ಆಗಿದೆ. ಇದು ಮೂರನೇ ಜಗತ್ತಿನಲ್ಲಿ ಹೆಚ್ಚು ನಿಜ. ಭಾರತದಲ್ಲಿ "ಜಾಗತೀಕರಣ"ದ ಕಾಲು ಶತಮಾನದಲ್ಲಿ ನಡೆಯುತ್ತಿರುವುದು ಇದೇ. ಒಂದು ಕಡೆ ರೈತರ ಮತ್ತು ಸಣ್ಣ ಉತ್ಪಾದಕರ ಉತ್ಪಾದನಾ ಸಾಧನಗಳನ್ನು (ಭೂಮಿ ಇತ್ಯಾದಿ) ಕಿತ್ತುಕೊಂಡು ಅವನ್ನು ಕಾರ್ಪೊರೆಟ್ ಕಂಪನಿಗಳಿಗೆ ಕೊಡುತ್ತಿರುವುದು ಬಂಡವಾಳದ ಆದಿಮ ಸಂಚಯವೇ. ಅದೇ ರೀತಿಯಾಗಿ ಸಾರ್ವಜನಿಕ ಒಡೆತನದಲ್ಲಿದ್ದ ಮತ್ತು ಸಾಮಾಜಿಕ ಸಂಪನ್ಮೂಲಗಳಿಂದ ಕಟ್ಟಿದ ಸಾರ್ವಜನಿಕ ಕ್ಷೇತ್ರದ ಉದ್ಯಮಗಳನ್ನು, ಸಾಮಾಜಿಕ ಸಂಪನ್ಮೂಲಗಳಾದ



ಕ್ಯಾಪಿಟಲಿಸಂ ಮುಳುಗುತ್ತಿದೆ, ಮಾರ್ಕ್ಸ್ "ಕ್ಯಾಪಿಟಲ್" ತೇಲುತ್ತಿದೆ !

ಕ್ಯಾಪಿಟಲ್ ಸಂಪುಟ 1 – ಮೊದಲ ಪ್ರಕಟಣೆಯ ಮುಖಪುಟ



ನದಿಗಳು ಗಣಿಗಳು ಕಾಡುಗಳನ್ನು ಖಾಸಗಿ ಬಂಡವಾಳಗಾರರಿಗೆ ಮೂರು ಕಾಸಿಗೆ ಮಾರಾರುತ್ತಿರುವುದನ್ನು ಅರ್ಥ ಮಾಡಿಕೊಳ್ಳಲೂ ಮಾರ್ಕ್ಸ್ "ಕ್ಯಾಪಿಟಲ್" ಗ್ರಂಥದಲ್ಲಿ ಮಂಡಿಸಿದ "ಬಂಡವಾಳದ ಆದಿಮ ಸಂಚಯ"ದ ಪರಿಕಲ್ಪನೆ ಸಹಾಯಕವಾಗುತ್ತದೆ.

ಸರಕು ಮೂಢಾರಾಧನೆ

ಪಾಳೆಯಗಾರಿ ವ್ಯವಸ್ಥೆಯಂತೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮಿಗುತಾಯ ಮೌಲ್ಯವನ್ನು ಕಿತ್ತುಕೊಳ್ಳುವುದಿಲ್ಲ. ಬಂಡವಾಳಶಾಹಿ ವ್ಯವಸ್ಥೆ ಆರ್ಥಿಕ ಒಪ್ಪಂದಗಳ, ಮಾರುಕಟ್ಟೆಯಲ್ಲಿ ಸರಕು ಸೇವೆಗಳ ಸ್ವ-ಇಚ್ಛೆಯಿಂದ ಮಾಡುವ ವಿನಿಮಯಗಳ ಆಧಾರದ ಮೇಲೆ ನಡೆಯುತ್ತದೆ. ಇದು ವ್ಯಕ್ತಿಗಳ ವಿವೇಕಯುತ ಆಯ್ಕೆಯಂತೆ ಕಾಣುತ್ತದೆ. ಆದರೆ ನಿಜವಾಗಿಯೂ ಇದು ಸಾಮಾಜಿಕ ಭ್ರಮೆಯ ಮೇಲೆ ಆಧಾರಿತವಾಗಿರುತ್ತದೆ. ಮಾರ್ಕ್ಸ್ ಇದನ್ನು "ಸರಕು ಮೂಢಾರಾಧನೆ" ಎಂದು ಕರೆಯುತ್ತಾರೆ. ವ್ಯಕ್ತಿಗಳ ನಡುವಿನ ಸಂಬಂಧದಲ್ಲಿ ವಸ್ತುಗಳ, ಸರಕುಗಳ ಮತ್ತು ಹಣಗಳ ನಡುವಿನ ಸಂಬಂಧ ಮಧ್ಯವರ್ತಿಯ ಪಾತ್ರ ನಿರ್ವಹಿಸುತ್ತದೆ.

ಸರಕು ಎಂದರೆ ಬರಿಯ ವಸ್ತುಗಳಲ್ಲ. ಸರಕುಗಳಿಗೆ ಎರಡು ವಿಶಿಷ್ಟ ಮತ್ತು ಪ್ರತ್ಯೇಕವಾದ ಗುಣಗಳಿವೆ. ಒಂದು ಮಾನವನ ಅಗತ್ಯಗಳನ್ನು ಪೂರೈಸುವ ಅದರ ಬಳಕೆಯ ಮೌಲ್ಯ. ಅದನ್ನು ಇನ್ನೊಂದು ಸರಕು



ಆದಿಮ ಬಂಡವಾಳ ಶೇಖರಣೆ (ಹ್ಯೂಗೊ ಗೆಲಾರ್ಟ್)

ಅಥವಾ ಹಣಕ್ಕೆ ಬದಲಾಗಿ ವಿನಿಮಯ ಮಾಡಿಕೊಳ್ಳುವ ವಿನಿಮಯದ ಮೌಲ್ಯ ಇನ್ನೊಂದು. ಎರಡು ಗುಣಗಳಿಗೂ ಸಂಬಂಧವಿಲ್ಲ. ವಿನಿಮಯದ ಪ್ರಕ್ರಿಯೆ ಮತ್ತು ಮೌಲ್ಯ ಸರಕಿನ ಆಂತರಿಕ ಗುಣಲಕ್ಷಣದ ಮೇಲೆ ಅವಲಂಬಿಸಿರುವುದಿಲ್ಲ. ಅದರ ಹೊರಗಿನ ಅಂಶಗಳ ಮೇಲೆ ಅವಲಂಬಿಸಿರುತ್ತದೆ. ಕೆಲವೊಮ್ಮೆ ವಿರುದ್ಧವಾದ ಸರಕಿನ ಈ ಗುಣಲಕ್ಷಣಗಳಿಂದಾಗಿ, ಅವುಗಳ ನಡುವೆ ಗೊಂದಲ ಹುಟ್ಟಿಸುವ ಅಥವಾ ಅವನ್ನು ಒಂದೇಯಾಗಿ ನೋಡುವ ಸಾಧ್ಯತೆ ಉಂಟಾಗುತ್ತದೆ. ಮೌಲ್ಯ ಶ್ರಮದ ಫಲ ಎಂದು ಅರಿಯದೆ ಮೌಲ್ಯ ಸರಕಿನ ಆಂತರಿಕ ಗುಣ ಲಕ್ಷಣವೆಂದು ಪರಿಗಣಿಸಿದಾಗ, ಸರಕು ಮೂಢಾರಾಧನೆ ಹುಟ್ಟಿಕೊಳ್ಳುತ್ತದೆ. ಚಾರಿತ್ರಿಕವಾಗಿ ನಿರ್ದಿಷ್ಟ ಸಾಮಾಜಿಕ ಸಂಬಂಧಗಳನ್ನು ಮರೆತು, ಸರಕುಗಳ ವಿನಿಮಯ ಮತ್ತು ಮಾರುಕಟ್ಟೆ-ಆಧಾರಿತ ಸಂಬಂಧಗಳಂತೆ ಎಲ್ಲವನ್ನೂ ನೋಡುವುದೇ "ಸಹಜ" ಎಂಬ ಧೋರಣೆಯೇ ಸರಕು ಮೂಢಾರಾಧನೆ.

ಇನ್ನೂ ವಿಶಾಲವಾಗಿ ನೋಡುವುದಾದರೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಖಾಸಗಿ ಆಸ್ತಿ ಕೇಂದ್ರಬಿಂದು ಆಗಿರುವುದರಿಂದ ಹೊಮ್ಮುವ ಭ್ರಮೆಯೇ ಸರಕು ಮೂಢಾರಾಧನೆ. ಕೆಲಸ, ಪರಸ್ಪರ ನಡವಳಿಕೆ, ಸಾಮಾಜಿಕ ವಾಸ್ತವವನ್ನು ಮತ್ತು ಬದಲಾವಣೆಯನ್ನು ಗ್ರಹಿಸುವ ರೀತಿ ಎಲ್ಲವನ್ನೂ ಈ ಭ್ರಮೆ ನಿರ್ಧರಿಸುತ್ತದೆ. ಹೆಚ್ಚೆಚ್ಚು ಸರಕುಗಳನ್ನು ಹೊಂದುವ ಉತ್ಕಟ ಆಸೆ, ಭೌತಿಕ ಬೇಕುಗಳ ಹಿಂದೆ ಓಡುವ ಚಟ, ವಿವಿಧ ಸರಕುಗಳನ್ನು ಹೊಂದುತ್ತಾ ಹೋಗುವುದೇ ಮಾನವ ಜೀವನದ ಉನ್ನತಿಯ ಹಾದಿ ಎಂಬ ಧೋರಣೆ – ಇವೆಲ್ಲಾ ಸರಕು ಮೂಢಾರಾಧನೆಯ ವಿವಿಧ ರೂಪಗಳು ಎನ್ನಬಹುದು. ಸರಕು ಭ್ರಮೆಯನ್ನು ವಾಸ್ತವ ಭೌತಿಕ ಮತ್ತು ಮಾನವ ಪರಿಸ್ಥಿತಿಯ ನಿಜವೆಂದು ತಿಳಿಯುವ ಸಮಾಜೋ-ಆರ್ಥಿಕ ವಿಶ್ಲೇಷಣೆಗಳೂ ಸರಕು ಮೂಢಾರಾಧನೆಯ ರೂಪಗಳೇ.


ಸರಕು ಮೂಢಾರಾಧನೆಯ ಪರಿಕಲ್ಪನೆ ಇಂದಿಗೂ ಭಾರತ ಸೇರಿದಂತೆ ಬಂಡವಾಳಶಾಹಿ ಅಧಿಪತ್ಯದಲ್ಲಿರುವ ಸಮಾಜಗಳಲ್ಲಿ ಕೊಳ್ಳುಬಾಕ ಸಂಸ್ಕೃತಿ, ಮಾನವ ಸಂಬಂಧಗಳ ವಿಘಟನೆ, ಒಬ್ಬಂಟಿತನ ಮುಂತಾದ ಸಾಮಾಜಿಕ ಸಾಂಸ್ಕೃತಿಕ ವಿದ್ಯಮಾನಗಳನ್ನು ಅರ್ಥೈಸಲು ಅಗತ್ಯ ಚೌಕಟ್ಟು ಒದಗಿಸುತ್ತದೆ.

ಬಂಡವಾಳಶಾಹಿಯ ಚಲನಶೀಲತೆ

ತನ್ನನ್ನು ಮತ್ತು ತಾನು ಇರುವ ಸಮಾಜವನ್ನು ಸತತವಾಗಿ ಬದಲಾಯಿಸುತ್ತಾ ಹೋಗುವುದು, ಬಂಡವಾಳದ ಸ್ವಭಾವ. "ಬಂಡವಾಳಿಗರ ವರ್ಗ ಸತತವಾಗಿ ಉತ್ಪಾದನಾ ಸಾಧನಗಳನ್ನು ಕ್ರಾಂತಿಕಾರಕವಾಗಿ ಬದಲಾಯಿಸುತ್ತಾ ಹೋಗದೇ, ಆ ಮೂಲಕ ಉತ್ಪಾದನಾ ಸಂಬಂಧಗಳನ್ನು ಮತು ಇಡೀ ಸಮಾಜದಲ್ಲಿನ ಸಂಬಂಧಗಳನ್ನು ಬದಲಾಯಿಸುತ್ತಾ ಹೋಗದೆ ಇರಲಾರದು.. .. ..ಸತತವಾಗಿ ಉತ್ಪಾದನಾ ಸಾಧನಗಳಲ್ಲಿ ಕ್ರಾಂತಿಕಾರಕ ಬದಲಾವಣೆ, ಸಾಮಾಜಿಕ ಪರಿಸ್ಥಿತಿಗಳನ್ನು ಎಡೆಬಿಡದೆ ಕದಡುತ್ತಾ ಹೋಗುವುದು, ಎಂದೂ ಮುಗಿಯದ ಅನಿಶ್ಚಿತತೆ, ತಲ್ಲಣಗಳು ಹಿಂದಿನ ಎಲ್ಲಾ ವ್ಯವಸ್ಥೆಗಳಿಗಿಂತ ಬಂಡವಾಳಶಾಹಿ ವ್ಯವಸ್ಥೆಯನ್ನು ವಿಶಿಷ್ಟವಾಗಿಸುತ್ತದೆ. ಎಲ್ಲಾ ಸ್ಥಿರವಾದ, ಬಹಳ ಕಾಲ ಹೆಪ್ಪುಗಟ್ಟಿದ ಸಂಬಂಧಗಳು ಮತ್ತು ಅವುಗಳ ಜತೆ ಸಾಲಾಗಿ ಬರುವ ಪ್ರಾಚೀನವಾದ ಮಾನ್ಯ ಪೂರ್ವಗ್ರಹಗಳು ಮತ್ತು ಅಭಿಪ್ರಾಯಗಳನ್ನು ಅದು ಗುಡಿಸಿ ಹಾಕಿಬಿಡುತ್ತದೆ. ಎಲ್ಲಾ ಹೊಸ ಸಂಬಂಧಗಳು ಗಟ್ಟಿಯಾಗುವ ಮೊದಲೇ ಹಳೆಯದಾಗುತ್ತವೆ. ಎಲ್ಲಾ ಗಟ್ಟಿಯಾಗಿರುವುದು ಕರಗಿ ಆವಿಯಾಗುತ್ತವೆ.." ಎಂದು ಮಾರ್ಕ್ಸ್ ಹೇಳುತ್ತಾರೆ.

ಬಂಡವಾಳದ ಚಲನಶೀಲತೆ ಹಲವು ಹಿಂದೆಂದೂ ಕಾಣದ ಮತ್ತು ಸಕಾರಾತ್ಮಕ ಪರಿಣಾಮಗಳನ್ನು ಬೀರುತ್ತದೆ. ಜಗವ್ಯಾಪಿ ಉತ್ಪಾದನೆ, ತ್ವರಿತ ಗತಿಯಲ್ಲಿ ಸುಧಾರಿತ ಮತ್ತು ಹೊಸ ಹೊಸ ತಂತ್ರಜ್ಞಾನಗಳ ಅವಿಷ್ಕಾರ, ಹಾಗೂ ಅಗಾಧ ಉತ್ಪಾದನಾ ಶಕ್ತಿಗಳ ಸೃಷ್ಟಿ, ಸಂಪರ್ಕ ಸಾಧನಗಳ ಅಪಾರ ವಿಸ್ತರಣೆ, ನಗರೀಕರಣ, ಆರ್ಥಿಕ ವ್ಯವಹಾರಗಳಲ್ಲಿ ಮಾತ್ರವಲ್ಲ ಬೌದ್ಧಿಕ ಮತ್ತು ಸೃಜನಶೀಲ ಕ್ಷೇತ್ರಗಳಲ್ಲಿ ಕೂಡಾ ದೇಶಗಳ ನಡುವೆ ಹೆಚ್ಚಿದ ಕೊಡು-ಕೊಳ್ಳು ಸಂಬಂಧ – ಇವು ಕೆಲವು ಪರಿಣಾಮಗಳು. ಅದು ಬಂಡವಾಳ ಕಾರ್ಖಾನೆ ಉತ್ಪಾದನಾ ವ್ಯವಸ್ಥೆಯಿಂದ ಮುಂದುವರೆದು ಹೊಸ ಉತ್ಪಾದನಾ ಸಂಘಟನೆಗಳು ಮತ್ತು ಆರ್ಥಿಕ ಸಂಸ್ಥೆಗಳು ಮತ್ತು ಕಾನೂನು ವ್ಯವಸ್ಥೆಗಳನ್ನು ಹುಟ್ಟಿಹಾಕುತ್ತದೆ. ಇಂದಿನ ಹಣಕಾಸು ಬಂಡವಾಳದ ಯುಗದಲ್ಲಂತೂ ಉತ್ಪಾದನಾ ಸಂಘಟನೆಗಳು ಮತ್ತು ಆರ್ಥಿಕ ಸಂಸ್ಥೆಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ.

ಮಾರ್ಕ್ಸ್ ಬಂಡವಾಳಶಾಹಿ ಉತ್ಪಾದನೆಯ ಮೂರು "ಮೂಲ ವಸ್ತುಸ್ಥಿತಿ"ಗಳನ್ನು ಗುರುತಿಸುತ್ತಾರೆ – (1) ಕೆಲವೇ ಕೈಗಳಲ್ಲಿ ಉತ್ಪಾದನಾ ಸಾಧನಗಳ ಕೇಂದ್ರೀಕರಣದಿಂದಾಗಿ, ಅವು ಉತ್ಪಾದನೆಯಲ್ಲಿ ತೊಡಗಿದ ಶ್ರಮಿಕರ ಆಸ್ತಿಯಂತೆ ಕಾಣದೆ ಸಾಮಾಜಿಕ ಉತ್ಪಾದನಾ ಸಾಮರ್ಥ್ಯದಂತಾಗುವುದು (2) ಸಹಕಾರ, ಶ್ರಮ ವಿಭಜನೆ ಮತ್ತು ಪ್ರಾಕೃತಿಕ ವಿಜ್ಞಾನದ ಜತೆ ಶ್ರಮದ ಸೇರಿಸುವಿಕೆಗಳಿಂದ, ಸಾಮಾಜಿಕ ಶ್ರಮವಾಗಿ ಶ್ರಮದ ಸಂಘಟನೆ (3) ವಿಶ್ವ ಮಾರುಕಟ್ಟೆಯ ನಿರ್ಮಾಣ. ಈ ಮೂರನೇಯ ಲಕ್ಷಣ ಬಂಡವಾಳಶಾಹಿ ವ್ಯವಸ್ಥೆಯ ಸತತವಾಗಿ ಅದ್ದೂರಿಗೊಳಿಸುತ್ತಾ ವಿಸ್ತರಿಸುವ, ಹಿಂದಿನ ಉತ್ಪಾದನಾ ವ್ಯವಸ್ಥೆಗಳನ್ನು ನಾಶಗೊಳಿಸುವ, ತಂತ್ರಜ್ಞಾನ ಮತ್ತು ಸಂಸ್ಥೆಗಳನ್ನು ಬದಲಾಯಿಸುತ್ತಾ ಹೋಗುವ ಪ್ರವೃತ್ತಿಯ ಸಹಜ ಪರಿಣಾಮ. ಆದರೆ ಜಾಗತೀಕರಣದ ಬೆಳವಣಿಗೆ ಸಹ, ಜಗತ್ತಿನಲ್ಲಿ ದೇಶಗಳಲ್ಲಿ, ದೇಶಗಳಲ್ಲಿ ಪ್ರದೇಶಗಳಲ್ಲಿ, ಅಸಮಾನವಾಗಿ ಆಗುತ್ತದೆ. ವಿಶ್ವ ಮಾರುಕಟ್ಟೆಯ ನಿರ್ಮಾಣವೇ ಹೊಸ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಬಂಡವಾಳಶಾಹಿ ವಿಸ್ತಾರವಾಗುತ್ತಾ ಹೋದಂತೆ, ಬಂಡವಾಳಶಾಹಿ-ಪೂರ್ವ ಅಥವಾ ಬಂಡವಾಳಶಾಹಿ-ಅಲ್ಲದ ವ್ಯವಸ್ಥೆಗಳನ್ನು ನಾಶ ಮಾಡಿ ವಶಪಡಿಸುವ ಅವಕಾಶ ಕಡಿಮೆಯಾಗುತ್ತದೆ.



ಸಚಿತ್ರ ಕ್ಯಾಪಿಟಲ್ – 1934 (ಹ್ಯೂಗೊ ಗೆಲಾರ್ಟ್ ಚಿತ್ರಗಳ ಜತೆ)

ಇಂದಿನ ಬಂಡವಾಳಶಾಹಿಯ ಚಲನೆಗಳಲ್ಲಿ ಮೇಲೆ ಹೇಳಿದ ಬಂಡವಾಳಶಾಹಿಯ ಚಲನಶೀಲತೆಯ ಮೂರು "ಮೂಲ ವಸ್ತುಸ್ಥಿತಿ"ಗಳು ಪ್ರಮುಖ ಪಾತ್ರವಹಿಸುತ್ತಿರುವುದನ್ನು ಕಾಣಬಹುದು.



ಬಳಕೆ ಮೌಲ್ಯ ಮತ್ತು ಮೌಲ್ಯ (ಹ್ಯೂಗೊ ಗೆಲಾರ್ಟ್)

ಸಾಲದ ಪಾತ್ರ

ಮಾರ್ಕ್ಸ್ ಕಾಲದಲ್ಲಿ ಹಣಕಾಸು ಪ್ರಮುಖವಾಗಿ ಬ್ಯಾಂಕಿಂಗ್‌ಗೆ, ಅದರಲ್ಲೂ ಕೈಗಾರಿಕೆಗೆ ಸಾಲ ಕೊಡುವುದಕ್ಕೆ ಸೀಮಿತವಾಗಿತ್ತು. ಆಧುನಿಕ ಬ್ಯಾಂಕುಗಳು ಇನ್ನೂ ಉದಯವಾಗುತ್ತಿದ್ದವು ಅಷ್ಟೇ. ಹಣಕಾಸು ಹಾನಿಯ ಸಾಧ್ಯತೆಯನ್ನು ವಿವಿಧ ರೀತಿಗಳಲ್ಲಿ ಮಾರುವೇಷ ತೊಡಿಸುವ ಮತ್ತು ಸಾರ್ವಜನಿಕ ನಿಯಂತ್ರಣದ ಕಣ್ತಪ್ಪಿಸುವ, ಇಂದಿನ ವಿಚಿತ್ರವಾದ ಹುಲುಸಾಗಿ ಬೆಳೆದಿರುವ ಜಟಿಲ ಹಣಕಾಸು ಮಾರುಕಟ್ಟೆಗಳು, ಆಗ ಇನ್ನೂ ಇರಲಿಲ್ಲ. ಆದರೂ ಬಂಡವಾಳಶಾಹಿಯ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಮತ್ತು ಅದನ್ನು ಇನ್ನಷ್ಟು ಬಿಕ್ಕಟ್ಟಿಗೆ ತಳ್ಳುವಲ್ಲಿ ಸಾಲದ ಪಾತ್ರವನ್ನು ಮಾರ್ಕ್ಸ್ ಸೂಕ್ಷ್ಮವಾಗಿ ಗಮನಿಸಿದ್ದರು. ಅಗತ್ಯಕ್ಕಿಂತ ಹೆಚ್ಚಿನ ಉತ್ಪಾದನೆ ಮತ್ತು ವ್ಯಾಪಾರದಲ್ಲಿ ವಿಪರೀತ ಜೂಜಾಟಕ್ಕೆ ಸಾಲದ ವ್ಯವಸ್ಥೆಯೇ ಸನ್ನೆಕೋಲು. ಏಕೆಂದರೆ ಪುನರುತ್ಪಾದನೆಯ ಪ್ರಕ್ರಿಯೆಯನ್ನು ಇಲ್ಲಿ ಅದರ ಕೊನೆಯ ಮಿತಿಗೆ ಎಳೆಯಲಾಗಿದೆ. ಸಾಮಾಜಿಕ ಬಂಡವಾಳದ ನಿರ್ವಹಣೆಯನ್ನು ಅದರ ಒಡೆತನ ಇರದ ಜನ ಮಾಡುವುದೇ ಇದಕ್ಕೆ ಮುಖ್ಯ ಕಾರಣ. ಖಾಸಗಿ ಬಂಡವಾಳದ ಒಡೆಯನಾದ ಬಂಡವಾಳದಾರ ತಾನೇ ಅದನ್ನು ನಿರ್ವಹಿಸಿದಾಗ ಅದರ ಮಿತಿಯನ್ನು ಜಾಗ್ರತೆಯಿಂದ ನಿರ್ವಹಿಸುತ್ತಾನೆ. ಆದ್ದರಿಂದ ಸಾಲದ ವ್ಯವಸ್ಥೆ ಒಂದು ಕಡೆ, ಉತ್ಪಾದನಾ ಶಕ್ತಿಗಳ ಭೌತಿಕ ಬೆಳವಣಿಗೆಯನ್ನು ಬೆಳವಣಿಗೆಗೆ ವೇಗವರ್ಧಕವಾಗಿರುತ್ತದೆ. ಇನ್ನೊಂದು ಕಡೆ ಅದೇ, ವೈರುಧ್ಯಗಳ ಉಗ್ರ ಸ್ಫೋಟಕ್ಕೂ ವೇಗವರ್ಧಕವಾಗಿರುತ್ತದೆ ಎಂದು ಮಾರ್ಕ್ಸ್ ಮಾರ್ಮಿಕವಾಗಿ ಗಮನ ಸೆಳೆದಿದ್ದಾರೆ.

ಮಾರ್ಕ್ಸ್ "ಕಲ್ಪಿತ ಬಂಡವಾಳ"ದ ಪಾತ್ರವನ್ನು ಗಮನಿಸಿದ್ದು, ಬಡ್ಡಿ ಹುಟ್ಟಿಸುವ ಬಂಡವಾಳದ ಅನಿವಾರ್ಯ ಪರಿಣಾಮ ಇದು ಎಂದು ಪರಿಗಣಿಸಿದ್ದರು. "ಕಲ್ಪಿತ ಬಂಡವಾಳ" ಭೌತಿಕ ಬಂಡವಾಳದಿಂದ ಸ್ವತಂತ್ರವಾಗಿರುತ್ತದೆ. ಒಡೆತನದ ಕಾಗದ ಪತ್ರದಲ್ಲಿ ಮಾತ್ರ ಇರುತ್ತದೆ. ಇದನ್ನು ಹಣಕಾಸು ಮಾರುಕಟ್ಟೆಗಳಲ್ಲಿ ಮಾರಬಹುದು, ಕೊಳ್ಳಬಹುದು. ಇಂತಹ ಕಲ್ಪಿತ ಬಂಡವಾಳದ ಹೆಚ್ಚಳದಿಂದ ನಿಜವಾದ ಬಂಡವಾಳ ಶೇಖರಣೆಗೆ ಸಹಾಯಕವಾಬಹುದು. ಅದರ ಸ್ವಾಯತ್ತ (ವಾಸ್ತವಕ್ಕೆ ಸಂಬಂಧವಿಲ್ಲದ ಲಂಗು ಲಗಾಮಿಲ್ಲದ) ವಿಸ್ತರಣೆ, ಬಿಕ್ಕಟ್ಟು ಉಂಟು ಮಾಡಬಹುದು ಅಥವಾ ಬಿಕ್ಕಟ್ಟನ್ನು ಹೆಚ್ಚಿಸಬಹುದು. ಮಾರ್ಕ್ಸ್ ಅವರ ಈ ಒಳನೋಟವನ್ನು ಬಳಸಿ ಸಾಲ ಮತ್ತು ಹಣಕಾಸು ಮಾರುಕಟ್ಟೆಗಳ ಸುಗ್ಗಿ-ಕುಸಿತ ಪ್ರವೃತ್ತಿಯನ್ನು ಹಲವು ಅರ್ಥಶಾಸ್ತ್ರಜ್ಞರು ವಿವರಿಸಿದ್ದಾರೆ.

ಅವರ ಈ ಒಳನೋಟದಿಂದಾಗಿ ಹಣಕಾಸು ವಂಚನೆ ಹೇಗೆ ವ್ಯವಸ್ಥೆಯ ಅವಿಭಾಜ್ಯ ಭಾಗವಾಗುತ್ತದೆ ಮತ್ತು ಇಡೀ ವ್ಯವಸ್ಥೆ ಆರ್ಥಿಕವಾಗಿ ಇದರಿಂದ ವಿಶಿಷ್ಟವಾಗಿ ಬದಲಾಗುತ್ತಾ ಹೋಗಬಹುದು ಎಂದು ಮಾರ್ಕ್ಸ್ ಅವರಿಗೆ ಗಮನಿಸಲು ಸಾಧ್ಯವಾಗಿತ್ತು. ಸಾಲದ ವ್ಯವಸ್ಥೆ ಒಂದು ಕಡೆ ಇತರರ ಶ್ರಮದ ಶೋಷಣೆಯಿಂದ ಬಂಡವಾಳಶಾಹಿ ಉತ್ಪಾದನೆಗೆ ಉತ್ತೇಜನ ಕೊಡುತ್ತದೆ. ಇನ್ನೊಂದು ಕಡೆ ಅಗಾಧ ಪ್ರಮಾಣದ ಜೂಜಾಟ ಮತ್ತು ವಂಚನೆಗೆ ಎಡೆ ಮಾಡಿಕೊಡುತ್ತದೆ. ಕಡಿಮೆಯಾಗುತ್ತಾ ಹೋಗುವ ಸಂಖ್ಯೆಯ ಕೆಲವೇ ಕೆಲವರು ಸಾಮಾಜಿಕ ಸಂಪತ್ತನ್ನು ತಮ್ಮ ಸ್ವಂತಕ್ಕೆ ಬಳಸಿಕೊಳ್ಳುತ್ತಾರೆ. ಇದು ಇನ್ನೊಂದು ಉತ್ಪಾದನಾ

ಪುಟ 10 ಕ್ಕೆ

150 ವರ್ಷ ಹಳೆಯ "ಕ್ಯಾಪಿಟಲ್" ಈಗ ಯಾಕೆ ಓದಬೇಕು?............ ಪುಟ 9 ರಿಂದ

ವಿಧಾನಕ್ಕೂ ಬದಲಾಗಬಹುದು. ಈ ಸಂದಿಗ್ಧ ಸ್ವರೂಪದಿಂದಾಗಿ, ಸಾಲ ವ್ಯವಸ್ಥೆಯ ವಕ್ತಾರ ವಂಚಕ ಮತ್ತು ಹರಿಕಾರ ಎರಡೂ ಪಾತ್ರಗಳ ವಿಚಿತ್ರ ಮಿಶ್ರಣವಾಗಿರುತ್ತಾನೆ ಎಂಬ ಮಾರ್ಕ್ಸ್ ಉದ್ಗಾರ ಇಂದಿನ ಹಣಕಾಸು ಬಂಡವಾಳ ಯುಗದ ಭವಿಷ್ಯ ನುಡಿದಂತಿದೆ.


ಬಂಡವಾಳದ ಕೇಂದ್ರೀಕರಣ ಮತ್ತು ಅಸಮಾನ ಬೆಳವಣಿಗೆ

ಬಂಡವಾಳದ ಶೇಖರಣೆ ಉತ್ಪಾದಕತೆ ಹೆಚ್ಚಿಸುತ್ತದೆ. ಆದರೆ ಅದರ ಜತೆಗೆ ಬರುವ ಬೆಳವಣಿಗೆ ಅಸಮಾನವೂ ಆಗಿರುತ್ತದೆ. ಬಂಡವಾಳದ ಕೇಂದ್ರೀಕರಣ ಹಲವು ಬಂಡವಾಳಗಳ ನಡುವೆ ಅಡಕವಾಗಿ ಇರುವ ವೈಷಮ್ಯವನ್ನು ವ್ಯಕ್ತಪಡಿಸುತ್ತದೆ. ಬಂಡವಾಳದ ಶೇಖರಣೆ ಉತ್ಪಾದನಾ ಸಾಧನಗಳ ಮತ್ತು ಶ್ರಮಿಕರ ಮೇಲಿನ ನಿಯಂತ್ರಣದ ಕೇಂದ್ರೀಕರಣ ಮಾತ್ರವಲ್ಲ, ವೈಯಕ್ತಿಕ ಬಂಡವಾಳಗಳ ನಡುವಿನ ವಿಕರ್ಷಣೆ ಸಹ. ಅದು ಈಗಾಗಲೇ ರೂಪಿತವಾದ ಬಂಡವಾಳಗಳ ಕೇಂದ್ರೀಕರಣ. ಬಂಡವಾಳಗಳ ವೈಯಕ್ತಿಕ ಸ್ವಾತಂತ್ರ್ಯದ ನಾಶ, ಒಬ್ಬ ಬಂಡವಾಳದಾರ ಇನ್ನೊಬ್ಬ ಬಂಡವಾಳದಾರನಿಂದ ಬಂಡವಾಳ ಕಿತ್ತು-ಕೊಂಡು, ಸಣ್ಣ ಬಂಡವಾಳಗಳೆಲ್ಲಾ ಸೇರಿ ದೊಡ್ಡ ಬಂಡವಾಳವಾಗಿ ಬದಲಾಗುವ ಪ್ರಕ್ರಿಯೆ. ಬಂಡವಾಳ ಒಂದು ಕೈಯಲ್ಲಿ ದೊಡ್ಡದಾಗಿ ಬೆಳೆಯುತ್ತಿದೆ ಎಂದರೆ ಹಲವು ಕೈಗಳು ತಮ್ಮ ಬಂಡವಾಳವನ್ನು ಕಳೆದುಕೊಂಡಿವೆ ಎಂದರ್ಥ., ಎಂದು ಮಾರ್ಕ್ಸ್ ಈ ಪ್ರಕ್ರಿಯೆಯನ್ನು ನಿರೂಪಿಸುತ್ತಾರೆ.


ಅಸಮಾನ ಬೆಳವಣಿಗೆಯಿಂದಾಗಿ ಬಂಡವಾಳಶಾಹಿ ಸತತವಾಗಿ ಅಸಮತೋಲನದ ಸ್ಥಿತಿಯಲ್ಲಿ ಇರುತ್ತದೆ. ಇದು ಬಂಡವಾಳಶಾಹಿಯಡಿ ಹುಟ್ಟಿ ಬೆಳೆಯುವ ಎಲ್ಲಾ ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳಿಗೂ ಅದರ ಹಲವು ಆಯಾಮಗಳಿಗೂ ಅನ್ವಯಿಸುತ್ತದೆ. ಉತ್ಪಾದಕ ಶಕ್ತಿಗಳ ತ್ವರಿತ ಬೆಳವಣಿಗೆಗೂ, ಅದು ಉತ್ಪಾದಿಸುವ ಉತ್ಪನ್ನಗಳಿಗೆ ಇರುವ ಬೇಡಿಕೆಗೂ ಯಾವುದೇ ತಾಳಮೇಳ ಇರುವುದಿಲ್ಲ. ಇದು (ಹಾಕಿದ ಬಂಡವಾಳದ ಮೇಲೆ ಲಾಭ ಅಥವಾ ಕನಿಷ್ಟ ನಷ್ಟ ಆಗದಿರುವ) "ಗಳಿಸುವ ಬಿಕ್ಕಟ್ಟಿ"ಗೆ ಹಾದಿ ಮಾಡಿಕೊಡುತ್ತದೆ. ಅದೇ ರೀತಿ ಸ್ಥಿರ ಮತ್ತು ಚರ ಬಂಡವಾಳದ ವಿಸ್ತರಣೆಯ ಅನುಪಾತದಲ್ಲಿ ವಿಷಮತೆ ಲಾಭದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ವಿವಿಧ ಆರ್ಥಿಕ ಕ್ಷೇತ್ರಗಳ ನಡುವೆ ಸಹ ಅಸಮಾನತೆ ಹೆಚ್ಚುತ್ತಾ ಹೋಗುತ್ತದೆ. ಬಂಡವಾಳದ ಕೇಂದ್ರೀಕರಣದ ಪ್ರವೃತ್ತಿಯಿಂದಾಗಿ ಪ್ರಾದೇಶಿಕ ಅಸಮಾನತೆ ಸಹ ಹೆಚ್ಚುತ್ತಾ "ಅಭಿವೃದ್ಧ" ಮತ್ತು "ಕಡಿಮೆ ಅಭಿವೃದ್ಧ ಅಥವಾ ಅಭಿವೃದ್ಧಿ ಹೊಂದದ" ಪ್ರದೇಶಗಳು ರೂಪಿತವಾಗುತ್ತವೆ. ವಿನಿಮಯದ ಮಾಧ್ಯಮವಾಗಿ ಮತ್ತು ಮೌಲ್ಯವನ್ನು ಅಳೆಯುವ ಸಾಧನವಾಗಿ ಹಣದ ಎರಡು ರೂಪಗಳ ನಡುವೆಯೂ ಹೊಂದಾಣಿಕೆ ಇರುವುದಿಲ್ಲ. ಇವುಗಳ ನಡುವೆ ಹೊಂದಾಣಿಕೆಯ ಅಭಾವ, ಸಾಲ ಮತ್ತು ಹಣಕಾಸು ವ್ಯವಸ್ಥೆಯ ವಿಸ್ತರಣೆಯಿಂದ ಮತ್ತಷ್ಟು ಹೆಚ್ಚಾಗಿ ಬಿಕ್ಕಟ್ಟಿಗೆ ತಿರುಗುವ ಪ್ರವೃತ್ತಿ ಹೊಂದಿರುತ್ತವೆ.

ಕಳೆದ 150 ವರ್ಷಗಳಲ್ಲಿ (ಅದರಲ್ಲೂ ಕಳೆದ 30 ವರ್ಷಗಳಲ್ಲಿ) ಇನ್ನಷ್ಟೂ ಘೋರವಾಗಿರುವ ಅಸಮಾನತೆಯ ವಿವಿಧ ಮುಖಗಳ ಮೂಲವನ್ನು ಮಾರ್ಕ್ಸ್ ಆಗಲೇ ನಿರೂಪಿಸಿದ್ದಾರೆ. ಹಲವು ಆಯಾಮಗಳಲ್ಲಿ ಅಗಾಧವಾಗಿ ಹೆಚ್ಚುತ್ತಿರುವ ಅಸಮಾನತೆ ಈಗ ಮಾರ್ಕ್ಸ್‌ವಾದಿಗಳಲ್ಲದ ಅರ್ಥಶಾಸ್ತ್ರಜ್ಞರ ಮತ್ತು ಇತರ ಸಮಾಜ ವಿಜ್ಞಾನಿಗಳ ಪ್ರಮುಖ ಕಾಳಜಿಯಾಗಿದೆ. ಅವರೆಲ್ಲ ಈ ಬಗ್ಗೆ ಮಾರ್ಕ್ಸ್

ಮಿಗುತಾಯ ಮೌಲ್ಯ 1



ಮಿಗುತಾಯ ಮೌಲ್ಯ 2



ವಿಶ್ಲೇಷಣೆಯನ್ನು ಅಧ್ಯಯನ ಮಾಡುತ್ತಿದ್ದಾರೆ.

ಸಂಘರ್ಷ, ವೈರುಧ್ಯಗಳು ಮತ್ತು ಬಿಕ್ಕಟ್ಟುಗಳು

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಮತ್ತು ಸತತವಾಗಿರುವ ಬಿಕ್ಕಟ್ಟಿನ ಪ್ರವೃತ್ತಿ ಇದೆ ಎಂಬುದು ಮಾರ್ಕ್ಸ್ ಅವರ ವಿಶ್ಲೇಷಣೆಯ ಪ್ರಮುಖ ಅಂಶ. ಈ ವ್ಯವಸ್ಥೆಯಲ್ಲಿ ಹಲವು ಹಂತಗಳ ಸಂಘರ್ಷ, ವೈರುಧ್ಯಗಳು ಇವೆ. ಅವುಗಳಲ್ಲಿ ಎಲ್ಲವೂ ಮರುಕಳಿಸುವ ಬಿಕ್ಕಟ್ಟಿಗೆ ಅಥವಾ ವಿಸ್ತರಣೆಗೆ ಕಾರಣವಾಗದೆ ಇರಬಹುದು. ಬಂಡವಾಳದ ಚಲನಶೀಲತೆಯಿಂದಾಗಿ ಅದು ದೇಶಗಳೊಳಗೆ ಮತ್ತು ದೇಶಗಳ ನಡುವೆ, ಕಾರ್ಮಿಕರು ರೈತರುಗಳನ್ನು ಹೆಚ್ಚೆಚ್ಚು ಬಡತನಕ್ಕೆ ತಳ್ಳುತ್ತಿರುತ್ತದೆ. ಇನ್ನೊಂದು ಕಡೆ ತಾನು ಬೃಹದಾಕಾರದಲ್ಲಿ ಶ್ರೀಮಂತಿಕೆಯಿಂದ ಬೆಳೆಯುತ್ತಿರುತ್ತದೆ. ಇದು ಸಹಜವಾಗಿಯೇ ವರ್ಗ ಸಂಘರ್ಷಗಳನ್ನು ಉಂಟು ಮಾಡುತ್ತದೆ. ಇದು ಬಂಡವಾಳಶಾಹಿಯ ಅಡಿಯಲ್ಲಿ ಸಾಮಾಜಿಕ ಮತ್ತು ಭೌತಿಕ ಜೀವನದ ಆವಶ್ಯಕ ಮತ್ತು ಸತತವಾದ ಅಂಶವಾಗಿರುತ್ತದೆ. ಬಂಡವಾಳಶಾಹಿ ಮತ್ತು ಕಾರ್ಮಿಕ ವರ್ಗದೊಳಗೂ, ಒಬ್ಬ ಬಂಡವಾಳದಾರನನ್ನು ಇನ್ನೊಬ್ಬ ಬಂಡವಾಳದಾರನ ವಿರುದ್ಧ, ಒಬ್ಬ ಕಾರ್ಮಿಕನನ್ನು ಇನ್ನೊಬ್ಬ ಕಾರ್ಮಿಕನ ವಿರುದ್ಧ ಎತ್ತಿ ಕಟ್ಟುವ ಆಂತರಿಕ ಸಂಘರ್ಷಗಳನ್ನೂ ವ್ಯವಸ್ಥೆ ಹುಟ್ಟು ಹಾಕುತ್ತದೆ. ಆದ್ದ-ರಿಂದ ಈ ವ್ಯವಸ್ಥೆಯಲ್ಲಿ ಎಲ್ಲರಿಗೂ ಬದುಕುಳಿಯಲು ಸತತ ಸಂಘರ್ಷದಲ್ಲಿ ಇರಬೇಕಾಗುತ್ತದೆ. ಆದ್ದ-ರಿಂದ ವ್ಯಕ್ತಿವಾದ, ಸಂಘರ್ಷ ಮತ್ತು ಪೈಪೋಟಿ ಈ ವ್ಯವಸ್ಥೆಯನ್ನು ನಡೆಸುವ ಇಂಜಿನ್ ಆಗಿರುತ್ತದೆ. ಎಂದು ಮಾರ್ಕ್ಸ್ ವಿವರಿಸುತ್ತಾರೆ.

ಅದೇ ಸಮಯದಲ್ಲಿ, ಬಂಡವಾಳಗಳ ನಡುವೆ ಸಹ ಇರುವ ವ್ಯಕ್ತಿವಾದ ಮತ್ತು ಪೈಪೋಟಿ, ಮಾರುಕಟ್ಟೆಯ ಅರಾಜಕತೆ ಮತ್ತು ಬಿಕ್ಕಟ್ಟಿನತ್ತ ಅನಿವಾರ್ಯ ಪ್ರವೃತ್ತಿಯನ್ನು ಸೃಷ್ಟಿ ಮಾಡುತ್ತವೆ. ವೈಯಕ್ತಿಕ ಬಂಡವಾಳಗಳ ಹೆಚ್ಚಿನ ಲಾಭಕ್ಕಾಗಿನ ನಡಾವಳಿಯ ವಿಧಾನದಿಂದಲೇ, ಮಾರುಕಟ್ಟೆಯ ಅಗತ್ಯಕ್ಕಿಂತ ಹೆಚ್ಚು ಉತ್ಪಾದನೆ (ಸಮಾಜದ ಎಲ್ಲರ ಮಾನವ ಅಗತ್ಯಗಳು ಪೂರ್ಣವಾಗಿ ಪೂರೈಕೆಯಾಗದಿರುವಾಗಲೂ) ಈ ವ್ಯವಸ್ಥೆಯ ಗುಣಲಕ್ಷಣವಾಗಿರುತ್ತದೆ. ಇದರಿಂದಾಗಿ ಬಂಡವಾಳ ಶೇಖರಣೆಯ ಪ್ರಕ್ರಿಯೆ ಯಾವತ್ತೂ ಸುಗಮವಾಗಿರುವುದಿಲ್ಲ. ಅದರಲ್ಲಿ ವಿಪರೀತ ಏರುಪೇರು ಮಾತ್ರವಲ್ಲ, ಆಗಾಗ ಬಿಕ್ಕಟ್ಟುಗಳಿರುತ್ತವೆ. ಭಾಗಶಃ ಹೆಚ್ಚಿನ ಆರ್ಥಿಕ ಬೆಳವಣಿಗೆ ಮತ್ತು ತಂತ್ರಜ್ಞಾನದ ಪ್ರಗತಿ ಸಾಧಿಸುವಲ್ಲಿ ಬಂಡವಾಳಶಾಹಿಯ ಯಶಸ್ಸಿನ ಪರಿಣಾಮವಾಗಿಯೇ ಇದು ಆಗುತ್ತದೆ. ಜನಸಂಖ್ಯೆಗೆ ಹೋಲಿಸಿದರೆ ಬಂಡವಾಳಶಾಹಿ ಉತ್ಪಾದನಾ ವಿಧಾನದಲ್ಲಿ ದಂಗುಬಡಿಸುವ ರೀತಿಯಲ್ಲಿ ಬೆಳೆಯುವ, ಜನಸಂಖ್ಯೆಯ ಏರಿಕೆಯ ದರಕ್ಕಿಂತಲೂ ಹೆಚ್ಚಿನ ದರದಲ್ಲಿ (ಅದರ ಭೌತಿಕ ಸಾರ ಮಾತ್ರವಲ್ಲ) ಏರುವ ಉತ್ಪಾದಕತೆ, ಅದರ ಬುಡದ ಜತೆಗೆ ಹೊಂದಾಣಿಕೆಯಿಲ್ಲದೆ ವೈರುಧ್ಯ ಹೊಂದಿರುತ್ತದೆ. ಆಸ್ತಿ ಮತ್ತು ಆದಾಯಗಳ ಕೇಂದ್ರೀಕರಣದಿಂದಾಗಿ ಸಣ್ಣದಾಗುತ್ತಾ ಹೋಗುವ ಜನವಿಭಾಗಕ್ಕೆ ಮಾತ್ರ ಈ ಉತ್ಪಾದಕತೆ ಕೆಲಸ ಮಾಡುತ್ತದೆ. ಹೆಚ್ಚುತ್ತಿರುವ ಬಹುಸಂಖ್ಯಾತ ಜನವಿಭಾಗಕ್ಕೆ ಇದು ಅರ್ಥಹೀನವಾಗಿರುತ್ತದೆ. ಇದು ಹಿಗ್ಗುತ್ತಿರುವ ಬಂಡವಾಳ ತನ್ನ ಮೌಲ್ಯ ಹೆಚ್ಚಿಸುವ ಪರಿಸ್ಥಿತಿಗೆ ವೈರುಧ್ಯ ಹೊಂದಿರುತ್ತದೆ. ಆದ್ದರಿಂದ ಬಿಕ್ಕಟ್ಟು ಉಂಟಾಗುತ್ತದೆ. ಎಂದು ಮಾರ್ಕ್ಸ್ ಬಿಕ್ಕಟ್ಟು ಉಂಟಾಗುವ ಬಗೆಯನ್ನು ವಿಶ್ಲೇಷಿಸುತ್ತಾರೆ.

ಆಗಾಗ ಮರುಕಳಿಸುವ ಈ ಬಿಕ್ಕಟ್ಟುಗಳು ಬಂಡವಾಳಶಾಹಿ ವ್ಯವಸ್ಥೆಯ ಚಲನೆಯಲ್ಲಿ ಅಡಕವಾಗಿರುವ ವೈರುಧ್ಯಗಳನ್ನು ಪರಿಹರಿಸುವ ಒಂದು, ಬಹುಶಃ ಕಟುವಾದ ಮತ್ತು ಹಿಂಸಾತ್ಮಕ ವಿಧಾನ. ಬಿಕ್ಕಟ್ಟಿನಲ್ಲಿ ಅಡಕವಾಗಿರುವ ಅಸಮತೋಲನ, ಪ್ರಮುಖವಾಗಿ ಬೇಡಿಕೆಗಿಂತ (ಮಾನವ ಅಗತ್ಯಕ್ಕಿಂತ ಅಲ್ಲ) ಹೆಚ್ಚಿನ ಉತ್ಪಾದನೆಯದ್ದು. ಆದ್ದರಿಂದ ಇಂತಹ ಬಿಕಟ್ಟಿನಲ್ಲಿ ಸಾಮಾನ್ಯವಾಗಿ ಆಗ ಇರುವ ಗಮನಾರ್ಹ ಪ್ರಮಾಣದ ಉತ್ಪನ್ನಗಳು ಮತ್ತು ಉತ್ಪಾದಕ ಶಕ್ತಿಗಳು ನಾಶವಾಗುತ್ತವೆ. ಬೆಲೆ ಕುಸಿತದಿಂದ ಉಂಟಾಗುವ ಬಿಕ್ಕಟ್ಟಿನ (ಇದು ಬಿಕ್ಕಟ್ಟಿನ ಒಂದು ರೂಪ ಮಾತ್ರ) ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂದು ಮಾರ್ಕ್ಸ್ ಹೀಗೆ ವಿವರಿಸಿದ್ದಾರೆ: ಪೂರ್ವನಿಯೋಜಿತ ಬೆಲೆಗಳ ಸಂಬಂಧಗಳು ಪುನರುತ್ಪಾದನೆಯ ಪ್ರಕ್ರಿಯೆಯನ್ನು ನಿರ್ಣಯಿಸುತ್ತವೆ. ಆದ್ದರಿಂದ ಸಾರ್ವತ್ರಿಕ ಬೆಲೆ ಕುಸಿತದಿಂದ ಪುನರುತ್ಪಾದನೆಯ ಪ್ರಕ್ರಿಯೆ ನಿಂತು ಹೋಗಿ ಗೊಂದಲಕ್ಕೆ ಒಳಗಾಗುತ್ತದೆ. ಈ ಸ್ಥಗಿತತೆ ಮತ್ತು ಗೊಂದಲ, ಪಾವತಿಯ ಮಾಧ್ಯಮವಾಗಿ ಹಣದ ಪಾತ್ರವನ್ನು ನಿಷ್ಕ್ರಿಯಗೊಳಿಸುತ್ತದೆ. ಹಣದ ಬೆಳವಣಿಗೆ ಬಂಡವಾಳದ ಬೆಳವಣಿಗೆ ತಳುಕು ಹಾಕಿಕೊಂಡಿದ್ದು, ಬೆಲೆಗಳ ಸಂಬಂಧಗಳ ಮೇಲೆ ಆಧಾರಿತವಾಗಿರುತ್ತದೆ. ನಿರ್ದಿಷ್ಟ ತಾರೀಕುಗಳಲ್ಲಿ ಆಗಬೇಕಾಗಿದ್ದ ಹಣದ ಪಾವತಿಗಳು ಆಗದೆ, ಇದು ನೂರಾರು ಕಡೆ ಆಗಿ ಸರಣಿ ಪರಿಣಾಮವನ್ನು ಬೀರುತ್ತದೆ. ಸರಣಿ ರೂಪದಲ್ಲಿ ಹಣ ಪಾವತಿ ಆಗದೆ, ಸಾಲದ ವ್ಯವಸ್ಥೆ ಕುಸಿದು ಬಿದ್ದು ಗೊಂದಲ ಇನ್ನಷ್ಟು ಹೆಚ್ಚುತ್ತದೆ. ಇದರಿಂದ ಬಲಾತ್ಕಾರದ ಅಪಮೌಲ್ಯವಾಗಿ, ಉತ್ಪಾದನೆ ಸ್ಥಗಿತಗೊಂಡು, ಪುನರುತ್ಪಾದನೆಯ ಪ್ರಕ್ರಿಯೆ ಅಸ್ತವ್ಯಸ್ತವಾಗುತ್ತದೆ. ಕೊನೆಗೆ ಪುನರುತ್ಪಾದನೆ ನಿಂತು ಹೋಗಿ ತೀವ್ರ ಬಿಕ್ಕಟ್ಟಿಗೆ ದಾರಿ ಮಾಡಿಕೊಡುತ್ತದೆ.

ಮಾರ್ಕ್ಸ್ ಅವರಿಗೆ ಬಂಡವಾಳಶಾಹಿ ಬಿಕ್ಕಟ್ಟು ಯಾವತ್ತೂ ಬರಿಯ "ಆರ್ಥಿಕ" ಅಥವಾ "ಹಣಕಾಸಿನ" ಬಿಕ್ಕಟ್ಟು ಆಗಿರಲಿಲ್ಲ. ಬದಲಾಗಿ ಅವು ನಿಜವಾದ ಅಸಮತೋಲನಗಳು, ಹೊಂದಾಣಿಕೆಯಿಲ್ಲದ ಅನುಪಾತಗಳು ಹಾಗೂ ಅಸಮಾನ ಬೆಳವಣಿಗೆಯ ಪ್ರತಿಫಲನಗಳು. ಇವು ಬಂಡವಾಳಶಾಹಿ ಶೇಖರಣೆ-ಯ ಮೂಲಭೂತ ಲಕ್ಷಣಗಳು. ನಿಜವಾಗಿಯೂ ಅಸಮಾನ ಉತ್ಪಾದನಾ ಶಕ್ತಿಗಳ ಬೆಳವಣಿಗೆಯ ಪರಿಣಾಮವಾಗಿರುವ ಇದು ವಿನಿಮಯದ ಅಥವಾ (ಇಂದಿನ ನುಡಿಕಟ್ಟಿನಲ್ಲಿ) ಹಣಕಾಸು ಬಿಕ್ಕಟ್ಟಿನಂತೆ ತೋರುತ್ತದೆ ಅಷ್ಟೇ.

ಬಂಡವಾಳಶಾಹಿ ಬಿಕ್ಕಟ್ಟು ಬಗ್ಗೆ ಮಾರ್ಕ್ಸ್ ವಿಶ್ಲೇಷಣೆಯ ಮಹತ್ವ 2008ರ ಜಾಗತಿಕ ಬಿಕ್ಕಟ್ಟಿನ ಸಮಯದಲ್ಲಿ ಹಿಂದೆಂದೂ ಕಾಣದಂತೆ ಕಂಡು ಬಂತು. ಇದ್ದಕ್ಕಿದ್ದ ಹಾಗೆ ಮಾರ್ಕ್ಸ್ "ಕ್ಯಾಪಿಟಲ್" ಮಾರಾಟ ಏರಲಾರಂಭಿಸಿತು. ಬ್ಯಾಂಕುಗಳ ನಿರ್ದೇಶಕರು, ಕಾರ್ಪೊರೆಟ್ ಧಣಿಗಳು,



ಕಾರ್ಮಿಕನ ಶ್ರಮ ತೀವ್ರಗೊಳಿಸುವ ಯಂತ್ರ


ಬೂರ್ಜ್ವಾ ಅರ್ಥಸಾಸ್ತ್ರಜ್ಞರು, ರಾಜಕಾರಣಿಗಳು "ಕ್ಯಾಪಿಟಲ್" ಬಗ್ಗೆ ಮಾತನಾಡಲಾರಭಿಸಿದರು. ಬಂಡವಾಳಶಾಹಿ ಬಿಕ್ಕಟ್ಟಿನ ಬಗ್ಗೆ ಮಾರ್ಕ್ಸ್ ವಿಶ್ಲೇಷಣೆ ಬಗ್ಗೆ ಅವರೆಲ್ಲ ಕುತೂಹಲಿಗಳಾಗಿದ್ದರು. ಇಂದಿನ ಬಿಕ್ಕಟ್ಟು ವಿಶ್ಲೇಷಣೆಗೆ ಪರಿಹಾರಕ್ಕೆ "ಕ್ಯಾಪಿಟಲ್"ನಲ್ಲಿ ಉತ್ತರ ಹುಡುಕಲಾರಂಭಿಸಿದ್ದರು. ಅವರಿಗೆ ಅಲ್ಲಿ ಉತ್ತರ ಸಿಕ್ಕಿತೋ ಇಲ್ಲವೋ, 150 ವರ್ಷ ಹಳೆಯ "ಕ್ಯಾಪಿಟಲ್" ಈಗ ಯಾಕೆ ಓದಬೇಕು? ಎಂಬ ಪ್ರಶ್ನೆಗಂತೂ ಇದರಲ್ಲಿ ಉತ್ತರವಿದೆ.

ಕಾರ್ಲ್ ಮಾರ್ಕ್ಸ್ ಅವರ ಬಂಡವಾಳಶಾಹಿ ಪದ್ದತಿಯ ಈ ಸಮಗ್ರ ಅಧ್ಯಯನ ಎತ್ತಿ ತೋರಿಸಿದ ಅದರ ಹಲವು ಪ್ರಮುಖ ಲಕ್ಷಣಗಳು, ಇಂದು ಬಂಡವಾಳಶಾಹಿ ಎಷ್ಟೇ ಬದಲಾಗಿದ್ದರೂ ಅದನ್ನು ಅರ್ಥೈಸಲು ಸಹಾಯಕವಾಗಿವೆ ಎಂಬುದು ಆಶ್ಚರ್ಯಕರ, ಆದರೂ ನಿಜ. "ಕ್ಯಾಪಿಟಲ್"ನಲ್ಲಿ ಹಲವು ಹಂತಗಳಲ್ಲಿ ಕಾಣಬರುವ ಮಾರ್ಕ್ಸ್ ಒಳನೋಟಗಳು ಇಂದಿಗೂ ಪ್ರಸ್ತುತ. ಇಂದಿನ ಬಂಡವಾಳಶಾಹಿಯ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲಿಕ್ಕೂ ಸಹಾಯಕ, ಎಂದು ಮೇಲಿನ ನಿರೂಪಣೆಯಿಂದ ಸಿದ್ಧವಾಗುತ್ತದೆ. ●

ವಿಷತುಂಬಿಕೊಂಡಿರುವ ಹೊಲಗದ್ದೆಗಳು

ಕಳೆದ 16 ವರ್ಷಗಳಲ್ಲಿ ಮಹಾರಾಷ್ಟ್ರದ ವಿದರ್ಭ ಪ್ರದೇಶವು ಅಭಿವೃದ್ಧಿಯಲ್ಲಿ ಅತ್ಯಂತ ಹಿಂದುಳಿದಿರುವುದು ಮಾತ್ರವಲ್ಲದೆ ಅತ್ಯಂತ ಗಂಭೀರವಾದ ಕೃಷಿ ಬಿಕ್ಕಟ್ಟನ್ನೂ ಎದುರಿಸುತ್ತಿದೆ. ಹೀಗಾಗಿ ಆ ಪ್ರಾಂತ್ಯದ ಆರು ಜಿಲ್ಲೆಗಳಲ್ಲಿ 14,000 ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ವರ್ಷದ ಜುಲೈ ತಿಂಗಳಿಂದ ಯಾವತ್‌ಮಲ್ ಮತ್ತಿತರ ಪ್ರದೇಶಗಳಲ್ಲಿ ಒಂದು ಹೊಸ ಬಗೆ-ಯ ಸಮಸ್ಯೆಯು ತಲೆದೋರಿದೆ. ಆ ಪ್ರದೇಶದ ಕೃಷಿ ಕಾರ್ಮಿಕರು ಮತ್ತು ಸಣ್ಣ ರೈತರು ವಿಷಕಾರಿ ಕ್ರಿಮಿನಾಶಕಗಳ ಸೇವನೆಯ ಗುಣಲಕ್ಷಣದಿಂದಾಗಿ ಆಸ್ಪತ್ರೆ ಸೇರುತ್ತಿದ್ದಾರೆ. ಆದರೆ ಕಳೆದ ಆಗಸ್ಟ್‌ನಲ್ಲಿ ಇದೇ ಕಾರಣದಿಂದಾಗಿ 19 ಜನರು ಸತ್ತದ್ದು ವರದಿಯಾಗುವ ತನಕ ಈ ವಿದ್ಯಮಾನ ಸರ್ಕಾರದ ಅಥವಾ ಮಾಧ್ಯಮಗಳ ಗಮನವನ್ನು ಸೆಳೆದಿರಲಿಲ್ಲ. ರೈತರ ಆತ್ಮಹತ್ಯೆಗಳ ಬಗ್ಗೆ ಜನರಲ್ಲಿ ಹುಟ್ಟಿದ್ದ ಆಕ್ರೋಶ ಮತ್ತು ಆ ಪ್ರದೇಶದ ಕೃಷಿಯ ಪರಿಸ್ಥಿತಿಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಈ ಪ್ರದೇಶದ ಬಗ್ಗೆ ಇನ್ನೂ ಹೆಚ್ಚು ಜಾಗರೂಕರಾಗಿರುವಂತೆಯೂ ಮತ್ತು ಇಂಥಾ ಘಟನೆಗಳು ನಡೆಯದಂತೆ ಎಚ್ಚರದಿಂದಿರುವಂತೆಯೂ ಮಾಡಬೇಕಿತ್ತು. ಕಳೆದ ಕೆಲವು ವರ್ಷಗಳ ಹಿಂದೆಯೇ ಈ ವಿಷಯುಕ್ತ ಕ್ರಿಮಿನಾಶಕಗಳ ಬಗ್ಗೆ ಸೂಚನೆಗಳು ದೊರೆತಿತ್ತು. ಆಗಲೇ ಸರ್ಕಾರವು ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಬೇಕಿತ್ತು. ಯಾವತ್‌ಮಲ್ಲಿನ 19 ರೈತರನ್ನು ಒಳಗೊಂಡಂತೆ ಒಟ್ಟಾರೆಯಾಗಿ 30 ರೈತರು ಈಗಾಗಲೇ ಇದರಿಂದ ಸಾವಿಗೀಡಾಗಿದ್ದಾರೆ. ಇದು ಕ್ರಿಮಿನಾಶಕಗಳ ನಿಯಂತ್ರಣದ ಬಗ್ಗೆ ಮತ್ತು ಅದರ ಬಳಕೆಯ ಬಗ್ಗೆ ನಿಕಟ ಉಸ್ತುವಾರಿ ಮಾಡುವ ಅಗತ್ಯವನ್ನು ಎತ್ತಿತೋರಿಸಿದೆ.

2002ರಿಂದ ಭಾರತದಲ್ಲಿ ಬಿಟಿ ಹತ್ತಿಯನ್ನು ಬೆಳೆಯಲು ಅನುಮತಿ ನೀಡಲಾಯಿತು. ಆದರೆ ಯಾವುದೇ ಮೇಲ್ಮೈ ನೀರಾವರಿ ವ್ಯವಸ್ಥೆ ಇಲ್ಲದ ಮತ್ತು ಸವಕಲಾದ ಮಣ್ಣಿರುವ ವಿದರ್ಭದಲ್ಲೂ ಈ ಬಿಟಿ ಹತ್ತಿಯನ್ನು ಬೆಳೆಯಲು ರೈತರು ಪ್ರಾರಂಭಿಸಿದರು. ಕಳೆದ ವರ್ಷ ಒಳ್ಳೆಯ ಬೆಲೆ ದೊರೆತದ್ದನ್ನು ನೋಡಿ ಈ ವರ್ಷ ವಿದರ್ಭದ ರೈತರು 16 ರಿಂದ 17 ಲಕ್ಷ ಹೆಕ್ಟೇರ್ ಜಮೀನಿನಲ್ಲಿ ಬಿಟಿ ಹತ್ತಿಯನ್ನು ಬಿತ್ತಿದ್ದಾರೆ. ಕಳೆದ ಕೆಲವು ವರ್ಷಗಳಿಂದ ವಿದರ್ಭವನ್ನೂ ಒಳಗೊಂಡಂತೆ ಭಾರತದ ಹಲವಾರು ಭಾಗಗಳಲ್ಲಿ ಕೀಟ ಮತ್ತು ಕ್ರಿಮಿಗಳ ಬಾಧೆ ಹೆಚ್ಚಿದೆ, ಹಾಗೂ ಹಸಿರು ಮತ್ತು ಗುಲಾಬಿ ಬೋಲ್ವರ್ಮ್ ಕೀಟಗಳು ಕೀಟನಾಶಕಗಳ ವಿರುದ್ಧ ಪ್ರತಿರೋಧ ಶಕ್ತಿಯನ್ನು ಬೆಳೆಸಿಕೊಂಡಿವೆ. ಇದಲ್ಲದೆ ದ್ವಿತೀಯ ಹಂತದ ಕೀಟಗಳ ಧಾಳಿಯೂ ಹೆಚ್ಚಿದೆ. ಕಳೆದ ಎರಡು ವರ್ಷಗಳಲ್ಲಿ ಭಾರತದ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಬಿಟಿ ಹತ್ತಿಯ ಸಾಮರ್ಥ್ಯವು ಕುಗ್ಗಿದ್ದು ಕೀಟಗಳು ಮತ್ತು ಗುಲಾಬಿ ಬೋಲ್ವರ್ಮ್‌ಗಳು ಬೋಲ್ಗಾರ್ಡ್-2ನ್ನು ನಾಶಮಾಡಿವೆ. ಈ ಗುಲಾಬಿ ಬೋಲ್ವರ್ಮ್‌ಗಳು 2009ರಲ್ಲೇ ಬೋಲ್ಗಾರ್ಡ್ 1 ಕ್ಕೆ ಪ್ರತಿರೋಧವನ್ನು ಬೆಳೆಸಿಕೊಂಡಿದ್ದವು. 2015ರಲ್ಲಿ ಗುಜರಾತಿನಲ್ಲಿ ಮತ್ತು ತೆಲಂಗಾಣ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಬೋಲ್ಗಾರ್ಡ್1 ರ ಬದಲಿಗೆ ಬೋಲ್ಗಾರ್ಡ್ 2ನ್ನು ಬಳಸಿದರೂ ಹಾನಿಯನ್ನು ತಡೆಗಟ್ಟಲಾಗಲಿಲ್ಲ. 2015-16ರಲ್ಲಿ ಪಂಜಾಬ್ ಮತ್ತು ಹರ್ಯಾಣಗಳಲ್ಲಿ ಬಿಳಿಕೀಟಗಳ ದಾಳಿಯಿಂದಾಗಿ ಅಪಾರ ಬೆಳೆನಾಶ ಉಂಟಾಯಿತು. ಒಂದೆಡೆ ಬಿಟಿ ಹತ್ತಿಯ ಜೈವಿಕ ಸಾಮರ್ಥ್ಯ ಕುಗ್ಗಿದೆಯೆಂದು ಅನಧಿಕೃತವಾಗಿ ಒಪ್ಪಿಕೊಳ್ಳುತ್ತಿದ್ದರೂ ಸರ್ಕಾರವು ಈ ವಿಧದ ಬೀಜದ ಪೂರೈಕೆಯನ್ನು ತಡೆಗಟ್ಟಿ ಅದರ ಬದಲಾಗಿ ಬೇರೆ ಬೀಜವನ್ನು ಪೂರೈಸುವಂಥ ಯಾವುದೇ ಮಹತ್ವದ ಹೆಜ್ಜೆಯನ್ನಿಟ್ಟಿಲ್ಲ. ಅದರ ಬದಲಿಗೆ ಕೀಟಗಳನ್ನು ತಡೆಗಟ್ಟುವಂಥ ಯಾವುದೇ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುತ್ತಿಲ್ಲವೆಂದು ರೈತರ ಮೇಲೆಯೇ ಗೂಬೆ ಕೂರಿಸಲಾಗುತ್ತಿದೆ.



ವಿಷಪೂರಿತವಾದ ಮತ್ತು ಅನಿಯಂತ್ರಿತ ಕ್ರಿಮಿನಾಶಕಗಳ ಬಳಕೆಯು ರೈತರನ್ನೂ ಮತ್ತು ಕಾರ್ಮಿಕರನ್ನೂ ಕೊಲ್ಲುತ್ತಿದೆ.

ಕಳೆದ ಜುಲೈ ತಿಂಗಳಲ್ಲಿ ಹತ್ತಿ ಬೆಳೆಗಳಿಗೆ ಏಕೆ ಅತಿ ಹೆಚ್ಚು ಕೀಟನಾಶಕವನ್ನು ಸಿಂಪಡಿಸಲಾಯಿತೆಂಬುದರ ಹಿಂದಿನ ಕಾರಣಗಳನ್ನು ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆಯ (ಸಿಸಿಆರ್‌ಐ) ಅಧ್ಯಯನವೊಂದು ಬಯಲಿಗೆ ತಂದಿದೆ. ಹತ್ತಿ ಬೆಳೆಯನ್ನು ಡಿಸೆಂಬರ್‌ನಲ್ಲೇ ಕಟಾವು ಮಾಡಬೇಕಿದ್ದರೂ ಕಳೆದ ಹಲವಾರು ವರ್ಷಗಳಿಂದ ಹತ್ತಿ ಬೆಳೆಯನ್ನು ಮಾರ್ಚ್‌ವರೆಗೆ ಜಮೀನಿನಲ್ಲೇ ಉಳಿಸಿಕೊಳ್ಳಲಾಗುತ್ತಿತ್ತು. ಹೀಗಾಗಿ ಹತ್ತಿಯ ಬೀಜ ಮತ್ತು ತುಪ್ಪಟವನ್ನು ನಾಶಗೊಳಿಸುವ ಗುಲಾಬಿ ಬೋಲ್ವರ್ಮ್‌ನ ಜೈವಿಕ ಚಕ್ರಕ್ಕೆ ಭಂಗ ಬರುತ್ತಿರಲಿಲ್ಲ. ಹೀಗಾಗಿ ಸಾಮಾನ್ಯವಾಗಿ ನವಂಬರ್ ಮಧ್ಯಭಾಗದಲ್ಲಿ ಕಂಡುಬರುವ ಈ ಕೀಟವು, ಮುಂದಿನ ಬಿತ್ತನೆ 'ಋತುವಿನಲ್ಲಿ' ಅದರಲ್ಲೂ ವಿಶೇಷವಾಗಿ ನೀರಾವರಿ ಪ್ರದೇಶಗಳಲ್ಲಿ ಇನ್ನೂ ಬೇಗನೆಯೇ ಕಾಣಿಸಿಕೊಂಡವು. ಇದರ ಜೊತೆಗೆ ಪೂರಕವಾದ ಹವಾಮಾನ ಮತ್ತು ಬೆಳವಣಿಗೆ ಪೂರಕ ಹಾರ್ಮೋನ್‌ಗಳ ಬಳಕೆಯಿಂದಾಗಿ ಹತ್ತಿ ಗಿಡಗಳಲ್ಲಿ ಸೊಂಪಾದ ಎಲೆಗುಚ್ಚಗಳು ಬೆಳೆದುಕೊಂಡವು. ಕಳೆದ ವರ್ಷದಿಂದ ಮೋನ್ಸಾಂಟೋ ಕಂಪನಿಯ ರೌಂಡಪ್ ರೆಡಿ ಫ್ಲೆಕ್ಸ್ (ಆರ್‌ಆರ್‌ಆರ್) ಎಂಬ ಸಸ್ಯನಾಶಕವನ್ನು ತಾಳಿಕೊಳ್ಳುವ ಹತ್ತಿ ವಿಧವೊಂದನ್ನು ಕಾನೂನುಬಾಹಿರವಾಗಿ ಮಾರಾಟ ಮಾಡುತ್ತಿರುವುದು ಮತ್ತೊಂದು ಸಮಸ್ಯೆಯನ್ನು ಹುಟ್ಟಿಹಾಕಿದೆ. ಈ ನಕಲಿ ಬೀಜಗಳ ಪಾಕೆಟ್ಟಿನ ಮೇಲೆ ಉತ್ಪನ್ನದ ಹೆಸರಾಗಲೀ, ತಾಂತ್ರಿಕ ವಿವರಗಳಾಗಲೀ, ಅದು ಹೈಬ್ರೀಡ್ ಬೀಜವೋ ಅಥವಾ ಬಿಟಿ ಜೀನ್‌ಗಳನ್ನು ಹೊಂದಿದೆಯೋ ಎಂಬ ಮಾಹಿತಿಯಾಗಲೀ ಇರುವುದಿಲ್ಲ. 2001ರಲ್ಲಿ ಗುಜರಾತಿನಲ್ಲಿ ಸಹ ಹೀಗೆ ಆಗಿತ್ತು. ನವಭಾರತ್ ಬೀಜ ಕಂಪನಿ ಸರ್ಕಾರದಿಂದ ಪರವಾನಗಿ ಸಿಗುವ ಮುನ್ನವೇ ಬಿಟಿ ಹತ್ತಿಯನ್ನು ಕಾನೂನು ಬಾಹಿರವಾಗಿ ಮಾರಾಟವನ್ನು ಮಾಡಿತ್ತು. ಆಂಧ್ರಪ್ರದೇಶದಲ್ಲಿ ಬಿತ್ತಿದ ಹತ್ತಿ ಬೆಳೆಯಲ್ಲಿ ಶೇ. 15ರಷ್ಟು ಈ ಆರ್‌ಆರ್‌ಎಫ್‌ನ ನಕಲಿ ಬೀಜಗಳಾಗಿದ್ದು ಅದರ ಅಧ್ಯಯನಕಾಗಿ ಆಂಧ್ರ ಸರ್ಕಾರ ಒಂದು ತನಿಖಾ ತಂಡವನ್ನು ರಚಿಸಿದೆ. ಈ ಆರ್‌ಆರ್‌ಎಫ್ ಅನ್ನು ಅಭಿವೃದ್ಧಿ ಪಡಿಸಿದ್ದ ಮಾನ್ಸಾಂಟೋ ಕಂಪನಿ ಜೆನಿಟಿಕ್ ಇಂಜನಿಯರಿಂಗ್ ಅಪ್ರೈಸಲ್ ಕಮಿಟಿಯಿಂದ ಪರವಾನಗಿ ಪಡೆದುಕೊಳ್ಳಲು 2007ರಲ್ಲಿ ಹಾಕಿಕೊಂಡಿದ್ದ ಅರ್ಜಿಯನ್ನು ಕಳೆದ ವರ್ಷ ಹಿಂಪಡೆದಿದೆ.

ಸಿ ಐ ಸಿ ಆರ್ ಸಂಸ್ಥೆಯ ವಿಜ್ಞಾನಿಗಳು ಮಾಡಿರುವ ಒಂದು ಅಂದಾಜಿನ ಪ್ರಕಾರ 2006ರಲ್ಲಿ ದ್ವಿತೀಯ ಹಂತದ ಕೀಟನಾಶಕಗಳ ದಾಳಿ ಹೆಚ್ಚಾದ ಮೇಲೆ ಹತ್ತಿ ಬೆಳೆಗಾಗಿ ಕ್ರಿಮಿನಾಶಕಗಳ ಬಳಕೆ ಅಪಾರಪ್ರಮಾಣದಲ್ಲಿ ಹೆಚ್ಚಾಗಿದೆ. ಈಗ ಮಾರುಕಟ್ಟೆಯಲ್ಲಿ ಸರಿಸುಮಾರು 2000ದಷ್ಟು ಬಿಟ ಹತ್ತಿ ವಿಧಗಳಿವೆ. 2013ರಲ್ಲಿ ಬಿತ್ತನೆ ಮಾಡಿದ ಹತ್ತಿ ಬೀಜಗಳಲ್ಲಿ ಶೇ.95ರಷ್ಟು ಬೀಜಗಳು ಹೈಬ್ರಿಡ್ ಹತ್ತಿಬೀಜಗಳೇ ಆಗಿದ್ದವು. ಮತ್ತು ಅದರಿಂದಾಗಿ ಕೀಟಗಳ ದಾಳಿಯೂ ಮತ್ತು ಅದರ ಪರಿಣಾಮವಾಗಿ ಕೀಟನಾಶಕಗಳ ಬಳಕೆಯೂ ಹೆಚ್ಚಾದವು. ಈ ಬಾರಿ ವಿದರ್ಭದಲ್ಲಿ ಹಲವಾರು ಬಗೆಯ ಕ್ರಿಮಿ ಮತ್ತು ಕೀಟಗಳು ಒಟ್ಟಾಗಿ ದಾಳಿ ಮಾಡಿದ್ದಾವೆ. ಅವುಗಳಲ್ಲಿ ಮುಖ್ಯವಾದವು ಹಸಿರು ಮತ್ತು ಗುಲಾಬಿ ಬೋಲ್ವರ್ಮ್‌ಗಳು ಹಾಗೂ ತಂಬಾಕು ಕಂಬಳಿಹುಳುಗಳು. ಈ ಕೀಟಗಳ ಸತತ ದಾಳಿಯನ್ನು ತಡೆಗಟ್ಟಲು ರೈತರು ವಿವಿಧ ಬಗೆಯ ಅಪಾಯಕಾರಿ ರಾಸಾಯನಿಕಗಳ ಮಿಶ್ರಣವನ್ನು ಹತ್ತಿ ಗಿಡಗಳಿಗೆ ಹೊಡೆಯಲು ಪ್ರಾರಂಭಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಹತ್ತಿ ಸಸಿಗಳನ್ನು ಒತ್ತೊತ್ತಾಗಿ ಬೆಳೆಯಲಾಗುತ್ತಿದೆ ಮತ್ತು ಅವುಗಳ ಎತ್ತರ ಅಪರೂಪಕ್ಕೊಮ್ಮೆ ಮಾತ್ರ ಐದು ಅಡಿಯನ್ನು ಮೀರುತ್ತವೆ. ಹೀಗಾಗಿ ರೈತರು ಈ ರಾಸಾಯನಿಕಗಳನ್ನು ಗಿಡಗಳಿಗೆ ಹೊಡೆಯುವಾಗ ತಾವು ಸೇವಿಸಿಬಿಡುವ ಅಪಾಯವನ್ನು ಎದುರಿಸಲಾರಂಭಿಸಿದ್ದಾರೆ. ಈ ಸಾವಿನಾಟದಲ್ಲಿ ಕ್ರಿಮಿನಾಶಕಗಳ ವರ್ತಕರು ಪ್ರಮುಖ ಪಾತ್ರ ವಹಿಸುತ್ತಿದ್ದು ಯಾವುದೇ ಲಜ್ಜೆಯಿಲ್ಲದೆ ಅನಕ್ಷರಸ್ಥ ರೈತಾಪಿಗೆ ಅತ್ಯಂತ ಅಪಾಯಕಾರಿ ಕ್ರಿಮಿನಾಶಕಗಳನ್ನು ಮಾರಾಟ ಮಾಡುತ್ತಿದ್ದಾರೆ. ಬಹಳ ವರ್ಷಗಳಿಂದ ಪ್ರೊಫೆನ್‌ಫೋಸ್ ಮತ್ತು ಸೈಪರ್ಮೆತ್ರಿನ್ ಎಂಬ ಕೀಟನಾಶಕಗಳನ್ನು ರೈತರು ಬಳಸುತ್ತಿದ್ದಾರೆ. ಇವುಗಳ ಸೇವನೆಯಿಂದಲೇ ಸಾವು ಸಂಭವಿಸುತ್ತಿದೆಯೇ ಎಂಬ ಬಗ್ಗೆ ಸೂಕ್ತವಾದ ವೈಜ್ಞಾನಿಕ ಅಧ್ಯಯನ ನಡೆಯಬೇಕಿದೆ. ವಿಧವಿಧ ಬಗೆಯ ಕ್ರಿಮಿ-ಕೀಟಗಳು ಒಟ್ಟಿಗೆ ದಾಳಿ ಮಾಡುತ್ತಿರುವುದರಿಂದ ರೈತರು ಮಾನೋಕ್ರೋಟೋಫೋಸ್, ಸೈಪರ್‌ಮೆತ್ರಿನ್ ಮತ್ತು ಸಿಂಥೆಟಿಕ್ ಪೈರೆಥ್ರಾಯ್ಡ್ ಎಂಬ ರಾಸಾಯನಿಕಗಳನ್ನು ಬೆರಕೆ ಮಾಡಿ ಬಳಸುತ್ತಿದ್ದಾರೆ. ಇದು ಅಪಾಯದ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸಿದೆ. ಹಣವನ್ನು ಉಳಿಸುವ ಸಲುವಾಗಿ ಬಹಳಷ್ಟು ರೈತರು ರಾಸಾಯನಿಕವನ್ನು ಸಿಂಪಡಿಸಲು ದಿನಗೂಲಿಯ ಆಧಾರದ ಮೇಲೆ ರೈತಕೂಲಿಗಳನ್ನು ನೇಮಿಸಿಕೊಳ್ಳುತ್ತಾರೆ. ಆದರೆ ಅವರಿಗೆ ಯಾವುದೇ ರಕ್ಷಣಾ ಅಥವಾ ಮುನ್ನೆಚ್ಚರಿಕಾ ದಿರಿಸುಗಳನ್ನು ನೀಡುವ ಪರಿಸ್ಥಿತಿಯಲ್ಲಿ ರೈತರೂ ಇರುವುದಿಲ್ಲ.

ಹೀಗಾಗಿ ಇತ್ತೀಚೆಗೆ ಯಾವತ್‌ಮಲ್ ಮತ್ತು ಇತರೆಡೆ ಸಂಭವಿಸಿರುವ ಸಾವುಗಳು ಕೇವಲ ಅಂಕಿಅಂಶಗಳಾಗಿ ಮಾತ್ರ ಉಳಿದು ನಿಧಾನವಾಗಿ ಜನಮಾನಸದಿಂದ ಮರೆತುಹೋದರೆ ಅದಕ್ಕಿಂತ ದೊಡ್ಡ ದುರಂತ ಮತ್ತೊಂದಿರುವುದಿಲ್ಲ. ಹೀಗಾಗಿ ಸರ್ಕಾರವು ಒಂದೆಡೆ ಕೂಲಿಗಳ ಸುರಕ್ಷತೆ, ಕ್ರಿಮಿನಾಶಕಗಳ ನಿಯಂತ್ರಣ, ಮತ್ತು ಸಮರ್ಪಕ ಆರೋಗ್ಯ ರಕ್ಷಣೆ ವ್ಯವಸ್ಥೆ ಹಾಗೂ ಉತ್ತಮ ಗುಣಮಟ್ಟದ ಬೀಜಗಳ ಪೂರೈಕೆಯ ಬಗ್ಗೆ ಗಮನವಹಿಸಬೇಕು. ಮತ್ತೊಂದೆಡೆ ಹೇಗೆ ವಿವಿಧ ಶಕ್ತಿಗಳು ಮತ್ತು ಅಂಶಗಳು ಒಂದರೊಡನೆ ಬೆರೆತು-ಕೊಂಡು ಇಡೀ ಕೃಷಿ ವ್ಯವಸ್ಥೆಯನ್ನು ಹದಗೆಡಿಸಿದೆ ಎಂಬುದನ್ನು ಅರ್ಥಮಾಡಿಕೊಂಡು ಅದನ್ನು ಬಗೆಹರಿಸುವಂಥ ರಾಜಕೀಯ ಇಚ್ಛಾಶಕ್ತಿಯನ್ನು ತೋರಬೇಕು.

ಕೃಪೆ: Economic and Political Weekly
Oct 14, 2017. Vol. 52. No. 41

ಅನು: ಶಿವಸುಂದರ್



ನಾಳಿನ ಕಾರ್ಯಕ್ರಮಗಳು

- **ಭೂಮಿ ಹೋರಾಟ–ಅಹೋರಾತ್ರಿ ಧರಣಿ** – ಅಕ್ಟೋಬರ್ 12–30
- **ಸಾಮಾಜಿಕ ಮಾಧ್ಯಮ ಕಾರ್ಯಾಗಾರ** ಅಕ್ಟೋಬರ್ 22
- **ಜನ ಏಕತಾ ಪಂಜಿನ ಮೆರವಣಿಗೆ** ಅಕ್ಟೋಬರ್ 30, ದೇಶದಾದ್ಯಂತ
- **ಕಾರ್ಮಿಕರ ಮಹಾಪಡಾವ್** ದೆಹಲಿ, ನವೆಂಬರ್ 9–11
- **ಕಿಸಾನ್ ಸಂಸತ್ ಚಲೋ**, ದೆಹಲಿ, ನವೆಂಬರ್ 20
- **ಸಿಪಿಐ(ಎಂ) ರಾಜ್ಯ ಸಮ್ಮೇಳನ** ಜನವರಿ 5–8, ಮೂಡಬಿದರೆ
- **ಸೌಹಾರ್ದ ಕರ್ನಾಟಕ ಮಾನವ ಸರಪಣಿ** ಜನವರಿ 30, ರಾಜ್ಯಾದಾದ್ಯಂತ

20 ಕೋಟಿ ಹಸಿದ ಹೊಟ್ಟೆಗಳ ನೋವುಗಳಿಗೆ ಮನದ ಮಾತಲ್ಲಿ ಪ್ರವೇಶವಿಲ್ಲ

ಇತ್ತೀಚೆಗೆ ಪ್ರಕಟವಾಗಿರುವ 'ಜಾಗತಿಕ ಹಸಿವಿನ ಸೂಚ್ಯಂಕ'(ಜಿಹೆಚ್‌ಐ)ದ ಪಟ್ಟಿಯಲ್ಲಿ ಕಳೆದ ವರ್ಷ 120 ದೇಶಗಳಲ್ಲಿ 97ನೇ ಸ್ಥಾನದಲ್ಲಿದ್ದ ಭಾರತ ಈ ವರ್ಷ 100ನೇ ಸ್ಥಾನಕ್ಕೆ ಇಳಿದಿದೆ. ನಮ್ಮ ಹೆಚ್ಚಿನ ನೆರೆ-ಯ ದೇಶಗಳಿಗಿಂತ ಕೆಳಗಿನ ಸ್ಥಾನದಲ್ಲಿದೆ. ಆದರೆ 'ವ್ಯವಹಾರವನ್ನು ಸುಲಭಗೊಳಿಸುವ ಸೂಚ್ಯಂಕ'ದಲ್ಲಿ ಭಾರತದ ಸ್ಥಾನವನ್ನು ಮೇಲಕ್ಕೇರಿಸುವ ಗೀಳು ಹಚ್ಚಿಕೊಂಡಿರುವ ಅಚ್ಛೇ ದಿನ್‌ಗಳಲ್ಲಿ ಹಸಿವಿನ ಸೂಚ್ಯಂಕದ ಬಗ್ಗೆ ಪ್ರಸ್ತಾಪ ಕೂಡ 'ಮನಕೀ ಬಾತ್', ನೀತಿ ಆಯೋಗದ ಅಜೆಂಡಾಗಳಿಗೆ ಇನ್ನೂ ಬಂದಿರುವಂತೆ ಕಾಣುತ್ತಿಲ್ಲ. ಆದರೆ ತದ್ವಿರುದ್ಧವಾದ ಪ್ರಕ್ರಿಯೆಗಳು ಬಹಳಷ್ಟು ಕಾಣುತ್ತಿವೆ.

ಹಸಿವಿನ ಸೂಚ್ಯಂಕವನ್ನು ತಯಾರಿಸಿರುವ ಅಂತರ್ರಾಷ್ಟ್ರೀಯ ಆಹಾರ ಧೋರಣೆ ಸಂಶೋಧನಾ ಸಂಸ್ಥೆ(ಐಎಫ್‌ಪಿಆರ್‌ಐ)ಯ ವರದಿಯ ಪ್ರಕಾರ ಕಳೆದ ಏಳು ವರ್ಷಗಳಲ್ಲಿ ಅಪೌಷ್ಟಿಕತೆಯಿಂದ ನರಳುತ್ತಿರುವ ಜನಗಳ ಪ್ರಮಾಣ 16% ದಿಂದ 14%ಕ್ಕೆ ಇಳಿದಿದೆ. ಇದರ ಆಧಾರದಲ್ಲಿ ಲೆಕ್ಕ ಹಾಕಿದರೆ ಭಾರತದಲ್ಲಿ ಹಸಿದಿರುವವರ ಸಂಖ್ಯೆ 2007ರಲ್ಲಿ 19.7 ಕೋಟಿ ಇದ್ದದ್ದು ಈಗ ಕನಿಷ್ಟ 20 ಕೋಟಿಯಾಗಿದೆ. ಭಾರತದಲ್ಲಿ ಅಪೌಷ್ಟಿಕತೆಯ ಪ್ರಮಾಣ 15%.

ನಿಜ, ಇದೇನು ಅಚ್ಚೇದಿನ್‌ಗಳ ಕಾರಣದಿಂದಾಗಿ ಅಲ್ಲವಲ್ಲ ಎಂದು ಕೇಳಬಹುದು. ಆದರೆ ಆಬಗ್ಗೆ ಅತೀವ ಕಾಳಜಿಯಂತೂ ಇರಬೇಕಲ್ಲ- ಅದೂ ಮಾತಿನ ಮಂಟಪ ಕಟ್ಟುತ್ತಿರುವ ಈ ದಿನಗಳಲ್ಲಿ. ಆದರೂ ಈ ಅಂಕಿ-ಅಂಶಗಳನ್ನು ನೋಡಿ:

ಈ ವರದಿ ಕಲೆ ಹಾಕಿರುವ ಅಂಕಿ-ಅಂಶಗಳ ಪ್ರಕಾರ ಅಪೌಷ್ಟಿಕತೆಯ ದುಷ್ಪರಿಣಾಮ ಮಕ್ಕಳಲ್ಲಿ ಎದ್ದು ಕಾಣುತ್ತಿದೆ. ಭಾರತದ ಮಕ್ಕಳಲ್ಲಿ 'ಕೃಶತೆ' ಅಂದರೆ ಮಕ್ಕಳ ತೂಕ ಅವರ ಎತ್ತರಕ್ಕೆ ಅನುಗುಣವಾಗಿರದೆ ಕಡಿಮೆಯಿರುವುದು, ಭಾರತದ ಸುಮಾರು 9.7 ಕೋಟಿ ಮಕ್ಕಳಲ್ಲಿ ಕಾಣುತ್ತಿದೆ. 2006-10ರಲ್ಲಿ ಇದರ ಪ್ರಮಾಣ 20% ಇದ್ದದ್ದು 2012-16ರಲ್ಲಿ 21%ಕ್ಕೆ ಏರಿದೆ. ಅಪೌಷ್ಟಿಕತೆಯ ಇನ್ನೊಂದು ಮಾಪಕವಾದ 'ಕುಂಠಿತತೆ' ಅಂದರೆ ವಯಸ್ಸಿಗೆ ಅನುಗುಣವಾದ ದೈಹಿಕ ಬೆಳವಣಿಗೆ ಇಲ್ಲದಿರುವುದು. ಇದು ಭಾರತದ 38.4% ಮಕ್ಕಳಲ್ಲಿ ಕಾಣುತ್ತಿದೆ.

ಇತ್ತೀಚೆಗೆ ವೈದ್ಯಕೀಯ ಪತ್ರಿಕೆ 'ಲಾನ್ಸೆಟ್'ನಲ್ಲಿ ಪ್ರಕಟವಾದ ಇನ್ನೊಂದು ಅಧ್ಯಯನದ ಪ್ರಕಾರ 58% ಬಾಲಕರು ಮತ್ತು 50% ಬಾಲಕಿಯರ ದೇಹದ ತೂಕ ಇರಬೇಕಾದ್ದಕ್ಕಿಂತ ಕಡಿಮೆಯಿದೆ.

ಜಗತ್ತಿನ ಹಸಿದ ಜನಗಳಲ್ಲಿ ಕಾಲುಭಾಗ ಭಾರತದಲ್ಲಿದ್ದಾರೆ. ಆದರೆ ಭಾರತವನ್ನು ಜಗತ್ತಿನಲ್ಲಿ ಒಂದು ಬಲಿಷ್ಟ ರಾಷ್ಟ್ರವನ್ನಾಗಿ ಮಾಡುವ ಮಹತ್ವಾಕಾಂಕ್ಷೆ ಹೊತ್ತಿರುವವರಿಗೆ ಈ 20 ಕೋಟಿ ಹಸಿದ ಭಾರತೀಯರಿಗೆ ಎರಡು ಹೊತ್ತು ಅನ್ನ ಸಿಗುವಂತೆ ಮಾಡುವುದು ತುರ್ತಿನ ಪ್ರಶ್ನೆಯಾಗಿ ಕಾಣುತ್ತಿಲ್ಲ. ಬದಲಾಗಿ ಪ್ರಜಾಪ್ರಭುತ್ವ ಆಂದೋಲನದ ಸತತ ಹೋರಾಟಗಳಿಂದಾಗಿ ಈ ದಿಕ್ಕಿನಲ್ಲಿ ಕೆಲವಾದರೂ ಪ್ರಯತ್ನಗಳು ನಡೆದಿದೆ. ಐಸಿಡಿಎಸ್, ಮಧ್ಯಾಹ್ನದ ಊಟ, ಆಹಾರಭದ್ರತೆಯ ಕಾಯ್ದೆ, ಮನರೇಗ ಕಾಯ್ದೆ ಇತ್ಯಾದಿ ಬಂದಿವೆ. ಆದರೆ ಅವೆಲ್ಲವನ್ನೂ ಮತ್ತಷ್ಟು ಬಲಪಡಿಸುವ ಬದಲು ಈ ಅಚ್ಛೇದಿನ್‌ಗಳಲ್ಲಿ ದುರ್ಬಲಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಇವಕ್ಕೆಲ್ಲ ಕೊಡಲಾಗುತ್ತಿರುವ ಸಬ್ಸಿಡಿಗಳಲ್ಲಿ ಕಡಿತ ಮಾಡಲು ಸೋರಿಕೆಯನ್ನು ತಡೆಯುವ ಹೆಸರಿನಲ್ಲಿ ಇವನ್ನೆಲ್ಲ 'ಆಧಾರ್'ನೊಂದಿಗೆ ಜೋಡಿಸಲು ಶತಪ್ರಯತ್ನ ನಡೆಸುತ್ತಿದೆ. ಈಬಗ್ಗೆ ಸುಪ್ರಿಂ ಕೋರ್ಟ್ ಸರಕಾರದ ಸೌಲಭ್ಯಗಳಿಗೆ ಆಧಾರವನ್ನು ಶರತ್ತಾಗಿ ಮಾಡಬಾರದು ಎಂದು ನೀಡಿರುವ ಮಧ್ಯಂತರ ಆದೇಶದ ಪರಿವೆಯೂ ಈ ಅಳುವ ಮಂದಿಗಿದ್ದಂತಿಲ್ಲ.

ಇದರ ಒಂದು ತಲ್ಲಣಕಾರಿ ಪರಿಣಾಮ ಈ ವಾರದ ಒಂದು ಘಟನೆಯಲ್ಲಿ ಬಯಲಾಗಿದೆ.

ಅನ್ನ...ಅನ್ನ ..ಎಂದು ಕೇಳುತ್ತಲೇ ಕಣ್ಣು ಮುಚ್ಚಿದ ಸಂತೋಷಿ!



ಝಾರ್ಖಂಡ್‌ನ ಸಿಮ್‌ದೇಗಾ ಜಿಲ್ಲೆಯ ಕರಿಮಾತಿ ಎಂಬ ಹಳ್ಳಿಯಲ್ಲಿ ಸಂತೋಷಿ ಕುಮಾರಿ ಎಂಬ 11ವರ್ಷದ ಬಾಲಕಿ ಒಂದು ತುತ್ತು ಕೊಡಮ್ಮಾ ಎನ್ನುತ್ತಲೇ ಪ್ರಾಣ ಕಳಕೊಂಡಿರುವ ದಾರುಣ ಘಟನೆ ವರದಿಯಾಗಿದೆ. ಭೂಮಿ, ಉದ್ಯೋಗ ಅಥವ ಬೇರಾವುದೇ ನಿಯಮಿತ ಆದಾಯ ಇಲ್ಲದ ಈಕೆಯ ಕುಟುಂಬ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ ಅಡಿಯಲ್ಲಿ ಸಬ್ಸಿಡಿ ರೇಶನ್‌ಗೆ ಅರ್ಹವಾಗಿದೆ. ಆದರೆ ಅವರ ರೇಶನ್ ಕಾರ್ಡ್ ಆಧಾರ್‌ಗೆ ಲಗತ್ತಿಸಿಲ್ಲ(ಲಗತ್ತಿಸಿದೆ ಎಂದು ತಾಯಿ ಹೇಳುತ್ತಾಳೆ) ಎಂಬ ಕಾರಣಕ್ಕೆ ರದ್ದಾಗಿತ್ತು. ತಂದೆ ಮಾನಸಿಕ ಕಾಯಿಲೆಗೆ ಗುರಿಯಾಗಿದ್ದು, ತಾಯಿಗೆ ಮನರೇಗದಲ್ಲೂ ಉದ್ಯೋಗ ದೊರೆಯದೆ ಅಲ್ಲಿ-ಇಲ್ಲಿ ಕೂಲಿ ನಾಲಿ ಮಾಡಿಕೊಂಡು, ಶಾಲೆಯಲ್ಲಿ ಕೊಡುವ ಮಧ್ಯಾಹ್ನ ಊಟ ಬಳಸಿಕೊಂಡು ಮಕ್ಕಳ ಹೊಟ್ಟೆಗಾದರೂ ಏನಾದರೂ ಬೀಳುತ್ತಿತ್ತು. ಆದರೆ ದುರ್ಗಾಪೂಜೆ ರಜೆಗಳಿಂದಾಗಿ ಆ ಆಸರೆಯೂ ಇಲ್ಲದಾಯಿತು. ಸತತ ಎಂಟು ದಿನ ಏನೂ ತಿನ್ನಲು ಸಿಗದೆ ಆಕೆಯ ಪ್ರಾಣ ಬಿಟ್ಟಳು ಎಂದು ವರದಿಯಾಗಿದೆ. ನಿಜ, ಆಡಳಿತ ಆಕೆ ಮಲೇರಿಯಾದಿಂದ ಸತ್ತಳು ಎನ್ನುತ್ತಿದೆಯಂತೆ. ಈಗ ಸ್ವತಃ ಅಲ್ಲಿಯ ಮುಖ್ಯಮಂತ್ರಿಗಳೇ ಕುಟುಂಬಕ್ಕೆ 50,000 ರೂ. ಪರಿಹಾರ ಕೊಡುವಂತೆ ಮತ್ತು ಈ ಬಗ್ಗೆ ತನಿಖೆ ನಡೆಸುವಂತೆ ಹೇಳಿದ್ದಾರಂತೆ.

ಆದರೆ ಅವರ ಸರಕಾರ ಇಂತಹ 11 ಲಕ್ಷ ರೇಶನ್ ಕಾರ್ಡ್‌ಗಳನ್ನು ರದ್ದು ಮಾಡಿದೆ. ಆ ಬಗ್ಗೆ ತನಿಖೆ ನಡೆಸುವಂತೆ ಕಾಣುತ್ತಿಲ್ಲ. ಈ ಮಧ್ಯೆ 'ಆಧಾರ್‌ನಿಂದಾಗಿ ಸರಕಾರದ ಖಜಾನೆಗೆ 9 ಬಿಲಿಯ ಡಾಲರ್ ಉಳಿತಾಯವಾಗಿದೆ ಎಂದು ಇದರ ಶಿಲ್ಪಿ ನಂದನ್ ನೀಲೇಕಣಿ ಹೇಳಿದ್ದಾರೆ" ಎಂದು ಸರಕಾರೀ ಅಧಿಸೂಚನೆಯೆಂಬ ಸಂದೇಶ ಹಲವರ ಇ-ಮೇಲ್‌ಗಳಿಗೆ ಬಂದಿದೆ(GovernmentNotification<info@mc.shiningindiaa.com)! **ಅಂದರೆ ಸುಮಾರು 55000 ಕೋಟಿ ರೂ.ಗಳು! ಡಾಲರುಗಳಲ್ಲಿರುವ 'ರಾಷ್ಟ್ರವಾದಿ'ಗಳ ಈ ಸಂದೇಶ ಯಾರಿಗಾಗಿ, ಯಾರ ಪ್ರಾಣ ಹೀರಿ?**



'ನಯಾ ಭಾರತ್' 2022ರ ನಿರ್ಮಾಣ!



ಒಂದೆಡೆಯಲ್ಲಿ ಝಾರ್ಖಂಡ್‌ನಲ್ಲಿ ಅನ್ನ..ಅನ್ನ... ಎಂದು ಕೇಳುತ್ತಲೇ ಸಂತೋಷಿ ಕಣ್ಣುಮುಚ್ಚಿದ ಸುದ್ದಿ ಕರುಳು ಕಿವಿಚಿದರೆ ಇನ್ನೊಂದೆಡೆ ದೆಹಲಿಯಲ್ಲಿ ಒಂದು ವರ್ಷದಿಂದ 'ನನ್ನ ಮಗ ಎಲ್ಲಿ, ದಯವಿಟ್ಟು ಹುಡುಕಿ ಕೊಡಿ' ಎಂದು ಕಣ್ಣೀರಿಟ್ಟು ಕೇಳುತ್ತಿದ್ದ ಜೆಎನ್‌ಯು ವಿದ್ಯಾರ್ಥಿ ನಜೀಬ್ ಅಹ್ಮದ್‌ನ ತಾಯಿ 52 ವರ್ಷದ ಫಾತಿಮಾ ನಫಿಸ್ ಅವರನ್ನು ಬಂಧಿಸಿ ಪೋಲೀಸರು ದರ-ದರ ಎಳೆದುಕೊಂಡು ಹೋಗುತ್ತಿರುವ ದೃಶ್ಯ ಅಚ್ಛೇದಿನ್‌ಗಳ ಬಗ್ಗೆ ಇನ್ನೂ ತುಸು ವಿಶ್ವಾಸ ಉಳಿಸಿಕೊಂಡಿರುವವರಲ್ಲೂ ತಲ್ಲಣ ಉಂಟು ಮಾಡುತ್ತಿದೆಯೇ? ಇದೇ 2022 ರ ವೇಳೆಗೆ ನವಭಾರತ ನಿರ್ಮಾಣದ ಪರಿಯೇ, ಗೊತ್ತಿಲ್ಲ.

ಜೆಎನ್‌ಯು ನಲ್ಲಿ ತನ್ನ ಹಾಸ್ಟೆಲ್ ಬಳಿ ಎಬಿವಿಪಿ ಮಂದಿಯೊಂದಿಗೆ ವಾಗ್ವಾದದ ಮರುದಿನದಿಂದ ಕಾಣೆಯಾದ ನಜೀಬ್ ಬಗ್ಗೆ ಒಂದು ವರ್ಷವಾದರೂ ಇದರ ತನಿಖೆ ನಡೆಸುತ್ತಿರುವ ಸಿಬಿಐ ಏನೂ ಮಾಡದಿರುವುದರ ವಿರುದ್ಧ ಸಿಬಿಐ ಕಚೇರಿಯೆದುರು ನಡೆಸುತ್ತಿದ್ದ ಪ್ರತಿಭಟನೆಯಲ್ಲಿ ಅವರು ಭಾಗಿಯಾಗಿದ್ದರು.

ತಮಾಷೆಯೆಂದರೆ ಹೀಗೆ ಅವರನ್ನು ಬಂಧಿಸಿ ಎಳದೊಯ್ದದ್ದು ದಿಲ್ಲಿ ಹೈಕೋರ್ಟ್ ಕೂಡ ಸಿಬಿಐ ಈ ವಿಷಯದಲ್ಲಿ ಸಂಪೂರ್ಣ ನಿರಾಸಕ್ತಿ ತಳೆದಿದೆ ಎಂದು ಅದನ್ನು ತೀವ್ರ ತರಾಟೆಗೆ ತಗೊಂಡ ಮೇಲೆ, ಅವರು ಇತರ ಪ್ರತಿಭಟನಾಕಾರರೊಂದಿಗೆ ಮಾಧ್ಯಮಗಳನ್ನು ಉದ್ದೇಶಿಸಿ ಮಾತಾಡುತ್ತಿದ್ದಾಗ.

***

ಈ ವಾರದಲ್ಲಿ ನವಭಾರತ ನಿರ್ಮಾಣದ ಇನ್ನೆರಡು ಸುದ್ದಿಗಳು.

ಕಳೆದ ಜೂನ್ 29ರಂದು ಝಾರ್ಖಂಡ್‌ನ ರಾಮಗಢದ ಸಮೀಪ 'ಗೋರಕ್ಷಕರು' ಬಡಿದು ಸಾಯಿಸಿದ ಅಲಿಮುದ್ದೀನ್ ಅನ್ಸಾರಿಯ ಹತ್ಯೆಯ ಪ್ರತ್ಯಕ್ಷ ಸಾಕ್ಷಿ ಜಲಿಲ್ ಅನ್ಸಾರಿ ಕೋರ್ಟಿನಲ್ಲಿ ಅಕ್ಟೋಬರ್ 12ರಂದು ಸಾಕ್ಷ್ಯ ಹೇಳಬೇಕಾಗಿತ್ತು. **ಆತನಿಗೆ ಸಾಕ್ಷ್ಯ ನೀಡಬಾರದು ಎಂದು ಕೊಲೆ ಬೆದರಿಕೆಗಳು ಬಂದಿರುವುದು ಮಾತ್ರವಲ್ಲ, ಆ ದಿನ ಅತನ ಪತ್ನಿ ಅದೇ ದಿನ ಕೋರ್ಟ್ ಬಳಿ ಒಂದು ಅಪಘಾತದಲ್ಲಿ ಸಂದೇಹಾಸ್ಪದ ರೀತಿಯಲ್ಲಿ ಸತ್ತಿದ್ದಾಳೆ.**

***

'ಗೋರಕ್ಷಕ'ರ ಮೊದಲ ಬಲಿ ಮಹಮ್ಮದ್ ಅಖ್ಲಾಕ್‌ನ 15 ಕೊಲೆ ಆಪಾದಿತರರಿಗೆ ಇತ್ತೀಚೆಗೆ ಜಾಮೀನು ಸಿಕ್ಕಿದ್ದು ದಾದ್ರಿಯ ಬಿಜೆಪಿ ಶಾಸಕ ಅವರಿಗೆಲ್ಲ ಸಾರ್ವಜನಿಕ ವಲಯದ ಎನ್‌ಟಿಪಿಸಿಯಲ್ಲಿ ಕಾಂಟ್ರಾಕ್ಟ್ ಉದ್ಯೋಗದ ಆಶ್ವಾಸನೆ ನೀಡಿರುವದಾಗಿ ಒಂದು ವರದಿ ಹೇಳಿದರೆ, ಇನ್ನೊಂದು ವರದಿ ಆಗಲೇ ಅವರಿಗೆ ಆ ಉದ್ಯೋಗಗಳನ್ನು ಕೊಡಿಸಲಾಗಿದೆ ಎಂದಿದೆ.

ಹಿಂದುಸ್ತಾನ್ ಟೈಮ್ಸ್‌ನ ಹಿಂದಿನ ಸಂಪಾದಕ ರಾಬಿನ್ ಘೋಷ್ ಆರಂಭಿಸಿದ್ದ 'ದ್ವೇಷ ಜಾಡು ಪತ್ತೆ"(ಹೇಟ್ ಟ್ರಾಕರ್)ಗಳ ದಾಖಲೆ ಅವರು ಪತ್ರಿಕೆ ಬಿಟ್ಟ(ಕಳಿಸಿದ) ಮೇಲೆ ತುಸು ನಿಂತಂತೆ ಕಂಡರೂ, ಬಹುಶಃ ಟೀಕೆಗಳ ಹಿನ್ನೆಲೆಯಲ್ಲಿ, ಈಗ ಮುಂದುವರೆದಿದೆ. ಅದರ ಪ್ರಕಾರ ಸಪ್ಟಂಬರ್ 28, 2015ರಿಂದ ವರದಿಯಾಗಿರುವ ಇಂತಹ ಅಪರಾಧಗಳ ಸಂಖ್ಯೆ ಅಕ್ಟೋಬರ್ 13ರಂದು 170ನ್ನು ತಲುಪಿದೆ, ಇದರಲ್ಲಿ ಕನಿಷ್ಟ 44 ಸಾವುಗಳು ಸಂಭವಿಸಿವೆ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ ಸಿಫಿ. ಕಾಂ

ವಿಕಾಸದ ಹುಸಿಮಂತ್ರಕ್ಕೆ ಇನ್ನು ಹಣ್ಣು ಉದುರಲಾರದೆಂಬ ಭೀತಿ ಆವರಿಸುತ್ತಿದೆಯೇ?

ಅಕ್ಟೋಬರ್ 12 ರಂದು ಮುಖ್ಯ ಚುನಾವಣಾ ಆಯುಕ್ತರು ಹಿಮಾಚಲ ಪ್ರದೇಶದ ವಿಧಾನಸಭಾ ಚುನಾವಣೆಗಳ ದಿನಾಂಕ ಪ್ರಕಟಿಸಿದರೂ, ಆ ವೇಳೆಗೇ ನಡೆಯಬೇಕಾದ ಗುಜರಾತ್ ಚುನಾವಣೆಗಳ ದಿನಾಂಕವನ್ನು ಪ್ರಕಟಿಸದಿರುವುದು ಬಹಳಷ್ಟು ಅನುಮಾನಗಳನ್ನು ಸೃಷ್ಟಿಸಿದೆ ಎಂಬ ವ್ಯಾಪಕ ಟೀಕೆ ಪತ್ರಿಕೆಗಳಲ್ಲಿ ಮರುದಿನವೇ ಪ್ರಕಟವಾದ ಸುದ್ದಿಗಳಿಂದ ಸಾಬೀತಾಗಿದೆ.

ಬಿಜೆಪಿ ಆಳ್ವಿಕೆಯ ವಡೋದರ ಮಹಾನಗರಸಭೆ ಮರುದಿನವೇ ಸಭೆ ಕರೆದು ಮುಖ್ಯಮಂತ್ರಿಗಳಿಂದ 780 ಕೊಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗಳ ಬೃಹತ್ ಇವೆಂಟನ್ನು ಯೋಜಿಸಿತು..

ಜಿಎಸ್‌ಟಿ ನಿರ್ಧಾರವನ್ನು ಕೈಗೊಂಡದ್ದು ಪ್ರಧಾನ ಮಂತ್ರಿ ಒಬ್ಬರೇ ಅಲ್ಲ ಎಂದು ಪ್ರಧಾನ ಮಂತ್ರಿಗಳು ಗುಜರಾತಿನಲ್ಲ ಚುನಾವಣಾ ಪ್ರಚಾರ ಆರಂಭಿಸುತ್ತ ಹೇಳಿದರು.- ಸುದ್ದಿ



ವ್ಯಂಗ್ಯ ಚಿತ್ರ: ಅಲೋಕ್ ನಿರಂತರ್

ಅಹಮದಾಬಾದ್ ಮುನಿಸಿಪಲ್ ಕಾರ್ಪೊರೇಷನ್ ತನ್ನ ಸ್ಥಾಯೀ ಸಮಿತಿಯ ಸಭೆಯನ್ನು ವಿಸ್ತರಿಸಿ 530 ಕೋಟಿ ರೂ.ಗಳ ಪ್ರಾಜೆಕ್ಟ್‌ಗಳನ್ನು ಹತ್ತು ನಿಮಿಷಗಳಲ್ಲಿ ಮಂಜೂರು ಮಾಡಿದೆ. ಮರುದಿನ 'ಶಹರೀ ಗರೀಬ್ ಕಲ್ಯಾಣ್ ಮೇಲಾ' ದಲ್ಲಿ ಒಟ್ಟು 4103 ಫಲಾನುಭವಿಗಳಲ್ಲಿ 3262 ಮಂದಿಗೆ ಚೆಕ್‌ಗಳು, ನಿಧಿಗಳು ಮತ್ತು ಬಾಂಡ್‌ಗಳನ್ನು ವಿತರಿಸಲಾಗಿದೆ.

ದೀಪಾವಳಿ ಸಂದರ್ಭದಲ್ಲಿ ಶ್ರೀ ಶ್ರೀ ರವಿಶಂಕರ್ ಆರ್ಟ್ ಆಫ್ ಲಿವಿಂಗ್‌ನ ಲಕ್ಷ್ಮಿ ಪೂಜೆ ಮತ್ತು ಇತರ ಧಾರ್ಮಿಕ ಕಾರ್ಯಕ್ರಮಗಳಿಗೆ ಸೇವೆಗಳನ್ನು ಒದಗಿಸಲು ವಡೋದರಾ ನಗರ ಸಭೆ ನಿರ್ಧರಿಸಿತಂತೆ.

ಈ ನಡುವೆ ಗುಜರಾತಿನ ಮುಖ್ಯಮಂತ್ರಿಗಳು ಈ ಹಿಂದೆ ಕಾಂಗ್ರೆಸ್ ಸರಕಾರ ಸಹ ಚುನಾವಣಾ ಆಯೋಗವನ್ನು ದುರುಪಯೋಗ ಪಡಿಸಿಕೊಂಡಿತ್ತು ಎಂದಿದ್ದಾರೆ. ಅಂದರೆ ಈಗ ತಾನೂ ಅದನ್ನೇ ಮಾಡುತ್ತಿರುವುದು ಎಂದು ಅರ್ಥೈಸಬಹುದೇನೋ. ಗುಜರಾತ್ ಚುನಾವಣೆಗಳನ್ನು ಅಕ್ಟೋಬರ್ 25ರಂದು ಪ್ರಕಟಿಸಬಹುದು ಎಂದು ಅಲ್ಲಿನ ಸಚಿವಾಲಯದ ಮೂಲಗಳಿಂದ ಹೇಳಲಾಗುತ್ತಿದೆ. ಅಂ-ದು ಗುಜರಾತಿನಲ್ಲಿ ಲಾಭ ಪಂಚಮಿ ದಿನ, ಅಂದರೆ ದೀಪಾವಳಿ ಮರುದಿನದಿಂದ ಆರಂಭವಾಗುವ ಗುಜರಾತೀ ಹೊಸ ವರ್ಷದಲ್ಲಿ ಮುಚ್ಚುವ ಅಂಗಡಿಗಳು ಅಂದಿನಿಂದ ಹೊಸ ವರ್ಷದ ವ್ಯವಹಾರವನ್ನು ಆರಂಭಿಸುವ 'ಶುಭದಿನ'ವಂತೆ.

ಈ ಬಾರಿಯ ಗುಜರಾತ್ ವಿಧಾನಸಭಾ ಚುನಾವಣೆಗಳ ಇನ್ನೊಂದು ವಿಶೇಷತೆಯೆಂದರೆ ಹಿಂದೆ ಮೋದಿಯವರ ಏಕಾಂಗಿ ಚುನಾವಣಾ ಪ್ರಚಾರ ಆಗಿರುತ್ತಿತ್ತು. ಆದರೆ ಯೋಗಿ ಆದಿತ್ಯನಾಥ ಮತ್ತು ಉಮಾಭಾರತಿ ಮುಂತಾದ ರಾಜ್ಯದ ಹೊರಗಿನ ಭಾರೀ ಕುಳಗಳನ್ನು ಕಣಕ್ಕಿಳಿಸಲಾಗುವುದಂತೆ.


20ವರ್ಷಗಳ 'ಮಾದರಿ' ಆಳ್ವಿಕೆಯ ನಂತರ ಇಷ್ಟೆಲ್ಲ ಕಸರತ್ತುಗಳು ಬೇಕೇ, ಸಂಘ ಪರಿವಾರಕ್ಕೆ 'ಅಚ್ಛೇ ದಿನ್'ಗಳ ನೋಟುರದ್ಧತಿ, ಜಿಎಸ್‌ಟಿ ಇತ್ಯಾದಿಗಳ ವಿಫಲತೆಯ, ವಿಕಾಸದ ಹುಸಿಮಂತ್ರಕ್ಕೆ ಇನ್ನು ಹಣ್ಣು ಉದುರಲಾರದೆಂಬ ಭೀತಿ ಆವರಿಸಿದೆಯೇ, ಎಂಬ ಪ್ರಶ್ನೆ ಕೇಳಲಾಗುತ್ತಿದೆ.

ಥೇಲರ್‌ಗೆ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿ



ನವ-ಉದಾರವಾದದತ್ತ ಒಂದು 'ನಯ-ತಿವಿತ'

"ವ್ಯಕ್ತಿಗತ ನಿರ್ಧಾರದ ಆರ್ಥಿಕ ಮತ್ತು ಮನೋವೈಜ್ಞಾನಿಕ ವಿಶ್ಲೇಷಣೆಗಳ ನಡುವೆ ಒಂದು ಸೇತುವೆ ನಿರ್ಮಿಸಿದ್ದಾರೆ" ಎಂದು ಪ್ರೊ.ರಿಚರ್ಡ್ ಎಚ್ ಥೇಲರ್‌ರವರಿಗೆ 2017ರ ಅರ್ಥಶಾಸ್ತ್ರ ನೊಬೆಲ್ ಪ್ರಶಸ್ತಿ ದೊರೆತಿದೆ. ಅವರು ನಿರ್ಮಿಸಿದ ಈ 'ಸೇತುವೆ' ಏನು? ಅವರು ಪ್ರತಿನಿಧಿಸುವರೆನ್ನಲಾದ 'ವರ್ತನಾ ಅರ್ಥಶಾಸ್ತ್ರ' ಎಂದರೇನು? ಅವರಿಗೆ ಈ ಬಾರಿಯ ನೊಬೆಲ್ ಪ್ರಶಸ್ತಿ ನೀಡಿರುವುದರ ಮಹತ್ವವೇನು? ನ್ಯೂಸ್‌ಕ್ಲಿಕ್.ಇನ್ ನಲ್ಲಿ ಅಕ್ಟೋಬರ್ 11 ರಂದು ಪ್ರಕಟವಾಗಿರುವ **ಸುಭೋದ್ ವರ್ಮ**ರವರ ಈ ಲೇಖನ ಒಂದು ಚಿತ್ರವನ್ನು ಕೊಡುತ್ತದೆ. 'ಜನಶಕ್ತಿ' ಓದುಗರಿಗಾಗಿ **ಭಾರತಿ ಗಾಂವ್ಕರ್** ಅನುವಾದ ಮಾಡಿದ್ದಾರೆ.



ನವೆಂಬರ್ 8, 2016ರಂದು ಭಾರತದ ಪ್ರಧಾನಿ, ದೇಶದ 86% ನೋಟುಗಳ ರದ್ಧತಿಯ ಪ್ರಕಟಣೆ ಮಾಡಿದ ನಿಮಿಷಗಳ ಒಳಗೆ ಚಿಕಾಗೋ ವಿಶ್ವವಿದ್ಯಾಲಯದ, ವರ್ತನಾ ವಿಜ್ಞಾನ ಮತ್ತು ಅರ್ಥಶಾಸ್ತ್ರದ ಪ್ರಾಧ್ಯಾಪಕ ಪ್ರೊ. ರಿಚರ್ಡ್ ಎಚ್. ಥೇಲರ್ ಹೀಗೆ ಟ್ವೀಟ್ ಮಾಡಿದರು:

"ಇದೊಂದು ನಾನು ಬಹಳ ಕಾಲದಿಂದ ಬೆಂಬಲಿಸಿರುವ ಧೋರಣೆ. ನಗದು ರಹಿತ ಆರ್ಥಿಕತೆ-ಯ ಕಡೆಗೆ ಮೊದಲ ಹೆಜ್ಜೆ. ಮತ್ತು ಭ್ರಷ್ಟಾಚಾರ ಕಡಿಮೆ ಮಾಡಲು ಒಳ್ಳೆ ಆರಂಭ"

ನಂತರ ಯಾರೋ ಅವರಿಗೆ, ಸರ್ಕಾರ 2000ರೂ. ನೋಟನ್ನು ಪುನಃ ತರಲಿದೆ ಎಂಬ ಮಾಹಿತಿ ಕೊಟ್ಟರು, ಆಗ ಅವರು "ಹೌದಾ? ಛೆ!! "ಎಂದು ಮರು ಟ್ವಿಟ್ ಮಾಡಿದರು.

ಅದೇ ಪ್ರೊ. ಥೇಲರ್ ಈ ವರ್ಷದ ಅರ್ಥಶಾಸ್ತ್ರ ನೊಬೆಲ್ ಪ್ರಶಸ್ತಿ ಪಡೆದಿದ್ದಾರೆ. ಆದರೆ ಅದು ಭಾರತದಲ್ಲಿ ನೋಟುರದ್ಧತಿಯ ದುರಂತಕ್ಕೆ ಅವರ ಬೆಂಬಲಕ್ಕೆಂದು ಸಿಕ್ಕ ಪ್ರಶಸ್ತಿಯೇನೂ ಅಲ್ಲ (ವಾಸ್ತವತೆಯೊಂದಿಗೆ ಅವರ ಸಂಪರ್ಕ ಎಷ್ಟು ದುರ್ಬಲವಾಗಿದೆ ಎಂಬುದನ್ನು ಇದು ತೋರಿಸುತ್ತದಷ್ಟೇ)."ವ್ಯಕ್ತಿಗತ ನಿರ್ಧಾರದ ಆರ್ಥಿಕ ಮತ್ತು ಮನೋವೈಜ್ಞಾನಿಕ ವಿಶ್ಲೇಷಣೆಗಳ ನಡುವೆ ಒಂದು ಸೇತುವೆ ನಿರ್ಮಿಸಿರುವ" ಕಾರಣಕ್ಕಾಗಿ ಅವರಿಗೆ ಈ ಪ್ರಶಸ್ತಿ ನೀಡಲಾಗಿದೆ.

ಅವರು ಪ್ರಾಯೋಗಿಕವಾಗಿ ಕಂಡುಕೊಂಡ ಸಂಗತಿಗಳು ಹಾಗೂ ಸೈದ್ಧಾಂತಿಕ ಒಳನೋಟಗಳು ಹೊಸದಾದ ಮತ್ತು ಕ್ಷಿಪ್ರವಾಗಿ ವಿಸ್ತಾರಗೊಳ್ಳುತ್ತಿರುವ ಕ್ಷೇತ್ರವಾದ ವರ್ತನಾ ಅರ್ಥಶಾಸ್ತ್ರದ ನಿರ್ಮಾಣಕ್ಕೆ ಸಾಧನವಾಗಿದೆ, ಆರ್ಥಿಕ ಸಂಶೋಧನೆ ಮತ್ತು ಹಲವಾರು ನೀತಿಗಳನ್ನು ರೂಪಿಸುವಲ್ಲಿ ಆಳವಾದ ಪ್ರಭಾವವನ್ನು ಈ ಹೊಸ ಶಾಸ್ತ್ರ ಬೀರಿದೆ ಎಂದು ಅಧಿಕೃತ ಪತ್ರಿಕಾ ಪ್ರಕಟಣೆ ಹೇಳಿದೆ.

ಇವೆಲ್ಲದರ ಅರ್ಥವೇನು? ಸಾಂಪ್ರದಾಯಿಕ ಅರ್ಥಶಾಸ್ತ್ರ ಪ್ರತಿಯೊಬ್ಬ ವ್ಯಕ್ತಿಯೂ ವಿವೇಚನಾಪೂರ್ಣ ಸ್ವಹಿತದ ಆಧಾರದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾನೆ ಎಂದು ಹೇಳುತ್ತದೆ. ಇದು ಬಂಡವಾಳಶಾಹಿಯ ಒಂದು ಸಮರ್ಥನೆ ಅಲ್ಲದೇ ಬೇರೇನೂ ಅಲ್ಲ, ಅಂದರೆ ಮಾರುಕಟ್ಟೆಯಲ್ಲಿ ಪತಿಯೊಬ್ಬರೂ ಇನ್ನೊಬ್ಬರ ವಿರುದ್ಧ ಸ್ಪರ್ಧಿಸುತ್ತಾ ಇರುತ್ತಾರೆ, ಮತ್ತು ಮಾರುಕಟ್ಟೆಯ ಅಗೋಚರ ಕೈಗಳು ಎಲ್ಲವನ್ನೂ ನಿಯಂತ್ರಿಸುತ್ತಿರುತ್ತವೆ ಎಂದು.

ಆದಾಗ್ಯೂ, ಜಗತ್ತಿನ ಇತಿಹಾಸ, ಈ ಸಿದ್ಧಾಂತ ಕೆಲಸ ಮಾಡುತ್ತಿಲ್ಲ ಎಂದು ಪುನಃ ಪುನಃ ತೋರಿಸಿಕೊಟ್ಟಿದೆ. ಬಂಡವಾಳಶಾಹೀ ಮತ್ತು ಮಾರುಕಟ್ಟೆ ದುಡಿಯುವ ವರ್ಗಗಳ ಹಿತಗಳನ್ನು ಬಲಿಗೊಟ್ಟು ಆಸ್ತಿವಂತ ವರ್ಗಗಳ ಪರವಾಗಿ ಕೆಲಸಮಾಡುತ್ತವೆಯಷ್ಟೇ.

1980ರ ದಶಕದಲ್ಲಿ, ನವ ಉದಾರವಾರವಾದದ ಉದಯದೊಂದಿಗೆ ಬಂಡವಾಳಶಾಹಿಯ ಬೆಂಬಲಿಗರಿಂದ ಹೊಸದೊಂದು ಆರ್ಥಿಕ ಸಿದ್ದಾಂತ ಹುಟ್ಟಿಕೊಂಡಿತು. ಇದನ್ನು ವರ್ತನಾ ಅರ್ಥಶಾಸ್ತ್ರ ಎನ್ನಲಾಯಿತು. ಈ ಕ್ಷೇತ್ರದ ಪ್ರಮುಖರೆಂದರೆ ಡ್ಯಾನಿಯಲ್ ಕಾಹ್ನೆಮನ್, ಅಮೊಸ್ ಟ್ವೆರ್ಸ್ಕಿ, ರಾಬರ್ಟ್ ಶಿಲ್ಲರ್, ಸೆಂದಿಲ್ ಮುಲ್ಲೈನಾಥನ್, ಕಾಸ್ ಸನ್‌ಸ್ಟೈನ್, ಮತ್ತು ಈ ವರ್ಷ ನೊಬೆಲ್ ಪ್ರಶಸ್ತಿ ಪಡೆದ ರಿಚರ್ಡ್ ಥೇಲರ್.

ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಪ್ರಸ್ತುತಪಡಿಸುವಂತೆ, ಜನರು ತಮ್ಮ ಸ್ವಹಿತದಿಂದ ವರ್ತಿಸುವುದಿಲ್ಲ, ವಿವೇಚನಾಹೀನರಾಗಿ ವರ್ತಿಸುತ್ತಾರೆ(ಮೂರ್ಖರಂತೆ ವರ್ತಿಸುತ್ತಾರೆ ಎಂದು ಅವರು ನೇರವಾಗಿ ಹೇಳದಿದ್ದರೂ, ಅರ್ಥ ಅದೇ). ನಿಜ ಜಗತ್ತಿನ ನೂರಾರು ಉದಾಹರಣೆಗಳನ್ನು ಅವರು ದಾಖಲಿಸಿದ್ದಾರೆ. ಮತ್ತು ಮನೋವಿಜ್ಞಾನ, ಜ್ಞಾನಗ್ರಹಣ ವಿಜ್ಞಾನ, ಮಾನವಶಾಸ್ತ್ರ, ಸಮಾಜಶಾಸ್ತ್ರ, ಮುಂತಾದವನ್ನು ಬಳಸಿಕೊಂಡು ವರ್ತನಾ ಅರ್ಥಶಾಸ್ತ್ರವೆಂಬ ಅವರ ಪರ್ಯಾಯ ಮಾದರಿಯನ್ನು ಕಟ್ಟಿದ್ದಾರೆ.

ಇದು ಕುಡಿತದ ಕೇಳಿಯಿಂದ ಸ್ಟೈಕರ್ ವಿಮಾನಗಳ ಕಚ್ಚಾಟದಂತಹ ಎಲ್ಲ ವಿಲಕ್ಷಣ ವರ್ತನೆಗಳನ್ನು ವಿವರಿಸುವ ಒಂದು ಮನರಂಜನಾ ಪಾರ್ಲರ್ ಆಟವಾಗಿಯೇ ಉಳಿಯುತ್ತಿತ್ತೇನೋ. ಅದರೆ ಈ ನುಣುಪಾದ ಕೈಗವಚದ ಒಳಗಿರುವ ಉಕ್ಕಿನ ಮುಷ್ಟಿಯ ಹುನ್ನಾರ ಹೊರಬೀಳಲು ಹೆಚ್ಚು ಸಮಯ ಹಿಡಿಯಲಿಲ್ಲ.

ನವ ಉದಾರವಾದಿ ಆಳ್ವಿಕೆಗಳಿಗೆ ಪ್ರತಿನಿತ್ಯ ಸಂಖ್ಯೆಯಲ್ಲಿ ಹೆಚ್ಚುತ್ತಿರುವ ಬಡವರು ಮತ್ತು ಅವರ ಹೆಚ್ಚುತ್ತಿರುವ ಸಿಟ್ಟನ್ನು ನಿಭಾಯಿಸಲು ಈ ವರ್ತನಾ ಅರ್ಥಶಾಸ್ತ್ರ ಪ್ರಿಯ ಸಾಧನವಾಗಿ ಬಿಟ್ಟಿತು. ಬಡಜನರು ಬಹುತೇಕ ಮೂರ್ಖತನದಿಂದ ವರ್ತಿಸುತ್ತಾರೆ, ಇದನ್ನು ಸರಕಾರೀ ಧೋರಣೆಗಳು ಗಮನಕ್ಕೆ ತಗೊಂಡು ಅವರು ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ 'ನಯವಾಗಿ ತಿವಿ' ಯುವ ಸೂಕ್ತವಾದ ಧೋರಣೆಗಳನ್ನು ರೂಪಿಸಬೇಕು ಎಂಬುದು ಈ ವರ್ತನಾ ಅರ್ಥಶಾಸ್ತ್ರಜ್ಞರು ಮತ್ತು ಅವರ ಬೆಂಬಲಿಗರ ವಾದ.

ಇದು ಎರಡು ಉದ್ದೇಶಗಳನ್ನು ಈಡೇರಿಸುತ್ತದೆ: ಬಡತನ, ನಿರುದ್ಯೋಗದಂತಹ ಸಮಸ್ಯೆಗಳು ಇರುವುದಕ್ಕೆ ವ್ಯವಸ್ಥಾಗತ ಕಾರಣಗಳೇನು ಎಂಬ ಯೋಚಿಸುವ ಬದಲು ನಮ್ಮ ಗಮನವನ್ನು ಬೇ-ರೆಡೆಗೆ ತಿರುಗಿಸಿದೆ, ಮತ್ತು ಅವುಗಳ ನಿರ್ಮೂಲನೆಗೆ ಸರ್ಕಾರಗಳು ಮಾಡಬೇಕಿದ್ದ ವ್ಯಚ್ಚದಿಂದ ಅವನ್ನು ಮುಕ್ತಗೊಳಿಸಿದೆ. ಬಡಜನರು ತಮ್ಮ ಮೂರ್ಖ ನಿರ್ಧಾರಗಳಿಂದ ಬಡವರಾಗಿದ್ದಲ್ಲಿ ಸರಕಾರಗಳು ಮಾಡಬೇಕಾದ್ದು ಇಷ್ಟೇ- ಅವರು ಸರಿಯಾದ ನಿರ್ಧಾರ ತೆಗೆದುಕೊಳ್ಳುವಂತೆ ಮನಶ್ಶಾಸ್ತ್ರೀಯ ವಿಧಾನಗಳು, ಮೌನ ಸೂಚನೆಗಳ ಮೂಲಕ 'ನಯವಾಗಿ ತಿವಿ'ದರಷ್ಟೇ ಸಾಕು!

ನವ ಉದಾರವಾದದ ಈ ನಾಚಿಕೆಗೆಟ್ಟ ಸಮರ್ಥನೆಗೆ ಥೇಲರ್ ಮೂಲಕ ಒಂದು ಪ್ರಚಾರ ಸಾಧನ ಸಿಕ್ಕಂತಾಯಿತು. "ಆರೋಗ್ಯ, ಸಂಪತ್ತು ಮತ್ತು ಸಂತೋಷದ ಧಾರಗಳನ್ನು ಉತ್ತಮಗೊಳಿಸಲು ನಯತಿವಿತ:" ಎಂಬ 2008ರಲ್ಲಿ ಪ್ರಕಟವಾದ ತಮ್ಮ ಭಾರೀ ಮಾರಾಟವಾದ ಪುಸ್ತಕದಲ್ಲಿ ಅವರು ಸರ್ಕಾರಗಳು ಜನರು ಉತ್ತಮ ಆಯ್ಕೆಗಳನ್ನು ಮಾಡಿಕೊಳ್ಳುವಂತೆ ನಯವಾಗಿ ತಳ್ಳಲು ಸಣ್ಣ ಮತ್ತು ಸುಲಭವಾಗಿ ಅರ್ಥವಾಗುವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಉದಾಹರಣೆಗೆ, ಆ ಪುಸ್ತಕದಲ್ಲಿ ನಗದಿನ ಆವಶ್ಯಕತೆ ಇರುವ ಜನರು ನಗದು ಹೊಂದಿದವರಿಗಿಂತ ಹೆಚ್ಚು ವಿವೇಚನಾಹೀನರಾಗಿ ವರ್ತಿಸುತ್ತಾರೆ ಎಂದು ತೋರಿಸುವ(ಬಡವರು ಮೂರ್ಖರು ಎಂದು ಹೇಳುವ ಇನ್ನೊಂದು ರೀತಿ) ಒಂದು ಅಧ್ಯಯನವನ್ನು ಉದ್ಧರಿಸುತ್ತಾರೆ. ಹಾಗಾಗಿ, ಅವರಿಗೆ ನಗದನ್ನು ಒದಗಿಸುವಾಗ, ಅದರೊಂದಿಗೆ ಹೆಣ್ಣು ಮಕ್ಕಳ ವಿದ್ಯಾಭ್ಯಾಸ, ಅಥವ ಬೇರಾವುದೇ ಅಪೇಕ್ಷಣೀಯ ಸಂಗತಿ ಬಗ್ಗೆ ಸಂದೇಶವನ್ನು ರವಾನಿಸಬೇಕು, ಸಂದೇಶ ರವಾನೆ ಅವರು ನಗದು ಪಡೆಯುವುದಕ್ಕಿಂತ ಮೊದಲೇ ಅಥರೆ ಸಂದೇಶವನ್ನು ಮೂಲೆಗೆ ಹಾಕುತ್ತಾರೆ ಎನ್ನುತ್ತಾರೆ ಅವರು.

'ನಯತಿವಿತ'ವನ್ನು ಪಾಶ್ಚಾತ್ಯ ಸರಕಾರಗಳು ಎಷ್ಟು ಇಷ್ಟಪಟ್ಟವೆಂದರೆ, ಬ್ರಿಟನ್ನಿನಲ್ಲಿ ಒಂದು 'ನಯತಿವಿತ ತಂಡ'ವನ್ನು ರಚಿಸಲಾಯಿತು. ಈ ತಂಡದ ಅನುಭವಗಳ ಮೇಲೆ ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಒಂದು ಕಾರ್ಯಗುಂಪನ್ನು ಸಂಘಟಿಸಲಾಯಿತು.. ಬ್ರೆಜಿಲ್, ಫ್ರಾನ್ಸ್, ಆಸ್ಟ್ರೇಲಿಯಾ ಮತ್ತು ನ್ಯೂಝಿಲ್ಯಾಂಡ್ ಸರಕಾರಗಳು ಕೂಡ ಇನ್ನು ಮುಂದೆ ತನ್ನ ನೀತಿ ರೂಪಿಸುವಾಗ ವರ್ತನಾ ಅರ್ಥಶಾಸ್ತ್ರವನ್ನು ಅಳವಡಿಸುವುದಾಗಿ ಹೇಳಿವೆ.

ಅಮೆರಿಕಾದಲ್ಲಿ 2009ರಲ್ಲಿ ಇದರ ನಿಜರೂಪ ಇನ್ನಷ್ಟು ಅನಾವರಣ ಗೊಂಡಿತು. ತೆರಿಗೆ ಕಡಿತಗಳು, ವಂತಿಗೆ ಆಧಾರಿತ ಆರೋಗ್ಯಪಾಲನೆ ಹೂಡಿಕೆ ಯೋಜನೆ, ನಿವೃತ್ತಿ ಉಳಿತಾಯದ ಹೂಡಿಕೆ ಮತ್ತು ಇದೇ ರೀತಿ ಇನ್ನೂ ಹಲವಾರು 'ನಯತಿವಿತ' ಸಿದ್ಧಾಂತದಿಂದ ಸ್ಫೂರ್ತಿ ಪಡೆದವು ಎಂದು ಹೇಳಿಕೊಂಡ ಹಣಕಾಸಿನ ಕ್ರಮಗಳನ್ನು ಕೈಗೊಳ್ಳಲಾಯಿತು. ಜನಗಳಿಗೆ ನೆರವಾಗುವ ಹೆಸರಿನಲ್ಲಿ ಅವರನ್ನು ಹಣಕಾಸಿನ ದೊರೆಗಳ ಸಂಕೋಲೆಗಳಲ್ಲೇ ಉಳಿಯಲು 'ನಯವಾಗಿ ತಿವಿ'ಯುತ್ತಿದ್ದಾರೆ.

ಈ 'ನಯತಿವಿತ' ಎಂದಾದರೂ ಯಶಸ್ವಿಯಾಗಿದೆಯೇ? ಅಥವಾ ಶ್ರೀಮಂತರ ಮೇಲೆ ಒಂದು ಶೇಕಡಾದಷ್ಟಿರುವ ಮಂದಿಯ ಮೇಲೆ ಪ್ರಯೋಗಿಸಲಾಗಿದೆಯೇ? ಯಾವುದಾದರೂ ಕೊಟ್ಯಾಧಿಪತಿ ತನ್ನ ಸಂಪತ್ತನ್ನು ಬಿಟ್ಟುಕೊಡುವತ್ತ ನಯವಾಗಿ ನೂಕಲಾಗಿದೆಯೇ? ಇದರ ಬಗ್ಗೆ ಯಾವುದೇ ಅಧ್ಯಯನ ಅಥವಾ ಆಧಾರಗಳಿಲ್ಲ. ಶ್ರೀಮಂತರ ವರ್ತನೆ ವಿವೇಚನಾಹೀನವಾಗಿರುವುದಿಲ್ಲ, ಆದ್ದರಿಮದ ಅವರಿಗೆ ನಯತಿವಿತದ ಅಗತ್ಯವಿಲ್ಲ ಎಂದು ಈ ವರ್ತನಾ ಅರ್ಥಶಾಸ್ತ್ರಜ್ಞರು ಹೇಳಬಹುದೇನೋ. ಆದರೆ 2008 ರಲ್ಲಿ ಇದೇ ಶ್ರೀಮಂತರ ವಿವೇಚನಾರಹಿತ ದುರಾಸೆ ಹಣಕಾಸಿನ ಬಿಕ್ಕಟ್ಟನ್ನು ಉಂಟುಮಾಡಿತು ಎಂಬುದನ್ನು ಅವರು ಮರೆತಿದ್ದಾರೆ.


ವರ್ತನಾ ಅರ್ಥಶಾಸ್ತ್ರದ ಚೌಕಟ್ಟಿನ ಇನ್ನೊಂದು ಪರಿಣಾಮ ಎಂದರೆ, 1% ಮತ್ತು 99% ಜನರ ಆದಾಯಗಳ ನಡುವಿನ ಕಂದರ ಇನ್ನಷ್ಟು ಹೆಚ್ಚುತ್ತಿರುವುದರ ಸಾಮಾಜಿಕ ಮತ್ತು ರಾಜಕೀಯ ಪರಿಣಾಮಗಳನ್ನು ನಿಭಾಯಿಸಲು ಒಂದು ಸಾಧನವನ್ನು ಒದಗಿಸುತ್ತದೆ.

ಥೇಲರ್ ಮತ್ತು ಅವರ ಸಹೋದ್ಯೋಗಿಗಳು ಹಾಗೂ ಅನುಯಾಯಿಗಳು ಬಡವರ ನಡವಳಿಕೆಯ ಗುಣಲಕ್ಷಣಗಳನ್ನು ದಾಖಲಿಸುವ, ಮತ್ತು ಹೊಂದಿಕೊಳ್ಳುವತ್ತ, ಸ್ವೀಕರಿಸುವತ್ತ ಮತ್ತು ಶರಣಾಗುವತ್ತ ಅವರನ್ನು ಹೇಗೆ ತಳ್ಳಬಹುದು, ಅದನ್ನು ಹೇಗೆ ನಿಭಾಯಿಸಬೇಕು ಎಂಬ ಬಗ್ಗೆ ಬೃಹತ್ ಸಾಹಿತ್ಯವನ್ನೇ ಬೆಳೆಸಿದ್ದಾರೆ.

ನವ-ಉದಾರವಾದದ ಈ ಬಾವುಟ ಹಿಡಿದಾತನಿಗೆ, ಅದರಲ್ಲೂ ಬಡವರು ಮತ್ತು ವಂಚಿತರ ಬಗ್ಗೆ ಹೆಚ್ಚು ಸಹಾನುಭೂತಿಪರನೂ, ಅವರನ್ನು ಹೆಚ್ಚು ಅರ್ಥಮಾಡಿಕೊಳ್ಳಬಲ್ಲವನೂ, ಮತ್ತು ಅವರ ಬಗ್ಗೆ ಜ್ಞಾನವುಳ್ಳವನೂ ಹಾಗೂ ಅವರ ಪರವಾಗಿ ಚಿಂತಿಸುವವನು ಎಂಬಂತೆ ಕಾಣುವುದರಿಂದ ಇನ್ನಷ್ಟು ಅಮೂಲ್ಯವಾಗಿರುವಾತನಿಗೆ ನೋಬೆಲ್ ಪ್ರಶಸ್ತಿ ಹೋಗಿದ್ದರೆ ಆಶ್ಚರ್ಯವೇನೂ ಇಲ್ಲ.

ಭಾರತದಲ್ಲಿ ನಾವು ಇನ್ನೂ ಹೆಚ್ಚು ಜಾಗರೂಕರಾಗಿರಬೇಕು. ಏಕೆಂದರೆ ಮೋದಿ ಸರಕಾರ ಜನರು 'ಸರಿಯಾದ' ನಿರ್ಧಾರಗಳನ್ನು ಕೈಗೊಳ್ಳುವಂತೆ 'ಮಾಡುವ 'ನಯತಿವಿತ'ದ ತನ್ನದೇ ಒಂದು ಸಣ್ಣ ಆವೃತ್ತಿಯನ್ನು ಹೊಂದಿದೆ. ಒಂದೇ ಅಪವಾದವೆಂದರೆ, ಮೋದಿಯವರಿಗೆ ಜನಗಳು ನಗದುರಹಿತ ಆರ್ಥಿಕ ವ್ಯವಹಾರಗಳನ್ನು ಅಪ್ಪಿಕೊಳ್ಳುವಂತೆ ಮಾಡಲು ನಯತಿವಿತಕ್ಕಿಂತ ಬಲವಾಗಿ ದಬ್ಬುವುದರಲ್ಲೇ ಹೆಚ್ಚು ನಂಬಿಕೆ. ಆದ್ದರಿಂದಲೇ ಥೇಲರ್‌ರಿಂದ ತಕ್ಷಣದ ಪ್ರಶಂಸೆ ಗಳಿಸಿದ್ದು. ನೇರ ನಗದು ವರ್ಗಾವಣೆ ಇನ್ನೊಂದು ದಬಾವಣೆ, ಏಕೆಂದರೆ, ಜನಗಳು ಭ್ರಷ್ಟರು ಮತ್ತು ಮೂರ್ಖರು ತಾನೇ?

ನವ ಉದಾರವಾದಿ ಆಳ್ವಿಕೆಗಳಿಗೆ ಪ್ರತಿನಿತ್ಯ ಸಂಖ್ಯೆಯಲ್ಲಿ ಹೆಚ್ಚುತ್ತಿರುವ ಬಡವರು ಮತ್ತು ಅವರ ಹೆಚ್ಚುತ್ತಿರುವ ಸಿಟ್ಟನ್ನು ನಿಭಾಯಿಸಲು ಈ ವರ್ತನಾ ಅರ್ಥಶಾಸ್ತ್ರ ಪ್ರಿಯ ಸಾಧನವಾಗಿ ಬಿಟ್ಟಿದೆ. ಬಡಜನರು ಬಹುತೇಕ ಮೂರ್ಖತನದಿಂದ ವರ್ತಿಸುತ್ತಾರೆ, ಇದನ್ನು ಸರಕಾರೀ ಧೋರಣೆಗಳು ಗಮನಕ್ಕೆ ತಗೊಂಡು ಅವರು ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ 'ನಯವಾಗಿ ತಿವಿ'ಯುವ ಸೂಕ್ತವಾದ ಧೋರಣೆಗಳನ್ನು ರೂಪಿಸಬೇಕು ಎಂಬುದು ಪ್ರೊ.ಥೇಲರ್ ಮತ್ತು ಇತರ ಈ ವರ್ತನಾ ಅರ್ಥಶಾಸ್ತ್ರಜ್ಞರು ಮತ್ತು ಅವರ ಬೆಂಬಲಿಗರ ವಾದ. ಭಾರತದಲ್ಲಿ ಮೋದಿ ಸರಕಾರ ಜನರು 'ಸರಿಯಾದ' ನಿರ್ಧಾರಗಳನ್ನು ಕೈಗೊಳ್ಳುವಂತೆ 'ಮಾಡುವ 'ನಯತಿವಿತ'ದ ತನ್ನದೇ ಒಂದು ಸಣ್ಣ ಆವೃತ್ತಿಯನ್ನು ಹೊಂದಿದೆ. ಆದ್ದರಿಂದಲೇ ಥೇಲರ್‌ರಿಂದ ತಕ್ಷಣದ ಪ್ರಶಂಸೆ ಗಳಿಸಿದ್ದು. ಆದರೆ ಒಂದು ಸಮಸ್ಯೆಯೆಂದರೆ, ಮೋದಿಯವರಿಗೆ ಜನಗಳು ನಗದುರಹಿತ ಆರ್ಥಿಕ ವ್ಯವಹಾರಗಳನ್ನು ಅಪ್ಪಿಕೊಳ್ಳುವಂತೆ ಮಾಡಲು ನಯತಿವಿತಕ್ಕಿಂತ ಬಲವಾಗಿ ದಬ್ಬುವುದರಲ್ಲೇ ಹೆಚ್ಚು ನಂಬಿಕೆ!



ಮಹಾರಾಷ್ಟ್ರ : ವಾರ್ಲಿ ಆದಿವಾಸಿ ಬಂಡಾಯಗಾರರ 72ನೇ ಹುತಾತ್ಮ ದಿನಾಚರಣೆ

ಅಕ್ಟೋಬರ್10, 1945. ಮಹಾರಾಷ್ಟ್ರ–ಗುಜರಾತ ಗಡಿಯಲ್ಲಿರುವ ತಲ್ವಾಡದಲ್ಲಿ ತಮ್ಮ ಶೋಷಣೆಯ ವಿರುದ್ಧ ಬಂಡೆದ್ದ ವಾರ್ಲಿ ಆದಿವಾಸಿ ಜನಗಳ ಮೇಲೆ ಬ್ರಿಟಿಶ್ ಪೋಲೀಸರು ಗುಂಡು ಹಾರಿಸಿದಾಗ ಜೇತ್ಯಾ ಗಂಗಡ್ ಮತ್ತು ಇತರ ನಾಲ್ಕು ಮಂದಿ ಆದಿವಾಸಿಗಳು ಹುತಾತ್ಮರಾದರು. ಆದರೆ ಪ್ರಖ್ಯಾತ ಹೋರಾಟಗಾರ್ತಿ ಗೋದಾವರಿ ಪರುಳೇಕರ್ ನೇತೃತ್ವದ ಈ ಬಂಡಾಯ ನಿಲ್ಲಲಿಲ್ಲ. ನಂತರ ಈ ಏಳು ದಶಕಗಳಲ್ಲಿ ಮತ್ತೆ 60 ಆದಿವಾಸಿಗಳು ಕಾಂಗ್ರೆಸ್ ಮತ್ತು ಬಿಜೆಪಿ ಸರಕಾರಗಳ ಗುಂಡುಗಳಿಗೆ ಬಲಿಯಾಗಿದ್ದಾರೆ. ಆದರೂ ಆಗ ಹೊತ್ತಿದ್ದ ಕಿಡಿ ಆರಿಲ್ಲ.

ಇತ್ತೀಚೆಗೆ ಪಾಲ್ಘಡ್ ಜಿಲ್ಲೆಯ ವಿಕ್ರಮ್‌ಗಡ್‌ನಲ್ಲಿ 5000 ಜನಗಳ ಸಮರಧೀರ ಘೇರಾವ್‌ನಿಂದ ಅವರು ತಮ್ಮ ಸ್ಥಳೀಯ ಬೇಡಿಕೆಗಳನ್ನು ಈಡೇರಿಸಿಕೊಂಡಿದ್ದಾರೆ. ಬಂಡಾಯದ ಒಂದು ಪ್ರಮುಖ ಕೇಂದ್ರವಾಗಿದ್ದ ದಹಾಣುನಲ್ಲಿ 3500 ಮಂದಿ ತಹಸೀಲ್ ಕಚೇರಿಗೆ ಮೆರವಣಿಗೆ ನಡೆಸಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಂಡಿದ್ದಾರೆ. ವಾಡ ಮತ್ತು ಜವ್‌ಹರ್ ತಹಸೀಲ್‌ಗಳಲ್ಲಿ ಮತ್ತು ಪಕ್ಕದ ಥಾಣೆ ಜಿಲ್ಲೆಯ ಶಾಹಪುರ್ ತಹಸೀಲ್‌ನಲ್ಲಿಯೂ ಯಶಸ್ವಿ ಹೋರಾಟಗಳು ನಡೆದಿವೆ.



ಈ ಹಿನ್ನೆಲೆಯಲ್ಲಿ ಅಕ್ಟೋಬರ್ 10ರಂದು ಥಾಣೆ–ಪಾಲ್ಘಡ್ ಜಿಲ್ಲೆಯಾದ್ಯಂತ ಜೇತ್ಯ ಗಂಗಡ್ ಮತ್ತು ಇತರ ನಾಲ್ಕು ಆದಿವಾಸಿ ಬಂಡಾಯಗಾರರ 72ನೇ ಹುತಾತ್ಮ ದಿನಾಚರಣೆ ಮತ್ತು ಗೋದಾವರಿ ಪರುಳೇಕರ್ ಅವರ 21ನೇ ನಿಧನ ವಾರ್ಷಿಕವನ್ನು ಆಚರಿಸಲಾಯಿತು. ಮೇಲೆ ಹೇಳಿದ ತಹಸೀಲ್‌ಗಳಲ್ಲಿ ಮಾತವಲ್ಲ, ಇದಕ್ಕೆ ತಾಕಿಕೊಂಡಿರುವ ಗುಜರಾತಿನ ಭಿಲಾದ್‌ನಲ್ಲಿಯೂ 15,000ಕ್ಕೂ ಹೆಚ್ಚು ಆದಿವಾಸಿ ಜನಗಳು ಭೀಕರ ಮಳೆಯನ್ನೂ ಲೆಕ್ಕಿಸದೆ ಭಾಗವಹಿಸಿದರು. ಆದಿವಾಸಿ ಮಹಿಳೆಯರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದು ಈ ಆಚರಣೆಯ ವಿಶೇಷತೆ.

ಮತ್ತೊಂದು ವಿಶೇಷತೆಯೆಂದರೆ ಗುಜರಾತಿನ ಭಿಲಾದ್‌ನಲ್ಲಿ ನಡೆದ ಸಾರ್ವಜನಿಕ ಸಭೆ. ಗುಜರಾತಿನ ವಿಧಾನಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಇದು ಮಹತ್ವ ಪಡೆದಿದೆ. ಗುಜರಾತಿನ ಉಂಬರ್‌ಗಾಂವ್ ಮತ್ತು ಮಹಾರಾಷ್ಟ್ರದ ತಲಸಾರಿ ತಹಸೀಲ್ ಸಮಿತಿಗಳು ಜಂಟಿಯಾಗಿ ಇದನ್ನು ಸಂಘಟಿಸಿದವು.

ಸಭೆಯನ್ನುದ್ದೇಶಿಸಿ ಎಐಕೆಎಸ್ ಅಧ್ಯಕ್ಷ ಡಾ.ಅಶೋಕ ಧವಳೆ, ಕಿಸಾನ್ ಗುಜರ್, ಒಂಬರ್‌ಗಾಂವ್ ಮತ್ತು ಸುರತ್‌ನಲ್ಲಿ ಸ್ಪರ್ಧಿಸಬಹುದಾದ ಸ್ಥಳೀಯ ಸಿಪಿಐ(ಎಂ) ಮುಖಂಡರುಗಳಲ್ಲದೆ, ಇಬ್ಬರು ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಸವಿತಾ ದವ್ರೆ ಮತ್ತು ಸ್ಮಿತಾ ವಾಲ್ವಿ ಮಾತಾಡಿದರು. ಇವರಿಬ್ಬರು ಅನುಕ್ರಮವಾಗಿ ತಲಸಾರಿ ತಹಸೀಲ್ ಪಂಚಾಯತ್ ಸಮಿತಿ ಮತ್ತು ತಲಸಾರಿ ನಗರ ಮಂಡಳಿಯ ಅಧ್ಯಕ್ಷೆಯರು.

ಈ ಸಭೆಯ ಯಶಸ್ಸು ಬಿಜೆಪಿ ಮುಖಂಡರಲ್ಲಿ ಭೀತಿಯುಂಟು ಮಾಡಿದೆ ಎಂಬುದು ಎರಡೇ ದಿನಗಳ ನಂತರ ಅದೇ ಸ್ಥಳದಲ್ಲಿ ಗುಜರಾತಿನ ಮುಖ್ಯಮಂತ್ರಿಗಳನ್ನು ಕರೆಸಿ ಅವಸರವಸರವಾಗಿ ಸಾರ್ವಜನಿಕ ಸಭೆಯನ್ನು ನಡೆಸಿದಾಗ ಸ್ಪಷ್ಟವಾಯಿತು.

ಕಾನೂನುಬಾಹಿರ ಕೃತ್ಯದಲ್ಲಿ ತೊಡಗಿದ್ದ ಡಾಕ್ಟರ್ ದಂಪತಿ ರಕ್ಷಣೆಗೆ ಧಾವಿಸಿದ ಬಿಜೆಪಿ ಶಾಸಕರು–4'ಚ'ಗಳ ನಿಜ ಹೂರಣ ಮತ್ತೆ ಬಯಲು

ಕಾನೂನುಬಾಹಿರವಾಗಿರುವ ಜನನಪೂರ್ವ ಲಿಂಗ ನಿರ್ಧಾರಣೆ ಪರೀಕ್ಷೆಯಲ್ಲಿ ತೊಡಗಿದ್ದ ಡಾಕ್ಟರ್ ದಂಪತಿಗಳನ್ನು ಉತ್ತರಪ್ರದೇಶದ ಅಲಿಗಡ್‌ನಲ್ಲಿ ಬಂಧಿಸಲು ಇಬ್ಬರು ಬಿಜೆಪಿ ಶಾಸಕರು ಬಿಡದ ಘಟನೆ ಬಿಜೆಪಿ ಮಂದಿ ಹೇಳಿಕೊಳ್ಳುವ ನಾಲ್ಕು 'ಚ'ಗಳ (ಚಾಲ್, ಚಲನ್, ಚೆಹರಾ, ಚರಿತ್ರ್) ನಿಜಸ್ವರೂಪವನ್ನು ಮತ್ತೊಮ್ಮೆ ಬಯಲು ಮಾಡಿದೆ.

ಅಲ್ಟ್ರಾಸಾನಿಕ್ ತಂತ್ರಜ್ಞಾನದ ಮೂಲಕ ಭ್ರೂಣದ ಲಿಂಗಪತ್ತೆ ಮಾಡಿ ಹೆಣ್ಣು ಭ್ರೂಣಹತ್ಯೆ ಮಾಡುವ ಚಾಳಿಯನ್ನು ನಿಲ್ಲಿಸಲು ಪಿಸಿಪಿಎನ್‌ಡಿಟಿ ಕಾಯ್ದೆ ತರಲಾಯಿತು. ಇದರಲ್ಲಿ ಇಂತಹ ಜನನಪೂರ್ವ ಲಿಂಗ ಪತ್ತೆಯ ಪರೀಕ್ಷೆಯನ್ನು ಕಾನೂನುಬಾಹಿರಗೊಳಿಸಿ ಅದರ ಉಲ್ಲಂಘನೆಯನ್ನು ಕನಿಷ್ಟ ಮೂರು ವರ್ಷಗಳ ಜೈಲುವಾಸ ಮತ್ತು ದಂಡ ತೆರುವ ಅಪರಾಧವಾಗಿ ಮಾಡಲಾಗಿದೆ.

ಈ ಕಾನೂನಿನ ಉಲ್ಲಂಘನೆಯಾಗುತ್ತಿದೆ ಎಂಬ ಗುಮಾನಿಯ ಮೇಲೆ ರಾಜಸ್ತಾನ ಸರಕಾರದ ವಿಭಾಗವೊಂದು ಮಹಿಳೆಯೊಬ್ಬರನ್ನು ಈ ಡಾಕ್ಟರ್ ಬಳಿ ಕಳಿಸಿತ್ತು. ಆ ಡಾಕ್ಟರ್ ಇಂತಹ ಲಿಂಗಪರೀಕ್ಷೆಗಿಳಿದಾಗ ಸಿಕ್ಕಿಬಿದ್ದರು ಎನ್ನಲಾಗಿದೆ. ಅವರನ್ನು ಬಂಧಿಸಲಾಯಿತು. ಆದರೆ ಇದನ್ನು ಕೇಳಿ ಪೋಲಿಸ್ ಠಾಣೆಗೆ ಧಾವಿಸಿದ ಬಿಜೆಪಿ ಶಾಸಕರಾದ ಅನಿಲ್ ಪಾರಸ್ಕರ್ ಮತ್ತು ಸಂಜೀವ್ ರಾಜ ರಾಜಸ್ತಾನ ಸರಕಾರದ ಅಧಿಕಾರಿಗಳು ವಶಪಡಿಸಿಕೊಂಡ ಅಲ್ಟ್ರಾಸೌಂಡ್ ಯಂತ್ರವನ್ನು ಒಯ್ಯದಂತೆ ತಡೆದರು, ಮತ್ತು ಆ ಡಾಕ್ಟರ್ ದಂಪತಿಗಳನ್ನು ಬಿಡದೆ ತಾವು ಪೊಲೀಸ್ ಠಾಣೆಯಿಂದ ಕದಲುವುದಿಲ್ಲ ಎಂದು ಪಟ್ಟುಹಿಡಿದರು ಎನ್ನಲಾಗಿದೆ.

ಇವೆಲ್ಲವೂ ಸ್ವತಃ ಜಿಲ್ಲಾ ಮ್ಯಾಜಿಸ್ಟ್ರೇಟ್ ಸಮ್ಮುಖವೇ ನಡೆಯಿತು. ಅವರ ಮನವರಿಕೆ ಪ್ರಯತ್ನವೂ ಸಫಲವಾಗಲಿಲ್ಲವಂತೆ.

ಯಥಾಪ್ರಕಾರ ಬಿಜೆಪಿ ಶಾಸಕರು ತಾವು ಹೀಗೇನೂ ಮಾಡಿಲ್ಲ ಎಂದು ಹೇಳಿದ್ದಾರೆ. ರಾಜಸ್ತಾನ ಸರಕಾರವೂ ಬಿಜೆಪಿಯದ್ದೇ ಅಗಿರುವುದರಿಂದ ಬೇರೆಕಾರಣಗಳನ್ನು ಕೊಡುವುದು ಅವರಿಗೆ ಆಗಿರಲಿಕ್ಕಿಲ್ಲ.

ಕ್ಲಿಯೊಪಾತ್ರಳಂತೆ ಕಾಣಲು ಗೋಮೂತ್ರ–ಸಗಣಿಯ ಪಂಚಗವ್ಯ ಬಳಸಿ –ಗುಜರಾತ್ ಗೋಸೇವಾ ಮಂಡಳಿ ಸಲಹೆ

ಪ್ರಾಚೀನ ಈಜಿಪ್ಟಿನ ರಾಣಿ ಕ್ಲಿಯೊಪಾತ್ರಳಂತಹ ಆರೋಗ್ಯಕರ, ಹೊಳಪಿನ ಚರ್ಮ ಪಡೆಯಲು ಗೋಮೂತ್ರ, ಸಗಣಿ, ಹಾಲು, ಮೊಸರು ಮತ್ತು ಮಜ್ಜಿಗೆಯ ಮಿಶ್ರಣವಾದ ಪಂಚಗವ್ಯವನ್ನು ಬಳಸಿ ಎಂದು ಗುಜರಾತ್ ಸರಕಾರದ ಗೋಸೇವಾ ಗೌಚಾರ್ ವಿಕಾಸ ಮಂಡಳಿ ಪ್ರಕಟಿಸಿರುವ ಸಲಹಾ ಪತ್ರ ಸೂಚಿಸಿದೆ.

ಮಹಿಳೆಯರು ರಾಸಾಯನಿಕಗಳ ಮೂಲಕ ತಮ್ಮ ಚರ್ಮವನ್ನು ಕೆಡಿಸುವ ಬದಲು ಗೋವಿನ ಹಾಲು, ಮೂತ್ರ, ಸಗಣಿಯಮತಹ ನೈಸರ್ಗಿಕ ಉತ್ಪನ್ನಗಳನ್ನು ಬಳಸಬೇಕು, ಇವುಗಳ ಬಗ್ಗೆ ಅವರಿಗೆ ಅರಿವಿಲ್ಲ ಎಂದು ಈ ಮಂಡಳಿಯ ಅಧ್ಯಕ್ಷರು ಹೇಳಿದ್ದಾರೆ. ಗೋಮೂತ್ರ ಕ್ಯಾನ್ಸರ್, ಉಬ್ಬಸ ಮಾತ್ರವಲ್ಲ ಏಡ್ಸ್‌ನಂತಹ ಹೊಸರೋಗಗಳೂ ಸೇರಿದಂತೆ 108 ಕಾಯಿಲೆಗಳನ್ನು ವಾಸಿ ಮಾಡಬಲ್ಲದು ಎಂದು ಈ ಮಂಡಳಿಯ ಆರೋಗ್ಯ ಗೀತಾ ವೆಬ್‌ಸೈಟ್ ಹೇಳುತ್ತದೆ.

ಆದರೆ ಪಂಚಗವ್ಯದ ಈ ಜಾಹೀರಾತಿಗೆ 'ವಿದೇಶಿ ಸಂಸ್ಕೃತಿ'ಯ ಒಬ್ಬ ರಾಣಿಯನ್ನೇ ಏಕೆ ಆರಿಸಿಕೊಳ್ಳಲಾಗಿದೆ ಎಂಬುದು ತಿಳಿದಿಲ್ಲ.

ಪಣಜಿಗೆ ಪುಣೆಗಿಂತ ದಿಲ್ಲಿ ಹೆಚ್ಚು ಅನುಕೂಲ ಎಂದ ಕೇಂದ್ರ ಸರಕಾರ, ಗೋವಾ ಸಿಎಂ ಗೆ ಮುಖಭಂಗ

ಪರಿಸರ ಸಂಬಂಧಿ ವ್ಯಾಜ್ಯಗಳನ್ನು ತ್ವರಿತವಾಗಿ ಪರಿಹರಿಸಲೆಂದು ಸ್ಥಾಪಿಸಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್‌ಜಿಟಿ) ವಲಯವಾರು ಪೀಠಗಳನ್ನು ರಚಿಸಿದ್ದು ಗೋವಾ(ಮತ್ತು ನಾಲ್ಕು ಕೇಂದ್ರಾಡಳಿತ ಪ್ರದೇಶಗಳು), ಮಹಾರಾಷ್ಟ್ರ ಮತ್ತು ಗುಜರಾತ್ ಪಶ್ಚಿಮ ವಲಯ ಪೀಠದ ವ್ಯಾಪ್ತಿಗೆ ಬರುತ್ತವೆ.

ಆದರೆ ಅದರಲ್ಲಿ ಗೋವಾವನ್ನು ಮಾತ್ರ ಹೆಕ್ಕಿ 2000ಕಿ.ಮೀ. ದೂರದ ದಿಲ್ಲಿ ಪೀಠಕ್ಕೆ ವರ್ಗಾಯಿಸಿ ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯ ಹೊರಡಿಸಿದ್ದ ಅಧಿಸೂಚನೆಯನ್ನು ಮುಂಬೈ ಹೈಕೋರ್ಟಿನ ಗೋವಾ ಪೀಠ ಈಗ ರದ್ದು ಮಾಡಿದೆ.

ಗೋವಾಕ್ಕೆ ಪುಣೆಗಿಂತ ದಿಲ್ಲಿಗೆ ವಿಮಾನ ಸಂಪರ್ಕ ಚೆನ್ನಾಗಿದೆ, ಮತ್ತು ದಿಲ್ಲಿಯಲ್ಲಿ ಗೋವಾ ಸರಕಾರಕ್ಕೆ ಕೆಲಸ ಮಾಡುವ ವಕೀಲರ ದೊಡ್ಡ ತಂಡವೇ ಇದೆ ಎಂಬ ಕಾರಣ ಕೊಟ್ಟು ಹಿಂದೆ ರಕ್ಷಣಾ ಮಂತ್ರಿಯೂ ಆಗಿದ್ದ ಮುಖ್ಯಮಂತ್ರಿ ಮನೋಹರ ಪರಿಕ್ಕರ್‌ರವರ ಒತ್ತಡದಿಂದ ಈ ಅಧಿಸೂಚನೆ ಬಂದಿತ್ತು, ಆದ್ದ–ರಿಂದ ಇದು ಪರಿಕ್ಕರ್‌ರವರಿಗೆ ಆಗಿರುವ ವೈಯಕ್ತಿಕ ಮುಖಭಂಗ ಎನ್ನಲಾಗಿದೆ. ಗೋವಾದಲ್ಲಿ ಪರಿಸರ ವ್ಯಾಜ್ಯಗಳನ್ನು ನಿರುತ್ಸಾಹಗೊಳಿಸಲಿಕ್ಕಾಗಿಯೇ ಈ ಅಧಿಸೂಚನೆ ತರಲಾಗಿದೆ ಎಂದು ಇದರ ವಿರುದ್ಧ 24ಕ್ಕೂ ಹೆಚ್ಚು ಅರ್ಜಿಗಳು ಹೈಕೋರ್ಟಿನಲ್ಲಿ ದಾಖಲಾಗಿದ್ದವು.

"ರಾಜ್ಯ ಸರಕಾರವಾಗಲೀ, ಪರಿಸರ ಮತ್ತು ಅರಣ್ಯ ಮಂತ್ರಾಲಯವಾಗಲೀ ಯಾವುದೇ ಘಟ್ಟದಲ್ಲಿ ಮಾಡದ ಒಂದು ಕೆಲಸವೆಂದರೆ ಪರಿಸರ ಕಾನೂನುಗಳಿಂದ ಅತಿ ಹೆಚ್ಚು ರಕ್ಷಣೆ ಬೇಕಾಗಿರುವವರ ದನಿಯನ್ನು ಕೇಳದೇ ಇದ್ದದ್ದು" ಎಂದು ಈ ತೀರ್ಪು ನೀಡಿರುವ ನ್ಯಾಯಾಧೀಶರು ಹೇಳಿರುವುದಾಗಿ ವರದಿಯಾಗಿದೆ.

ಯಾವುದೇ ಸರಕಾರ ತನ್ನ ಅನುಕೂಲತೆಯ ನೆಪದಲ್ಲಿ ಒಂದು ನ್ಯಾಯಮಂಡಳಿಯನ್ನು ಸಾವಿರಾರು ಕಿ.ಮೀ. ದೂರ ಹಾಕಿ ಇದು ಎಲ್ಲರ ಒಳಿತಿಗಾಗಿ ಎಂದು ಹೇಳಿಕೊಳ್ಳುವುದು ವಿಲಕ್ಷಣವೇ ಸರಿ. ಅದು ಖಂಡಿತಾ ಎಲ್ಲರ ಒಳಿತಿಗಾಗಿ ಅಲ್ಲ ಎಂದ ನ್ಯಾಯಾಧೀಶರು ನ್ಯಾಯದ ಲಭ್ಯತೆ ಕೂಡ ಸಂವಿಧಾನದ ಕಲಮು 21 ರ ಒಂದು ಅಂಶ ಎಂದಿದ್ದಾರೆ. ಪರಿಸರದ ಪ್ರಶ್ನೆಗಳು ಒಂದು ಒಳ್ಳೆಯ ನಾಳೆಗಾಗಿ ಹೋರಾಟ ತಾನೇ, ಹಾಗಿರುವಾಗ ಅದನ್ನು ನಾಡಿನ ಅತಿ ಬಡವರ ಹಿತಗಳನ್ನು ಕಡೆಗಣಿಸಿ ಕೇವಲ ಉಳ್ಳವರ ಅಗತ್ಯಕ್ಕಾಗಿ ದೂರದ ಸ್ಥಳಗಳಿಗೆ ಹೋಗುವಂತೆ ಮಾಡುವುದು ಸರಿಯಲ್ಲ ಎಂದು ತೀರ್ಪು ಸಾಕಷ್ಟು ಖಾರವಾಗಿಯೇ ಹೇಳಿದೆ.

ಆದರೂ ಗೋವಾ ಮುಖ್ಯಮಂತ್ರಿಗಳು ಈ ತೀರ್ಪನ್ನು ಸುಪ್ರಿಂ ಕೋರ್ಟಿನಲ್ಲಿ ಪ್ರಶ್ನಿಸುತ್ತೇವೆ, ಪುಣೆ ನಮಗೆ ತಲೆನೋವು, ದಿಲ್ಲಿಯಲ್ಲಿ ನಮ್ಮ ವಕೀಲರುಗಳಿದ್ದಾರೆ, ದಿಲ್ಲಿ ನಮಗೆ ಒಳ್ಳೆಯದು ಎಂದು ಭಂಡತನದಿಂದ ಹೇಳಿದ್ದಾರಂತೆ. **ಬಿಜೆಪಿ ಮುಖ್ಯಮಂತ್ರಿಯ ಈ 'ನಾವು'ನಲ್ಲಿ ಜನಸಾಮಾನ್ಯರು ಇಲ್ಲ ಎಂಬುದು ಸ್ಪಷ್ಟ.**

ರಾಜ್ಯಗಳ ಸುತ್ತ

ದಂಡಪಿಂಡಷಾಜಿ ಯಿಂದ # ಕೀಳಯ್ಯಾ ವರೆಗೆ ಮಲೆಯಾಳಿಗಳ ಪರಿಹಾಸಕ್ಕೆ ತುತ್ತಾದ ಬಿಜೆಪಿ ಜನರಕ್ಷಾ ಯಾತ್ರೆ ಮುಗಿಯಿತು

ಕೇರಳದಲ್ಲಿ ಬಿಜೆಪಿಯ ಜನರಕ್ಷಾಯಾತ್ರೆ ಮುಗಿದಿದೆ. ಇದನ್ನು ಉದ್ಘಾಟಿಸಿದ ಮರುದಿನವೇ ಯಾತ್ರೆಯನ್ನು ಬಿಟ್ಟು ದಿಲ್ಲಿಗೆ ಧಾವಿಸಿದ ಬಿಜೆಪಿ ಅಧ್ಯಕ್ಷರು ಮತ್ತೆ ಯಾತ್ರೆಯ ಸಮಾಪ್ತಿಯಲ್ಲಿ 'ಬೃಹತ್' ಸಭೆಯಲ್ಲಿ ಮಾತಾಡುತ್ತ ಹಳಸಲು ಸುಳ್ಳುಗಳನ್ನು ಪುನರಾವರ್ತಿಸಿದರು.

ಈ ನಡುವೆ ಆ ಪಕ್ಷದ ಒಬ್ಬರು 'ರಾಷ್ಟ್ರೀಯ ಕಾರ್ಯದರ್ಶಿ ಸರೋಜ್ ಪಾಂಡೆಯವರ 'ಸಿಪಿಐ(ಎಂ)ನವರ ಕಣ್ಣುಗುಡ್ಡೆ ಕೀಳುತ್ತೇವೆ" ಎಂಬ ಬೆದರಿಕೆ ರಾಜ್ಯದಲ್ಲಿ ಭಯ ಹುಟ್ಟಿಸುವ ಬದಲು ಪರಿಹಾಸದ ಪ್ರವಾಹವೇ ಹರಿಯುವಂತೆ ಮಾಡಿದೆ.

#ಗೌಜ್‌ಡಾ(ಕೀಳಪ್ಪಾ!) ಎಂಬ ಪ್ರಸಾರ ಸಾಮಾಜಿಕ ಜಾಲತಾಣದಲ್ಲಿ ಮಲೆಯಾಳಿ ಚಿತ್ರ ನಟರ ಕಪ್ಪು ಕನ್ನಡಕದ ಚಿತ್ರಗಳೊಂದಿಗೆ, ಕೆಲವರು ತಮ್ಮದೇ ಕಪ್ಪು ಕನ್ನಡಕ ಧರಿಸಿದ ಚಿತ್ರಗಳೊಂದಿಗೆ ವ್ಯಂಗ್ಯೋಕ್ತಿಗಳು ಹರಿದಾಡಿದವು. ಇನ್ನು ಕೆಲವರು 'ಕೊಕ್ಕಚಿ ಕೊಕ್ಕಚಿ' (ಗುಮ್ಮ ಬಂತು ಗುಮ್ಮ) ಎಂದು ನಗೆಯಾಡಿದರು.

ಈ ಹಿಂದೆ ವಿಧಾನಸಭಾ ಚುನಾವಣಾ ಪ್ರಚಾರದ ಸಮಯದಲ್ಲಿ ಪ್ರಧಾನಿಗಳು ಕೇರಳವನ್ನು ಸೊಮಾಲಿಯಾದೊಂದಿಗೆ ಹೋಲಿಸುವ ಪ್ರಯತ್ನ ಮಾಡಿದಾಗ ಆರಂಭಿಸಿದ #ಪೋಮೊನೆಮೋದಿ (ಪೋಮೊನೆ ಎಂದರೆ ಹೋಗಯ್ಯಾ ಮಗನೇ), ನಂತರ ಆ ಪಕ್ಷದ ಅಧ್ಯಕ್ಷರನ್ನು ಲೇವಡಿ ಮಾಡುವ #ಅಲವಲಥಿ ಷಾಜಿ (ಅಲವಲಥಿ ಎಂದರೆ ದಂಡಪಿಂಡ ಎಂದರ್ಥ), ಉತ್ತರ ಪ್ರದೇಶದ ಮುಖ್ಯಮಂತ್ರಿಗಳು ಬಂದು ತಮ್ಮ ರಾಜ್ಯದ ಆಸ್ಪತ್ರೆಗಳಿಂದ ಕೇರಳ ಪಾಟ ಕಲಿಯಬೇಕು ಎಂದು ಹೇಳಿದಾಗ #ಕ್ನಪ್ಪನ್‌ಯೋಗಿ(ಕ್ನಪ್ಪನ್ ಎಂಬುದು ವಸಾಹತುಶಾಹಿ ಆಳ್ವಿಕೆಯ ಕಾಲದ ಒಬ್ಬ ಬ್ರಿಟಿಶ್ ಆಧಿಕಾರಿಯ ಹೆಸರು, ಕೈಲಾಗದವ ಎಂಬುದರ ಅನ್ವರ್ಥನಾಮ).


ತೀರಾ ಇತ್ತೀಚಿನ #ಗೌಜ್‌ಡಾ ಸೇರಿದಂತೆ ಈ ಎಲ್ಲ ಹ್ಯಾಶ್ಟ್ಯಾಗ್‌ಗಳು ಬಹಳ ಜನಪ್ರಿಯವಾಗಿ ಜನರಕ್ಷಾ ಯಾತ್ರೆ ಮಲೆಯಾಳಿಗಳಿಗೆ ಮನರಂಜನೆಯ ಸಾಧನವಾಗಿ ಬಿಟ್ಟಿತು.


ಸೀತಾರಾಮ್ ಯೆಚೂರಿಯವರು ಈ ಯಾತ್ರೆ ಮುಗಿದ ನಂತರ ಟ್ವಿಟ್ ಮಾಡಿರುವಂತೆ

"ಬಿಜೆಪಿಯ ಯಾತ್ರೆ ಮತ್ತು ಹಲವು ಧೂಳೆಬ್ಬಿಸುವ ಮುಖ್ಯಮಂತ್ರಿಗಳನ್ನು ಶಾಂತಿಪ್ರಿಯ ಕೇರಳಕ್ಕೆ ಕರೆತಂದದ್ದು ಉದ್ರೇಕಿಸಲಿಕ್ಕಾಗಿಯೇ ರೂಪಿಸಿದಂತದ್ದು. ಅದು ವಿಫಲವಾಗಿದೆ.

ಲಾಲ್ ಸಲಾಮ್ ಕೇರಳ."

ಗೌಜ್‌ಡಾ ದ ಎರಡು ವ್ಯಂಗ್ಯಫೋಟೋಗಳು





ಅಮೆರಿಕ ಭಯೋತ್ಪಾದಕ ರಾಷ್ಟ್ರ ಲಾಸ್ ವೇಗಾಸ್ ಶೂಟ್‌ಔಟ್‌ನಿಂದ ಸಾಬೀತು

ಜಗದ ಸುತ್ತ

ನಾಗರಾಜ ನಂಜುಂಡಯ್ಯ



ಲಾಸ್ ವೇಗಾಸ್ ಶೂಟೌಟ್ ನಿಂದಾಗಿ ಉದ್ಭವಗೊಂಡಿರುವ ಪ್ರಶ್ನೆಗಳಿಗೆ ಅಮೆರಿಕದ ಆಡಳಿತದಿಂದ ಸರಿಯಾದ ಉತ್ತರ ಮಾತ್ರ ಸಿಗುವುದಿಲ್ಲ. ಏಕೆಂದರೆ, ವಿದೇಶಗಳಲ್ಲಿ ಬೇಕಾಬಿಟ್ಟಿ ಮಿಲಿಟರಿ ದಾಳಿ ಮಾಡಿ ನಾಶ ಮಾಡುವ ಮಾನಸಿಕತೆ ಆ ದೇಶದ ಜನರನ್ನು ತಟ್ಟದೆ ಇದ್ದೀತೇ? ಅಮೆರಿಕದ ಆಕ್ರಮಣಗಳಿಗೆ ತುತ್ತಾದ ಹಲವು ರಾಷ್ಟ್ರಗಳು ನಮ್ಮ ಕಣ್ಮುಂದೆ ಇವೆ. ಗ್ರಾಮಗಳಲ್ಲಿನ ಜನರ ರಕ್ಷಣೆ ಮಾಡುವ ನೆಪದಲ್ಲಿ, ತಮ್ಮ ಸೈನಿಕರು ಕೊಂದ ಜನರ ಸಂಖ್ಯೆಗೆ ಲೆಕ್ಕವೇ ಇಲ್ಲವೆಂದು ಅದಕ್ಕೆ ಗೊತ್ತಿದೆ.

ಅಮೆರಿಕಾದ ಲಾಸ್ ವೆಗಾಸ್‌ನಲ್ಲಿ 64 ವರ್ಷದ ಏಕೈಕ ಬಂದೂಕು ದಾರಿ ಸ್ಟಿಫನ್ ಪ್ಯಾಡಾಕ್ ಸಾಮೂಹಿಕ ಗುಂಡಿನ ಮಳೆಗೈದ ಪರಿಣಾಮ 59 ಮಂದಿ ನಾಗರಿಕರು ಸಾವನ್ನಪ್ಪಿ 527 ಮಂದಿ ಗಾಯಗೊಂಡಿರುವುದು ಜಗತ್ತಿನಾದ್ಯಂತ ಅನೇಕ ಗಂಭೀರ ಪ್ರಶ್ನೆಗಳನ್ನು ಹುಟ್ಟು ಹಾಕಿದೆ.

ಸ್ಟಿಫನ್ ಪ್ಯಾಡಕ್‌ನನ್ನು–ಅಮೇರಿಕದ ಆಡಳಿತವಾಗಲಿ ಅಥವಾ ಅಲ್ಲಿನ ಪೊಲೀಸ್ ಆಗಲಿ ಇವನೊಬ್ಬ ಭಯೋತ್ಪಾದಕನೆಂದು ಪರಿಗಣಿಸದಿರುವುದು ಏಕೆ? ಅಮೆರಿಕದಲ್ಲಿ ನಡೆಯುವ ಬಂದೂಕು ದಾಳಿಯ ಹಿಂಸೆಗಳು ಪ್ರಪಂಚದ ಇನ್ನಿತರೆ ದೇಶಗಳಲ್ಲಿ ನಡೆಯುವ ದಾಳಿಗಳಿಗಿಂತ ತುಂಬ ಹೆಚ್ಚಾಗಿರುತ್ತವೆ ಏಕೆ? ಬೇರೆ ದೇಶಗಳಲ್ಲಿ ನಡೆಯುವ ಹಿಂಸೆಗಳಿಗೂ ಇದಕ್ಕೂ ಸಂಬಂಧವಿರಬಹುದೆ? ಅಥವಾ ಹಿಂಸಾಚಾರವನ್ನು ಬಂದೂಕು ಮೂಲಕ ಸುಲಭವಾಗಿ ನಡೆಸುವ ಸಲುವಾಗಿ ಉತ್ತೇಜಿಸುವ ಉದ್ದೇಶ ಹೊಂದಿರಬಹುದೆ? ಅಥವಾ ಅಂತರರಾಷ್ಟ್ರೀಯ ಸಮಸ್ಯೆಗಳನ್ನು 'ಪರಿಹರಿಸುವ' ನಿಟ್ಟಿನಲ್ಲಿ ಇದು ಅಮೆರಿಕದ ಹೊಸ ವಿಧಾನವಾಗಿರ ಬಹುದೆ? ಹೀಗೆ ಹತ್ತು ಹಲವು ಬಗೆಯ ಪ್ರಶ್ನೆಗಳು ಈ ದಾಳಿಯಿಂದ ಉದ್ಭವಗೊಂಡಿರುವುದಂತೂ ನಿಜ. ಭಯೋತ್ಪಾದಕತೆಯನ್ನು ಅಮೆರಿಕಾವೇ ಪೋಷಣೆ ಮಾಡುತ್ತಿರಬಹುದು ಎಂಬ ಅನುಮಾನ ಕಾಡುತ್ತಿರುವುದು ಅತಿಶಯೋಕ್ತಿಯಲ್ಲ.

ಬಿಳಿಯರು ಭಯೋತ್ಪಾದಕರಾಗಲೂ ಸಾಧ್ಯವಿಲ್ಲ !

ಅಮೆರಿಕದ ಪ್ರಕಾರ ಭಯೋತ್ಪಾದಕರು ಯಾ–ರೆಂದು ನೋಡೋಣ. ಅಧ್ಯಕ್ಷ ಟ್ರಂಪ್‌ರಿಂದ ಮೊದಲುಗೊಂಡು, ಕೆಳಗಿನ ಯಾವುದೇ ಬಿಳಿಯ ವ್ಯಕ್ತಿಯನ್ನು ಭಯೋತಾದ್ಪಕನೆಂದು ಹೆಸರಿಸಲು ಅಮೆರಿಕ ಇಷ್ಟ ಪಡುವುದಿಲ್ಲ. ಅವನು ಒಬ್ಬ ವ್ಯಕ್ತಿಯಾಗಿ ಎಷ್ಟೇ ನರಹತ್ಯೆ ನಡೆಸಿದ್ದರೂ ಸಹ ಯಾವುದೇ ಶ್ವೇತ(ಬಿಳಿಯ) ಬಣ್ಣದ ಚರ್ಮದವನು ಮಾತ್ರ ಭಯೋತ್ಪಾದಕನಾಗಲು ಸಾಧ್ಯವೆ ಇಲ್ಲ. ಏಕೆಂದರೆ, ಅಲ್ಲಿನ ರಾಜಕೀಯ ನಂಬಿಕೆಗಳ ವಿರುದ್ಧ ಬಿಳಿಯರು ವರ್ತಿಸುವುದಿಲ್ಲ, ಹಾಗೇನಾದರೂ ವರ್ತಿಸಿದ್ದರೆ ಅಂತಹವರು ಮಾನಸಿಕವಾಗಿ ತೊಂದರೆಗೊಳಗಾಗಿರಬೇಕು. ಯಾವುದೇ ರೀತಿಯ ಹಿಂಸಾಚಾರ – ನರಹತ್ಯೆ ಮಾಡಿದಾಗ್ಯೂ ಆರೋಪಿಯೆಂದು ಪರಿಗಣಿಸುವ ಪದ್ಧತಿ ಅಮೆರಿಕದಲ್ಲಿ ಇಲ್ಲವೆಂದು, ಈ ಪ್ರಕರಣವು ಕೂಡ ಸಾಬೀತು ಪಡಿಸಿದೆ. ಈ ಹಿಂದೆಯೂ ಸಹ ಒಬ್ಬ ಬಿಳಿಯರ "ಪರಮಾಧಿಕಾರಗಳಲ್ಲಿ" ನಂಬಿಕೆಗಳನ್ನು ಹೊಂದಿದ್ದ ವ್ಯಕ್ತಿ, ದಕ್ಷಿಣ ಕರೊಲಿನಾದ ಚಾರ್ಲ್ಸ್‌ಟಾನ್ ನಲ್ಲಿನ ಕರಿಯ ಚರ್ಚ್ ನೊಳಗೆ ನುಗ್ಗಿ 12 ಜನರ ಮೇಲೆ ಗುಂಡು ಹಾರಿಸಿ, 9 ಜನರನ್ನು ಕೊಂದಾಗಲೂ ಸಹ ಆತ ಭಯೋತ್ಪಾದಕನಲ್ಲವೆಂದು ಬಿಟ್ಟಿದ್ದರು. ಇಂತಹ ಹಲವು ಘಟನೆಗಳನ್ನು ಉದಾಹರಣೆ ಕೊಡಬಹುದು.

ಹತ್ಯೆ ಮಾಡಿದವನು ಮುಸ್ಲಿಮನಾಗಿದ್ದರೆ ಮಾನಸಿಕವಾಗಿ ನಿಜವಾಗಲೂ ತೊಂದರೆಗೀಡಾಗಿದ್ದರೂ ಅಥವಾ ಇಲ್ಲದಿದ್ದರೂ, ಹೆಸರನ್ನು ಆಧಾರಿಸಿ ಟ್ರಂಪ್ ನಿಂದ ಮೊದಲುಗೊಂಡು ಎಲ್ಲಾ ಮಾಧ್ಯಮದವರೂ ಮುಲಾಜಿಲ್ಲದೆ ತಕ್ಷಣ ಅವನೊಬ್ಬ 'ಮುಸ್ಲಿಂ–ಭಯೋತ್ಪಾದಕ' ನೆಂದು ಪರಿಗಣಿಸುತ್ತಿದ್ದರು. ಅಂದರೆ, ಸಾಮೂಹಿಕ ಹಿಂಸಾಚಾರ ಅಥವಾ ಬಂದೂಕು ದಾರಿಯೊಬ್ಬ ಬಿಳಿಯನಲ್ಲದಿದ್ದರೆ ಮಾತ್ರ ಅಮೆರಿಕದಲ್ಲಿ 'ಭಯೋತ್ಪಾದಕ'. ಇಲ್ಲದಿದ್ದರೆ ಮಾನಸಿಕ ರೋಗಿ ಅಥವಾ ನಿರ್ದೋಷಿ?

ಮುಸ್ಲಿಂ–ದೇಶಗಳ ಮೇಲೆ ದಾಳಿಗೆ ಇಸ್ಲಾಂ–ಭೀತಿಯ ಭೂತ?

ಶೌನ್ ಕಿಂಗ್ 03 ಅಕ್ಟೋಬರ್ 2017 ರಂದು "ಇಂಟರ್ ಸೆಪ್ಟ್" ಎಂಬ ಪತ್ರಿಕೆಯ ಲೇಖನದಲ್ಲಿ "ದಿ ವೈಟ್ ಪ್ರಿವಿಲೇಜ್ ಆಫ್ ದಿ ಲೋನ್ ವೊಲ್ಫ್ ಶೂಟರ್", ಬರೆಯುತ್ತಾ "ನಾವು ಏನನ್ನು ನೋಡುತ್ತಿದ್ದೇವೆ ಎಂಬುದು ಅಕ್ಷರಶಃ ಸತ್ಯ. ಸಾಮೂಹಿಕ ಕೊಲೆಗಡುಕ ಸ್ಟಿಪನ್ ಪ್ಯಾಡಾಕ್ ನನ್ನೂ ಭಯೋತ್ಪಾದಕನೆಂದು ಕರೆಯುವುದು ಅಮೆರಿಕದ ಆಡಳಿತಕ್ಕೆ ಇಷ್ಟವಿಲ್ಲದಿರುವುದು ಅಮೇರಿಕದ ಇಬ್ಬಂದಿತನದ ನೀತಿ. ಬೇರೆ ಯಾರೇ ಆದರೂ ಇಂತಹ ಕೃತ್ಯವೆಸಗಿದ್ದರೆ, ಸಾರ್ವಜನಿಕರ ಕೋಪ–ತಾಪಕ್ಕೆ ತುತ್ತಾಗುತ್ತಿದ್ದರು. ಇದರಿಂದಾಗಿ, ಇಷ್ಟೊಂದು ಬಿಳಿಯರು ಸಾಮೂಹಿಕ ಹತ್ಯೆಗಳಲ್ಲಿ ಏಕೆ ತೊಡಗಿದ್ದಾರೆ ಎಂದು ಕೇಳಲು ಮತ್ತು ಆ ಬಗ್ಗೆ ಪ್ರಾಮಾಣಿಕ ಚರ್ಚೆ ಮಾಡಲು ನಮ್ಮ ಸಮಾಜಕ್ಕೆ ಸಾಧ್ಯವಾಗುತ್ತಿಲ್ಲ" ಎಂದು ಹೇಳಿದ್ದಾರೆ.

ಬಿಳಿಯರಲ್ಲದವರ ಮೇಲೆ, ನಿರ್ದಿಷ್ಟವಾಗಿ ಇಸ್ಲಾಂ–ಭೀತಿಯ ಭೂತದ ಆಧಾರದಲ್ಲಿ ಬಣ್ಣಗಳ ಆಧಾರದಲ್ಲಿ ಭಯೋತ್ಪಾದಕರೆಂದು ಹೆಸರಿಸುವುದು ಅಮೆರಿಕದ ಆಡಳಿತದ ಸರ್ವೇ ಸಾಮಾನ್ಯ ನೀತಿಯಾಗಿದೆ. ಇದನ್ನು ಬಳಸಿ ಮುಸ್ಲಿಂ ಬಹುಸಂಖ್ಯಾತ ದೇಶಗಳ ಮೇಲೆ ದಾಳಿ ಮಾಡುವುದು ಸುಲಭವಾಗಿಸಲು ಹೀಗೆ ಮಾಡಲಾಗುತ್ತಿದೆಯೇ? ಇಸ್ಲಾಂ–ಭೀತಿಯ ಇಂತಹ ಆಕ್ರಮಣಕಾರಿ ನೀತಿಗಳಿಗೆ ಅಮೆರಿಕದ ಬಿಳಿಯ ನಾಗರಿಕರ ಬೆಂಬಲ ಸುಲಭವಾಗಿಸುತ್ತದೆಯೇ? ಎಂದು ಜಗತ್ತಿನ ಇತರೆ ದೇಶಗಳ ನಾಗರಿಕರಿಗೆ ಕಾಡುತ್ತಿರುವ ಪ್ರಶ್ನೆ.

ಇಸ್ಲಾಮಿಕ್ ಸ್ಟೇಟ್ ಭಯೋತ್ಪಾದಕರನ್ನು ಪೂರ್ಣವಾಗಿ ನಾಶ ಮಾಡುವ ಹೆಸರಲ್ಲಿ ಅಮೆರಿಕದ ಮಿಲಿಟರಿ ಈಗ ಯುದ್ಧವನ್ನು ಸಿರಿಯಾಕ್ಕೆ ವಿಸ್ತರಿಸಿದೆ. ಇದು ಇರಾಕ್ ಯುದ್ಧದ ಮೂರನೇ ಮತ್ತು ಮಧ್ಯಪ್ರಾಚ್ಯ ಯುದ್ಧದ 12ನೇ ಆವೃತ್ತಿ. 1980ರ ನಂತರ ಸಿರಿಯಾ ವಿವಿಧ ನೆಪಗಳಲ್ಲಿ ಅಮೆರಿಕನ್ ದಾಳಿಗೆ ಗುರಿಯಾಗುತ್ತಿರುವ 12ನೇ ಮುಸ್ಲಿಂ ದೇಶ ಎಂಬುದು ಇದರರ್ಥ, ಎಂದು ಇತ್ತೀಚೆಗೆ ಅಮೆರಿಕದ ಮಿಲಿಟರಿ ಇತಿಹಾಸಕಾರೊಬ್ಬರು ಲೇಖನವೊಂದರಲ್ಲಿ ಹೇಳುತ್ತಾರೆ. ಇದು ಮತ್ತು ಮೇಲೆ ಹೇಳಿದ ಪ್ರಶ್ನೆಗಳನ್ನು ಒಟ್ಟಿಗೆ ಇಟ್ಟು ನೋಡಿದರೆ ಇಸ್ಲಾಂ–ಭೀತಿಯ ಭೂತವನ್ನು ಅಮೆರಿಕನ್ ಸರಕಾರ ತನ್ನ ಮಿಲಿಟರಿ–ವಿದೇಶಾಂಗ ನೀತಿಗೆ ಜನರ ಬೆಂಬಲ ಪಡೆಯಲು ಬಳಸುತ್ತಿದೆಯೇ ಎಂಬ ಬಲವಾದ ಅನುಮಾನಕ್ಕೆ ಕಾರಣವಾಗುತ್ತದೆ.

ಶೂಟೌಟ್ ರಾಜಕೀಯ ಹುನ್ನಾರವೆ?

ಶೂಟೌಟ್ ಹಿಂಸಾಚಾರದ ಬಗ್ಗೆ ನಾವು ಆಗಾಗ ಕೇಳಿದರೂ, ಶೂಟೌಟ್ ಹಿಂಸಾಚಾರದ ಸಮಸ್ಯೆಯ ಆಳ–ಅಗಲಗಳ ಬಗ್ಗೆ ಮತ್ತು ಗನ್ ವಿವಾದದ ಬಗ್ಗೆ ಕೇಳುವುದಿಲ್ಲ. ಅಥವಾ ಇದಕ್ಕೆ ಸಂಭಂಧಪಟ್ಟ ರಾಜಕೀಯ ವಾಗ್ವಾದಗಳ ಬಗ್ಗೆ ಕೇಳುವುದಿಲ್ಲ. ಮಿಲಿಟರಿ ಗ್ರೇಡ್ ಶಸ್ತ್ರಗಳೂ ಸೇರಿದಂತೆ ಗನ್ ಹೊಂದುವ ಹಕ್ಕಿನ ಬಗ್ಗೆ ವಾದ ಮಾಡುವವರ ಜನಾಂಗೀಯ–ಉಗ್ರ ಬಲಪಂಥೀಯ ರಾಜಕೀಯ ನಂಬಿಕೆಗಳಿಗೂ ಅದಕ್ಕೆ ಇರುವ ಸಂಬಂಧಗಳ ಬಗ್ಗೆ ಕೇಳುವುದಿಲ್ಲ.

ಅಮೆರಿಕಾದಲ್ಲಿ ಶೂಟೌಟ್ ಹಿಂಸಾಚಾರಕ್ಕೇನು ಕಡಿಮೆ ಇಲ್ಲ. ಅಂಕಿ–ಅಂಶಗಳೇ ಇವುಗಳನ್ನು ಸಾಬೀತು ಪಡಿಸಬಲ್ಲವು. ಕಳೆದ ಒಂದು ವರ್ಷದಲ್ಲಿಯೇ ಸುಮಾರು 273 ಸಾಮೂಹಿಕ ಗುಂಡಿನ ದಾಳಿಗಳು ನಡೆದಿವೆ. ಸಾವಿನ ಸಂಖ್ಯೆ 11,754 ದಾಟಿವೆ ಎಂದು ಅಂದಾಜಿಸಲಾಗಿದೆ.

ಶೂಟೌಟ್ ಗೆ ಒಂದು ಲಕ್ಷ ಜನರಲ್ಲಿ 10.2 ಜನ ಬಲಿಯಾಗುತ್ತಿದ್ದಾರೆ. ಇದು ಜರ್ಮನಿಗಿಂತ 10 ಪಟ್ಟು ಹೆಚ್ಚಾಗಿದ್ದು, ಭಾರತಕ್ಕಿಂತ 50 ಪಟ್ಟು ಹೆಚ್ಚಾಗಿದೆ. ಆಂತರಿಕ ಯುದ್ಧ ನಡೆಯುತ್ತಿರುವ ದೇಶಗಳನ್ನು ಬಿಟ್ಟರೆ ಜಗತ್ತಿನಲ್ಲೇ ಅತಿ ಹೆಚ್ಚು. ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳ ಪೈಕಿ ಅಮೆರಿಕವು ಅತಿ 'ಹೆಚ್ಚು ಹಿಂಸಾಚಾರದಿಂದ ಕೂಡಿದ' ರಾಷ್ಟ್ರವೆಂದು ಪರಿಗಣಿಸಲ್ಪಡುತ್ತದೆ. ಇದಲ್ಲದೆ, ಯಾವುದೇ ಒಂದು ದೇಶಕ್ಕಿಂತಲು ಹೆಚ್ಚಿನ ಸಂ–ಖ್ಯೆಯ ತಲಾ ಬಂದೂಕುಗಳನ್ನು ಹೊಂದಿರುವ ರಾಷ್ಟ್ರವೂ ಆಗಿದೆ. ಜಗತ್ತಿನ ಕೇವಲ ಶೇ. 4.4 ಜನಸಂಖ್ಯೆ ಹೊಂದಿರುವ ಅಮೆರಿಕದ ಜನ, ಜಗತ್ತಿನಲ್ಲಿ ನಾಗರಿಕರ ಬಳಿ ಇರುವ ಶಸ್ತ್ರಾಸ್ತ್ರಗಳ ಶೆ. 42ರಷ್ಟನ್ನು ಹೊಂದಿದ್ದಾರೆ.

ಲಾಸ್ ವೆಗಾಸ್ ಶೂಟಿಂಗ್ ಪ್ರಕರಣ ಬಂದೂಕು ತಯಾರಿ ಕಂಪನಿಗಳ ಶೇರು ಬೆಲೆ ಏರಿಕೆಗೆ ಕಾರಣವಾಗಿದೆ. ಒಂದು ಶೂಟೌಟ್ ಪ್ರಕರಣ ನಡೆದರೆ ಅಲ್ಲಿನ ನಾಗರೀಕರು ಹೆಚ್ಚು–ಹೆಚ್ಚು ವಿಧ–ವಿಧವಾದ ಬಂದೂಕುಗಳನ್ನು ಖರೀದಿಸಲು ಮುಂದಾಗುತ್ತಾರಂತೆ. ಆಕ್ರಮಣಕಾರಿ ಬಂದೂಕುಗಳು ಮತ್ತು ಅರೆ ಸ್ವ–ಯಂ–ಚಾಲಿತ ಬಂದೂಕುಗಳನ್ನು ನಾಗರೀಕರು ಖರೀದಿಸುವುದು ಏಕೆ ಎಂಬುದು ಕನಿಷ್ಟ ಇತರ ದೇಶಗಳವರಿಗೆ ಅರ್ಥವಾಗದ ವಿಷಯ.

ಸ್ಟಿಪನ್ ಪ್ಯಾಡಕ್ ಸುಮಾರು ಸಾವಿರ ಗುಂಡುಗಳನ್ನು 9 ರಿಂದ 11 ನಿಮಿಷಗಳ ಕಾಲಾವಧಿಯಲ್ಲಿ ಹಾರಿಸಲು ಸಾಧ್ಯವಾಯಿತೆಂದರೆ, ಅವನು ಅಕ್ರಮವಾಗಿ ಸ್ವಯಂ–ಚಾಲಿತ ಶಸ್ತ್ರಾಸ್ತಗಳನ್ನು ಹೊಂದಿದ್ದ ಎಂದು ಗೊತ್ತಾಗಿದೆ. 1986 ಕ್ಕಿಂತ ಮುಂಚೆ ಅವುಗಳ ಮೇಲೆ ಬಿಗಿಯಾದ ನಿಬಂಧನೆಗಳನ್ನು ಹೊಂದಿತ್ತು. ಆದಾಗ್ಯೂ, ಅರೆ–ಸ್ವಯಂ ಚಾಲಿತ ಶಸ್ತ್ರಾಸ್ತ್ರಗಳನ್ನು ಸರಳ ಸೇರ್ಪಡೆಗಳೊಂದಿಗೆ ಸಂಪೂರ್ಣ ಚಾಲಿತ ಬಂದೂಕಾಗಿ ಬದಲಾಯಿಸಲು ಇದೀಗ ನಿಯಂತ್ರಣಗಳನ್ನು ಸಡಿಲಿಸಲಾದ ಕಾರಣ, ನಾಗರಿಕರು ಈ ಬಂದೂಕು ಹೊಂದಲು ಸಾಧ್ಯವಾಗಿದೆ ಎಂದೆನಿಸುತ್ತದೆ. ಬಂಪ್–ಸ್ಟಾಕ್ ಎಂದು ಕರೆಯಲ್ಪಡುವ ಸಾಧನಗಳಿಂದ ಅರೆ–ಸ್ವಯಂ ಚಾಲಿತ ಗನ್ ಗಳನ್ನು ಸ್ವಯಂ ಚಾಲಿತ ಗನ್ ಆಗಿ ಪರಿವರ್ತಿಸಬಹುದು. ಇಲ್ಲಿ ಗುಂಡು ಹಾರಿಸುವ ವ್ಯಕ್ತಿಯು ಒಮ್ಮೆ ಮಾತ್ರ ಟ್ರಿಗರನ್ನು ಎಳೆಯುತ್ತಾನೆ. ಅಂತಹ ಒಂದು ಸಾಧನದೊಂದಿಗೆ ಸುಮಾರು 100 ಗುಂಡುಗಳನ್ನು ನಿಯಂತಕಾಲಿಗಳು 12–15 ಸೆಕೆಂಡುಗಳಲ್ಲಿ ಹೊಡೆಯುತ್ತವೆ.


ಪ್ಯಾಡಕ್ ತನ್ನ ಹೋಟೆಲ್ ಕೋಣೆಯಲ್ಲಿ ಇಂತಹ 23 ಆಯುಧಗಳನ್ನು ಹೊಂದಿದ್ದು ಕೆಲವು ಅಂತಹ ಬಂಪ್–ಸ್ಟಾಕ್ ಗಳೊಂದಿಗೆ ಅಳವಡಿಸಲಾಗಿದ್ದವು ಎಂದು ವರದಿಯಾಗಿದೆ. 22,000 ಜನರು ಪ್ಯಾಕ್ ಆಗಿದ್ದ ಪ್ರೇಕ್ಷಕರ ಕಡೆ ಗುಂಡು ಹಾರಿಸಿದ್ದು, ಅವನು ಯಾವುದೇ ನಿರ್ದಿಷ್ಟ ಗುರಿ ಹೊಂದಿರಲಿಲ್ಲ. ಟ್ರಿಗರನ್ನು ಎಳೆದಿರುತ್ತಾನೆ ಅಷ್ಟೇ, ಉಳಿದಂತೆ ಬಂದೂಕು ಎಲ್ಲ ಕಾರ್ಯವನ್ನೂ ನಿರ್ವಹಿಸಿರುತ್ತದೆ. ನಿರಂತರವಾಗಿ ಗುಂಡಿನ ಸುರಿಮಳೆಯಾಗುತ್ತದೆ. ಇದು 59 ಮಂದಿಯನ್ನೂ ಬಲಿ ತೆಗೆದುಕೊಂಡಿದೆ. ಉಳಿದಂತೆ ಕಾಲ್ತುಳಿತದಿಂದಾಗಿ 527 ಮಂದಿಗಿಂತ ಹೆಚ್ಚು ಗಾಯಾಳಾಗಿದ್ದಾರೆ.

ಈಗಾಗಲೇ ಹೇಳಿದ ಹಾಗೆ ಗನ್–ಒಡೆತನದ ಪರ ವಾದ ಮಾಡುವವರು ಜನಾಂಗೀಯ ಮತ್ತು ಬಿಳಿಯರ–ಅಧಿಪತ್ಯದ ಸಿದ್ಧಾಂತಕ್ಕೆ ಬೆಂಬಲಿಸುವವರು. ಇಂತಹವರ ಬೆಂಬಲದಿಂದಲೇ ಟ್ರಂಪ್ ಅಧಿಕಾರಕ್ಕೆ ಬಂದಿರುವುದು. ಮೈಕೇಲ್ ಮೂರ್ ಶೂಟೌಟ್ ಹಿಂಸಾಚಾರದ ಬಗ್ಗೆ ಮಾಡಿದ ಫಿಲಂನಲ್ಲಿ, ಇದರ ಹಿಂದೆ ಇರುವುದು ಬರಿಯ ಸುಲಭವಾಗಿ ಸಿಗುವ ಗನ್ ಮಾತ್ರವಲ್ಲ. ಕರಿಯರಿಗೆ ಸಿಕ್ಕಿದ ನಾಗರಿಕ ಹಕ್ಕುಗಳಿಗೆ ಇರುವ ಹಿಂಸಾತ್ಮಕ ವಿರೋಧ ಎನ್ನುತ್ತಾರೆ.

ಈ ಶೂಟೌಟ್ ನಿಂದಾಗಿ ಉದ್ಭವಗೊಂಡಿರುವ ಪ್ರಶ್ನೆಗಳಿಗೆ ಅಮೆರಿಕದ ಆಡಳಿತದಿಂದ ಸರಿಯಾದ ಉತ್ತರ ಮಾತ್ರ ಸಿಗುವುದಿಲ್ಲ. ಏಕೆಂದರೆ, ವಿದೇಶಗಳಲ್ಲಿ ಬೇಕಾಬಿಟ್ಟಿ ಮಿಲಿಟರಿ ದಾಳಿ ಮಾಡಿ ನಾಶ ಮಾಡುವ ಮಾನಸಿಕತೆ ಆ ದೇಶದ ಜನರನ್ನು ಅದು ತಟ್ಟದೆ ಇದ್ದೀತೇ? ಅಮೆರಿಕದ ಆಕ್ರಮಣಗಳಿಗೆ ತುತ್ತಾದ ಹಲವು ರಾಷ್ಟ್ರಗಳು ನಮ್ಮ ಕಣ್ಮುಂದೆ ಇವೆ. ಗ್ರಾಮಗಳಲ್ಲಿನ ಜನರ ರಕ್ಷಣೆ ಮಾಡುವ ನೆಪದಲ್ಲಿ, ತಮ್ಮ ಸೈನಿಕರು ಕೊಂದ ಜನರ ಸಂಖ್ಯೆಗೆ ಲೆಕ್ಕವೇ ಇಲ್ಲವೆಂದು ಅದಕ್ಕೆ ಗೊತ್ತಿದೆ.

ಇರಾಕ್, ಇರಾನ್, ಲಿಬಿಯಾ, ಸಿರಿಯಾ ಹೀಗೆ ಹೆಸರಿಸಿದರೆ ಇನ್ನು ಹತ್ತಾರು ದೇಶಗಳು ಇಂತಹ ಆಕ್ರಮಣಗಳಿಗೆ ತುತ್ತಾಗಿವೆ. ಮೊಸುಲ್ ಅಥವಾ ರಾಖ್ಖದ ಬಹುತೇಕ ಪ್ರದೇಶಗಳನ್ನು ಮಿಲಿಟರಿ ಬಾಂಬುಗಳಿಂದ ನಾಶಗೊಳಿಸಲಾಗಿದೆ. ಇವೆಲ್ಲಾ ದಾಳಿಗಳು ಮತ್ತು ಶೂಟೌಟ್ ಪ್ರಕರಣಗಳ ಹಿಂದಿರುವ ಮಾನಸಿಕತೆ (ಬೇಕಾಬಿಟ್ಟಿ ಆಕ್ರಮಣ, ಗುಂಪುಹತ್ಯೆ) ಎರಡೂ ಒಂದೇ ಅಲ್ಲವೇ?

ಒಬ್ಬ ವ್ಯಕ್ತಿಯ ರೋಗ ಲಕ್ಷಣಗಳು ನಮಗೆ ಅರ್ಥವಾಗದೆ ಇರಬಹುದು. ಸಂಖ್ಯಾಶಾಸ್ತ್ರೀಯವಾಗಿ ವ್ಯಕ್ತಿಗಳನ್ನು ವಿಶ್ಲೇಷಿಸಲು ಸಾಧ್ಯವಿಲ್ಲದಿರಬಹುದು. ಆದರೆ ಸಾಮೂಹಿಕವಾಗಿ ವಿಶ್ಲೇಷಣೆ ಮಾಡಿದಾಗ ಖಂಡಿತ ಸರಿಯಾಗಿ ಅರ್ಥಮಾಡಿಕೊಳ್ಳಬಹುದು. ಅಮೆರಿಕದ ಪ್ರಭುತ್ವ ವಿಶ್ವದಲ್ಲೇ ಮೊದಲ ಭಯೋತ್ಪಾದಕ ಮಾನಸಿಕತೆ ಹೊಂದಿದ ಪ್ರಭುತ್ವ. ಅದರ ಹಲವು ವಿದೇಶೀ ಯುದ್ಧಗಳಿಗೂ ಮತ್ತು ದೇಶೀಯ ಶೂಟೌಟ್ ಗಳಿಗೂ ಮಾನಸಿಕತೆಯಲ್ಲಿ ಯಾವ ವ್ಯತ್ಯಾಸವಿದೆ? •



JANASHAKTHI KANNADA VARA PATRIKE OCTOBER 23-29, 2017 Price: Rs. 10/- Date of Publication: 20 OCTOBER 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಭಯ ಮುಕ್ತ ಕರ್ನಾಟಕಕ್ಕಾಗಿ ಜನವರಿ 30 ಮಾನವ ಸರಪಳಿ ಮಲ್ಲಿಗೆಯ ಊರು ಭಟ್ಕಳದಲ್ಲಿ ಸೌಹಾರ್ದಕ್ಕಾಗಿ ಕರ್ನಾಟಕ ಸಮಾವೇಶ

"ಸಮೃದ್ಧಿ ಹಸಿರು ಕಾಡಿಗೆ ಯಾರೋ ಬೆಂಕಿ ಹಚ್ಚಿದ್ದರು. ಹಲವರು ನಂದಿಸದೇ ಹೋಗುತ್ತಿದ್ದರು. ಕೆಲವರು ಅಸಹಾಯಕತೆಯಿಂದಿದ್ದರು. ಆದರೆ ಅದನ್ನು ನಂದಿಸಲು ಪುಟ್ಟ ಹಕ್ಕಿಯೊಂದು ಕೊಕ್ಕಿನಲ್ಲಿ ಹನಿ ನೀರು ತರುತ್ತಿತ್ತು. ಇದನ್ನು ನೋಡಿದ ಉಳಿದವರು ಈ ಬೃಹತ್ ಬೆಂಕಿ ನಂದಿಸಲು ಈ ಹನಿ ನೀರು ಸಾಕೇ ಎಂದು ಚೇಷ್ಟೆ ಮಾಡಿದರು. ಆಗ ಆ ಹಕ್ಕಿ ಹೇಳಿತು ನಾವು ಜಗವ ಸುಡುವ ಬೆಂಕಿ ಹಚ್ಚುವ ಮತ್ತು ಹಚ್ಚುವವರ ಸಾಲಿನಲ್ಲಿ ನಿಲ್ಲಲಾರೆ; ಅದನ್ನು ನಂದಿಸುವ ಪ್ರಯತ್ನದಲ್ಲಿ ನಾನಿರುವೆ ಎಂದು ಹೇಳಿತು. ಅದರ ಮರ್ಮ ಕೇಳಿ ಉಳಿದವರು ಕೈ ಜೋಡಿಸಿದರು." ಅಂಥ ಮಾನವೀಯತೆ, ಸೌಹಾರ್ದ, ಸಹಬಾಳ್ವೆಗೆ ಜನವರಿ 30 ಹುತಾತ್ಮ ದಿನದಂದು ಕರ್ನಾಟಕದಲ್ಲಿ ಮೂರು ಭಾಗಗಳಿಂದ ಮಾನವ ಸರಪಳಿ ನಡೆಯಲಿದೆ. ಬಸವಕಲ್ಯಾಣದಿಂದ ಚಾಮರಾಜನಗರ, ಬೆಳಗಾವಿಯಿಂದ ಚಿತ್ರದುರ್ಗ ಮತ್ತು ಕಾರವಾರದಿಂದ ಕೊಡಗಿನ ವರೆಗೆ ಶಾಂತಿ ಸೌಹಾರ್ದ ಪ್ರಿಯ ಜನತೆ ಮಾನವ ಸರಪಳಿ ನಿರ್ಮಿಸಲಿದ್ದು ಅದರ ಯಶಸ್ವಿಗಾಗಿ ಸೌಹಾರ್ದ ಕರ್ನಾಟಕ ಸಮಾಲೋಚನಾ ಸಭೆ ನಡೆಯಿತು.



ಭಯಮುಕ್ತ ಸೌಹಾರ್ದ ಕರ್ನಾಟಕಕ್ಕಾಗಿ ಶಾಂತಿ, ಸಾಮರಸ್ಯದ ನವ ಕರ್ನಾಟಕ ನಿರ್ಮಾಣವೊಂದೇ ದಾರಿ. 2014 ರ ಚುನಾವಣೆಯ ನಂತರ ಜನರ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವ ಪ್ರಯತ್ನ ಭರದಿಂದ ಸಾಗಿದೆ. ಈ ಕೇಂದ್ರ ಸರ್ಕಾರ ಸಂವಿಧಾನ ರೀತಿಯಲ್ಲಿ ಪ್ರಜಾಪ್ರಭುತ್ವ ನೀತಿಯಲ್ಲಿ ವಿಶ್ವಾಸವಿಟ್ಟಿಲ್ಲ. ವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕು ಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಆಡಲಿತಾರೂಡ ಮುಖ್ಯಸ್ಥರೇ ಸಕ್ರಿಯರಾಗಿದ್ದಾರೆ. ಅದರ ಭಾಗವಾಗಿಯೇ ಪ್ರಧಾನಿ ನರೇಂದ್ರ ಮೋದಿಯವರನ್ನು ಟೀಕಿಸಿದ ವಿಮರ್ಶಿಸಿದ ಕಾರಣಕ್ಕಾಗಿ ಅಂಥವರನ್ನು ದೇಶದ್ರೋಹಿಗಳು ಎನ್ನುವ ಹಣೆ ಪಟ್ಟಿ ಹಚ್ಚಲಾಗುತ್ತಿದೆ.

ಈ ದೇಶದಲ್ಲಿ ಶಂಕರಾಚಾರ್ಯ, ಮಧ್ವಾಚಾರ್ಯರಷ್ಟೇ ಅಲ್ಲ ಚಾರ್ವಾಕರಿಗೂ ನೆಲೆ ಕೊಟ್ಟಿದೆ. ಪ್ರಶ್ನಿಸುವ ಜನರ ಬಾಯಿ ಮುಚ್ಚಿಸುವದು ಹಿಟ್ಲರ್ ನ ಫ್ಯಾಸಿಜಂ ಸ್ವರೂಪವಾಗಿದ್ದು ವಿಭಿನ್ನ ಸಂಸ್ಕೃತಿ, ಹಲವು ಭಾಷೆ, ಸಾವಿರಾರು ಜಾತಿ, ಬಹುಧರ್ಮಗಳ ಭಾರತದ ಪರಿಕಲ್ಪನೆಗೆ ಅಪಾಯಬಂದೊದಗಿದೆ. ಏಕ ರೂಪದ ಆಹಾರ ಪದ್ಧತಿಯನ್ನು ಹೇರುವ ಹುನ್ನಾರ ನಡೆದಿದೆ. ಸರ್ವರನ್ನು ನಾಶ ಮಾಡುವ ಸಂಘಟನೆಯೊಂದು ಇಲ್ಲಿ ಕೆಲಸಮಾಡುತ್ತಿದೆ. ಗಡ್ಡ ಬಿಟ್ಟವರನ್ನು ಭಯೋತ್ಪಾದಕ-ರೆಂದು ಬಿಂಬಿಸುವ ದುರಂತ ಈ ದೇಶದಲ್ಲಿ ಬಂದೊದಗಿದೆ. ನಾಡಿನ ಪ್ರಗತಿಪರ ಬರಹಗಾರರು, ಚಿಂತಕರು, ಮಠಾಧೀಶರುಎಲ್ಲ ಒಂದೆಡೆ ಸೇರಿ ನಾಡಿನ ಜನತೆಯ ಸೌಹಾರ್ದಗೆ ಕರೆ ಕೊಟ್ಟ 2 ಗಂಟೆಯೊಳಗೆ ಪತ್ರಕರ್ತೆ ಗೌರಿ ಲಂಕೇಶರ ಕೊಲೆ ನಡೆದು ಹೋಗಿದೆ ಎಂದರೆ ಈ ಸಮಾಜದಲ್ಲಿ ಎಂಥ ಕ್ರೌರ್ಯ ನೆಲೆಸಿದೆ ಎಂದು ಅರ್ಥವಾಗುತ್ತದೆ ಎಂದು ಮಾಜಿ ಶಾಸಕರು, ಸಿಪಿಐಎಂ ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ಖೇದದಿಂದ ಹೇಳೀದರು.

ಅವರು ಉತ್ತರ ಕನ್ನಡದ ಭಟ್ಕಳದಲ್ಲಿ ಸಂಘಟಿಸಿದ ಸೌಹಾರ್ದತೆಗಾಗಿ ಕರ್ನಾಟಕ ಜಿಲ್ಲಾ ಸಮಾವೇಶ ಹಾಗೂ ಕರಾವಳಿ ಜಿಲ್ಲೆಗಳ ಮುಖಂಡರ ಸಭೆಯಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ದೇಶದ ತುಂಬೆಲ್ಲ ಕೇವಲ ಅಪಪ್ರಚಾರ ಮಾಡಿ ಕಛೇರಿಗಳ ಮೇಲೆ ದಾಳಿ, ಭಿನ್ನಾಭಿಪ್ರಾಯ ಹೊಂದಿದವರ ಕೊಲೆ, ಹಲ್ಲೆ ನಡೆಸುವುದು ಹೆಚ್ಚಿದೆ. ರೋಗಿಗಳನ್ನು ಉಪಚರಿಸುವ ವೈದ್ಯರನ್ನು ಥಳಿಸಿದ ಸಂಸದರಿಗೆ ಕೇಂದ್ರದಲ್ಲಿ ಮಂತ್ರಿಪದವಿ ನೀಡಲಾಗಿದೆ. ಉತ್ತರ ಕನ್ನಡದಿಂದ ಆಯ್ಕೆಯಾದ ಕೇಂದ್ರ ಮಂತ್ರಿಗಳು ಹಿಂದೂಗಳ ಕೊಲೆ ನಡೆ-ಯುತ್ತೆಂದು ಬೊಬ್ಬೆ ಹಾಕುತ್ತಿದ್ದಾರೆ. ಅವರಿಗೆ ದೇಶದಲ್ಲಿರುವ ಮುಸ್ಲಿಂ, ದಲಿತ ಸಮುದಾಯದ ವ್ಯಕ್ತಿಗಳ ಕೊಲೆಯಾಗಿರುವುದು ಕಾಣಿಸುತ್ತಿಲ್ಲ. ಬಿಜೆಪಿ ಸಂಘಪರಿವಾರದವರೇ, ಮಹೇಶ ಪೂಜಾರಿ, ಹರೀಶ ಪೂಜಾರಿ, ವಿನಾಯಕ ಬಾಳಿಗಾರನ್ನು ಕೊಂದವರು ಯಾರು? ಏಕೆ ಎನ್ನುವುದನ್ನು ಯಾಕೆ ಈ ಮಂತ್ರಿಗಳು ಹೇಳುತ್ತಿಲ್ಲ. ಭಾರತವನ್ನು ಯಾರಿಗೂ ಗುತ್ತಿಗೆಗೆ ಕೊಟ್ಟಿಲ್ಲ ಎನ್ನುವದನ್ನು ಅವರು ಅರಿತುಕೊಳ್ಳಲಿ.

ದೇಶ ಭಕ್ತಿ ಎಂದರೆ ಕೇವಲ ದೇಶದಲ್ಲಿರುವ ಗುಡ್ಡ ಬೆಟ್ಟಗಳನ್ನು ಪೂಜಿಸುವುದಲ್ಲ, ಸೈನಿಕರನ್ನು ಹೊಗಳುವುದಕ್ಕೆ ಸೀಮಿತವಲ್ಲ. ದೇಶಭಕ್ತಿ ಎನ್ನುವುದು ದೇಶವಾಸಿಗಳ ಬಗೆಗಿನ ಚಿಂತನೆಗಳನ್ನು ಅವಲಂಬಿಸಿದೆ.

ಭಾರತದಲ್ಲಿ ರಾಷ್ಟ್ರೀಯತೆಯ ಪದ ಬ್ರಿಟಿಷರ ಕಾಲದಲ್ಲಿ ಉದ್ಭವಿಸಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳದೇ ಬ್ರಿಟಿಷರೊಂದಿಗೆ ಶಾಮೀಲಾಗಿದ್ದವರು ನಮಗೆ ದೇಶಭಕ್ತಿಯ ಪಾಠವನ್ನು ಹೇಳಲು ಆರಂಭಿಸಿದ್ದಾರೆ. ತಮ್ಮ ವೈಫಲ್ಯ ಮುಚ್ಚಿ ಹಾಕಲು, ದೇಶದಲ್ಲಿ ಪ್ರಗತಿಪರರು, ಕಮ್ಯುನಿಷ್ಟರ ಮೇಲೆ ದಾಳಿಯನ್ನು ಶುರುಮಾಡಿದ್ದಾರೆ. ಹಾಗೂ ಕೇರಳದಲ್ಲಿ ಜನರಕ್ಷಾ ಯಾತ್ರೆಯ ಹೆಸರಿನಲ್ಲಿ ದ್ವೇಷದ ರಾಜಕೀಯ ಮಾಡುತ್ತಿದ್ದಾರೆ. ದೇಶದಲ್ಲಿ ಎಲ್ಲ ವಿಧದಲ್ಲಿ ಅಸಮಾನತೆ ಹೆಚ್ಚುತ್ತಲೇ ಹೋಗುತ್ತಿದೆ ಎಂದರು.

ಆನತಾ ವಿದ್ಯಾಲಯದ ಪ್ರಾಂಶುಪಾಲರಾದ ಎ.ಬಿ. ರಾಮರಥ ದೇಶ ಹಾಗೂ ರಾಜ್ಯವನ್ನು ಅರಾಜಕತೆಗೆ ತಳ್ಳುವ ಗುಂಪು ಇಲ್ಲಿ ಸಕ್ರಿಯವಾಗಿದೆ. ತಮ್ಮ ಮಕ್ಕಳನ್ನು ಇಮಥ ವಿಚಾರಗಳಿಂದ ದೂರವಿರಿಸಬೇಕು. ರಾಜ್ಯದಲ್ಲಿ ವೈಚಾರಿಕ ಹತ್ಯೆಯಾಗುತ್ತಿದೆ. ಇದು ಖಂಡನೀಯ, ಮೌನವಾಗಿರುವ ಸಮಯ ಇದಲ್ಲ ಎಂದರು.

ಜೆಡಿಎಸ್ ಧುರೀಣ ಇನಾಯತುಲ್ಲಾ ಶಬಂದ್ರಿ ಮಾತನಾಡಿ ಭಟ್ಕಳವನ್ನು ಸದಾ ಸುದ್ದಿಯಲ್ಲಿಡಲು ಬಯಸುವ ಕೆಲವರಿಂದ ಆಗಾಗ ಘರ್ಷಣೆಗಳು ನಡೆಯುತ್ತಿವೆ. ಆದರೆ ನಾವು ಅದನ್ನು ತಣ್ಣಗೆ ಮಾಡಲು ಸಾಕಷ್ಟು ಶ್ರಮಿಸುತ್ತಿದ್ದೇವೆ. ಇನ್ನು ಮುಂದೆ ನಾವು ನೀವೆಲ್ಲರೂ ಸೇರಿ ಐಕ್ಯತೆಯಿಂದ ಈ ಶಾಂತಿ ಕದಡುವವರಿಗೆ ಉತ್ತರಿಸೋಣ ಎಂದರು. ಭಟ್ಕಳ ಶಿಕ್ಷಣ ಸಂಸ್ಥೆಗಳ ಹಿರಿಯರಾದ ತಲ್ಹಾ ಸಿದ್ದಿ ಬಾಪಾ ಸಾಂದರ್ಭಿಕವಾಗಿ ಮಾತನಾಡಿ, ದೇಶದ ಜನರನ್ನು ನಿರ್ಲಕ್ಷಿಸಿ ಪ್ರಗತಿ ಸಾಧ್ಯವಿಲ್ಲ. ಬಹುರಾಷ್ಟ್ರೀಯ ಕಂಪನಿಗಳ ಲಾಭಕ್ಕೆ ಅವರ ಸೌಭಾಗ್ಯಕ್ಕೆ ಜಿಎಸ್.ಟಿ ಮತ್ತು ನೋಟು ಅಮಾನ್ಯಿಕರಣವಾಗಿದೆ. ರಾಷ್ಟ್ರವೆಂದರೆ ಒಂದು ಚಿಂತನೆಯ ಅಥವಾ ಒಂದು ಧರ್ಮದ್ದಲ್ಲ. ರಾಷ್ಟ್ರದ ಅಭಿವೃದ್ಧಿ ಮುಂದೆ ಸಾಗಲು ಚಿಂತಕರು, ಸೈನಿಕರು, ವಿಜ್ಞಾನಿಗಳು, ಜನತೆ ಕೆಲಸ ಮಾಡುತ್ತಿದ್ದಾರೆ. ಬಾರತ ಎಂದೆಂದಿಗೂ ಶಾಂತಿಪ್ರಿಯವಾಗಿಯೇ ಇರುತ್ತದೆ, ಸೌಹಾರ್ದ ಕರ್ನಟಕ ಮಾನವ ಸರಪಳಿ ಯಶಸ್ವಿಗೆ ಕೆಲಸ ಮಾಡುತ್ತೇವೆ ಎಂದರು.

ಕರ್ನಾಟಕ ಪ್ರಾಂತ ರೈತ ಸಂಘದ ಶಾಂತಾರಾಮ ನಾಯಕ ಅಧ್ಯಕ್ಷತೆ ವಹಿಸಿದ್ದರು. ಕೆ. ಶಂಕರ ಉಪಸ್ಥಿತರಿದ್ದರು. ಯಮುನಾ ಗಾಂವ್ಕರ್ ಪ್ರಾಸ್ತಾವಿಕ ಮಾತನಾಡಿ ನಿರೂಪಿಸಿದರು. ಅಂಜುಮನ್ ಪದವಿ ಮಹಾವಿದ್ಯಾಲಯದ ಉಪನ್ಯಾಸಕರಾದ ಆರ್.ಎಸ್. ನಾಯಕ ಸ್ವಾಗತಿಸಿದರು. ಪತ್ರಕರ್ತರಾದ ಆರ್. ಮಾನ್ವಿ ಮಾತನಾಡಿ, ದೇಶಕೆ ಬೆಂಕಿ ಹಾಕುವವರ ಮಧ್ಯೆ ನಾವು ಬೆಂಕಿ ನಂದಿಸುವ ಕೆಲಸ ಮಾಡಬೇಕಾಗಿದೆ. ಸಮಾಜವನ್ನು ಅರಾಜಕತೆಗೆ ಕೊಂಡೊಯ್ಯುವ ಸಾಮಾಜಿಕ ಜಾಲತಾಣಗಳಲ್ಲಿ ಕೋಮುವಾದಿಗಳು ಸಕ್ರಿಯವಾಗಿದ್ದಾರೆ. ನಾವು ಇದಕ್ಕೆ ಉತ್ತರವಾಗಿ ಶಾಂತಿಯ ಸಂದೇಶವನ್ನು ರವಾನಿಸೋಣ ಎಂದರು ಹೇಳಿ ಎಲ್ಲರನ್ನು ವಂದಿಸಿದರು. ಸಭೆಯಲ್ಲಿ ಜಿಲ್ಲೆಯ ಕಾರ್ಮಿಕ, ರೈತ, ದಲಿತ, ಮಹಿಳಾ ಹಾಗೂ ಅಲ್ಪಸಂಖ್ಯಾತ ಸಂಘಟನೆಗಳ ಮುಖಂಡರು ಮತ್ತು ಸಾಹಿತಿ ಪತ್ರಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು.



ಸೇವಾಭದ್ರತೆ ಮತ್ತು ಸಮಾನ ವೇತನಕ್ಕೆ ಒತ್ತಾಯಿಸಿ ಹಾಸ್ಟೆಲ್ ಹೊರಗುತ್ತಿಗೆ ನೌಕರರ ಧರಣಿ ಸತ್ಯಾಗ್ರಹ

ವರದಿ: ಭೀಮಶೆಟ್ಟಿ ಯಂಪಳ್ಳಿ

ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಕಾಲೇಜುಗಳಲ್ಲಿ ಕಳೆದ ಹತ್ತಾರು ವರ್ಷಗಳಿಂದ ಅಡುಗೆ, ಕಾವಲು, ಸ್ವಚ್ಛತೆ, ಮುಂತಾದ ಕೆಲಸಗಳನ್ನು ಮಾಡುತ್ತಾ ಬಂದಿರುವ 'ಡಿ' ವರ್ಗದ ಹೊರಗುತ್ತಿಗೆ ನೌಕರರು ತಾವು ನಿವೃತ್ತಿ ವಯಸ್ಸು ತಲುಪುವವರೆಗೆ ಕೆಲಸ ಮಾಡಲು ಸೇವಾ ಭದ್ರತೆಯನ್ನು ಒದಗಿಸಬೇಕೆಂದೂ, ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದೂ ಹಾಗೂ ನೌಕರರ ವೇತನವನ್ನು ಗುತ್ತಿಗೆದಾರರ ಮೂಲಕ ನೀಡುವ ಬದಲು ಸಂಬಂಧ ಪಟ್ಟ ಇಲಾಖೆಗಳ ಮೂಲಕ ನೇರವಾಗಿ ನೌಕರರ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕೆಂದು ಒತ್ತಾಯಿಸಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಹೊರಗುತ್ತಿಗೆ ನೌಕರರು ಇದೇ ಅಕ್ಟೋಬರ್ 16 ರಂದು ಬೆಂಗಳೂರಿಗೆ ಆಗಮಿಸಿ, ರೈಲು ನಿಲ್ದಾಣದಿಂದ ಪ್ರತಿಭಟನಾ ಮೆರವಣಿಗೆ ನಡೆಸಿ ಸ್ವಾತಂತ್ರ್ಯ ಉದ್ಯಾನದ ಎದುರಿನ ರಸ್ತೆಗಳಲ್ಲಿ ಧರಣಿ ನಡೆಸಿ ಸರ್ಕಾರದ ಗಮನ ಸೆಳೆಯುವ ಪ್ರಯತ್ನ ಮಾಡಿದರು.



ಧರಣಿಯನ್ನು ಉದ್ಘಾಟಿಸಿ ನೌಕರರ ಸಂಘದ ಅಧ್ಯಕ್ಷ ನಿತ್ಯಾನಂದಸ್ವಾಮಿ ಮಾತನಾಡುತ್ತಾ ಸರ್ಕಾರಿ ಹಾಸ್ಟೆಲುಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ/ಹೊರಗುತ್ತಿಗೆ ನೌಕರರನ್ನು ನೇಮಕಾತಿ ನಿಯಮಾವಳಿಯನ್ನು ಸೂಕ್ತವಾಗಿ ತಿದ್ದುಪಡಿ ಮಾಡಿಯಾದರೂ ಕಾಯಂ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದರಲ್ಲದೆ ಗುತ್ತಿಗೆದಾರರ ವಂಚನೆಯಿಂದ ಮುಕ್ತಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಎಲ್ಲಾ ಹೊರಗುತ್ತಿಗೆ ನೌಕರರನ್ನು ಕಾಯಂ ಮಾಡಲು ಕಾನೂನು ಅಡ್ಡಿ ಬರುತ್ತಿದ್ದರೆ ಅವರಿಗೆ ಸೇವಾ ಭದ್ರತೆ ಹಾಗೂ ಕಾಯಂ ನೌಕರರಂತೆ ಸಮಾನ ವೇತನ ನೀಡಬೇಕೆಂದು ಆಗ್ರಹಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಭೀಮಶೆಟ್ಟಿ ಯಂಪಳ್ಳಿ ಮಾತನಾಡಿ ಸಮಾಜ ಕಲ್ಯಾಣ ಮತ್ತು ವಿಶೇಷವಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲುಗಳ ಹೊರಗುತ್ತಿಗೆ ನೌಕರರಿಗೆ ಪ್ರತಿತಿಂಗಳು ಸರಿಯಾಗಿ ವೇತನ ನೀಡದೆ ಸತಾಯಿಸುತ್ತಿರುವುದನ್ನು ಖಂಡಿಸಿದರಲ್ಲದೆ ಕ್ಷುಲ್ಲಕ/ಸುಳ್ಳು ಆರೋಪ ಹೊರಿಸಿ ಕೆಲಸದಿಂದ ತೆಗೆದು ಹಾಕಲಾದ ಎಲ್ಲಾ ಹೊರಗುತ್ತಿಗೆ ನೌಕರರಿಗೆ ಮರಳಿ ಕೆಲಸ ನೀಡಬೇಕೆಂದು ಆಗ್ರಹಿಸಿದರು, ಆರಂಭದಲ್ಲಿ ಸಂಘದ ಸಹ ಕಾರ್ಯದರ್ಶಿ ಕೆ. ಹನುಮೇಗೌಡ ಎಲ್ಲರನ್ನು ಸ್ವಾಗತಿಸಿದರು. ಎಸ್.ಎಫ್.ಐ. ರಾಜ್ಯ ಪ್ರಧಾನ ಕಾರ್ಯದರ್ಶಿ ಗುರುರಾಜ ದೇಸಾಯಿ ಮತ್ತು ಡಿ.ವೈ.ಎಫ್.ಐ. ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಬಸವರಾಜ ಪೂಜಾರ್ ಮಾತನಾಡಿ ಹಾಸ್ಟೆಲ್ ನೌಕರರ ಹೋರಾಟಕ್ಕೆ ತಮ್ಮ ಸಂಘಟನೆಗಳ ಬೆಂಬಲವನ್ನು ಘೋಷಿಸಿದರು.



ಸಂಜೆ ಸುಮಾರು 7 ಗಂಟೆಗೆ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಶ್ರೀ ಲಕ್ಷ್ಮಿ ನಾರಾಯಣರವರು ಧರಣಿ ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರ ಸಮಸ್ಯೆಗಳನ್ನು ಆಲಿಸಿದರಲ್ಲದೆ ಮನವಿಯನ್ನು ಸ್ವೀಕರಿಸಿ ಬೇಡಿಕೆಗಳ ಕುರಿತು ಚರ್ಚಿಸಲು ಒಂದು ಸಭೆಯನ್ನು ಕರೆಯುವ ಭರವಸೆಯನ್ನು ನೀಡಿದರು. ಬೆಳಗಾವಿಯಲ್ಲಿ ನಡೆಯಲಿರುವ ವಿಧಾನ ಮಂಡಲದ ಅಧಿವೇಶನದ ಮೊದಲೇ ಸಭೆ ಕರೆಯದಿದ್ದರೆ 'ಬೆಳಗಾವಿ ಚಲೋ' ಹೋರಾಟವನ್ನು ಹಮ್ಮಿಕೊಳ್ಳಲಾಗುವುದೆಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು. ಇದರೊಂದಿಗೆ ಸಾಮೂಹಿಕ ಧರಣಿಯನ್ನು ಹಿಂಪಡೆಯಲಾಯಿತು.

JANASHAKTHI KANNADA VARA PATRIKE: Printed, Published by G.V.SRIRAMAREDDY, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027
Editor : G.V.SRIRAMA REDDY